
ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಸೆಪ್ಟೆಂಬರ್ 17 ಬುಧವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
46
ಸಂಪುಟ: 46 | ಸಂಚಿಕೆ: 151 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ಇಡಿ ವಶಕ್ಕೆ



ದಿನೇಶ್‌ಕುಮಾರ್, ಮುಡಾ ಮಾಜಿ ಆಯುಕ್ತ.



ಬೆಂಗಳೂರು, ಸೆ.16–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಈಗಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರ–ಎಂಡಿಎ)ದ ನಿವೇಶನ ಹಂಚಿಕೆ ಹಗರಣ ಸಂಬಂಧ ಪ್ರಾಧಿಕಾರದ ಮಾಜಿ ಆಯುಕ್ತ ದಿನೇಶ್‌ಕುಮಾರ್ ವಿರುದ್ಧ ಲೋಕಾಯುಕ್ತ ತನಿಖೆಗೆ ರಾಜ್ಯ ಸರ್ಕಾರ ಅನುಮತಿಸಿದ ಬೆನ್ನಲ್ಲೇ ಅವರನ್ನು ಜಾರಿ ನಿರ್ದೇಶನಾಲಯ(ಇಡಿ) ವಶಕ್ಕೆ ಪಡೆದಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಇಡಿ ಅಧಿಕಾರಿಗಳು, ಮಂಗಳವಾರ ವಿಚಾರಣೆಗೆ ಬರುವಂತೆ ದಿನೇಶ್ ಕುಮಾರ್‌ಗೆ ನೋಟಿಸ್ ನೀಡಿದ್ದರು. ಅದರಂತೆ ಬೆಂಗಳೂರಿನ ಶಾಂತಿನಗರದಲ್ಲಿನ ಇಡಿ ಕಚೇರಿಗೆ ಆಗಮಿಸಿದ್ದ ದಿನೇಶ್‌ಕುಮಾರ್ ಅವರನ್ನು ಸುದೀರ್ಘ ವಿಚಾರಣೆ ಬಳಿಕ ಅಕ್ರಮ ಹಣ ವರ್ಗಾವಣೆ ಆರೋಪದಡಿ ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದೆ ಎಂದು ಹೇಳಲಾಗಿದೆ. ಮತ್ತೊಂದು ಮೂಲದ ಪ್ರಕಾರ ದಿನೇಶ್‌ಕುಮಾರ್ ಅವರನ್ನು ಮೈಸೂರಿನಲ್ಲಿ ಬಂಧಿಸಿ ಕರೆದೊಯ್ದಿದ್ದಾರೆ ಎಂದು ತಿಳಿದುಬಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುಟುಂಬದವರಿಗೆ ಪ್ರಾಧಿಕಾರದಿಂದ 14 ಬದಲಿ ನಿವೇಶನ ನೀಡಲಾಗಿದ್ದ ಪ್ರಕರಣದೊಂದಿಗೆ 50:50ರ ಅನುಪಾತದಡಿ ಭಾರೀ ಭ್ರಷ್ಟಾಚಾರ ನಡೆದಿರುವುದು ಬಯಲಾಗಿತ್ತು. ಈ ಸಂಬಂಧ ತನಿಖೆಗೆ ನ್ಯಾಯಾಧೀಶರ ಏಕ ಸದಸ್ಯ ಆಯೋಗ ರಚಿಸಿದ ಬೆನ್ನಲ್ಲೇ ಲೋಕಾಯುಕ್ತದಲ್ಲೂ ಪ್ರಕರಣ ದಾಖಲಾಗಿತ್ತು. ಲೋಕಾಯುಕ್ತ ಪೊಲೀಸರು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವರ ವಿಚಾರಣೆ ನಡೆಸಿತ್ತು. ಕಡೆಗೆ ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಕುಟುಂಬವನ್ನು ಆರೋಪ ಮುಕ್ತಗೊಳಿಸಲಾಗಿದೆ. ಆದರೆ ಅಕ್ರಮ ಹಣ ವಹಿವಾಟು ಹಿನ್ನೆಲೆಯಲ್ಲಿ ತನಿಖೆ ಆರಂಭಿಸಿದ್ದ ಇಡಿ, ನೂರಾರು ಕೋಟಿ ಮೌಲ್ಯದ ಹಲವು ನಿವೇಶನಗಳ ಕಂದಾಯ ಪ್ರಕ್ರಿಯೆಗೆ ಬ್ರೇಕ್ ಹಾಕಿತ್ತು. ಆಯುಕ್ತರಾಗಿದ್ದ ದಿನೇಶ್ ಕುಮಾರ್ ನಕಲಿ ದಾಖಲೆಗಳನ್ನು ಬಳಸಿ ಅಕ್ರಮವಾಗಿ ನಿವೇಶನಗಳ ಮರುಹಂಚಿಕೆ ಮಾಡಿದ್ದಾರೆ. ಈ ಮೂಲಕ ಹಣ ಕೈ ಬದಲಾಗಿರುವುದು ಬ್ಯಾಂಕ್ ವಹಿವಾಟು ಹಾಗೂ ಇತರೆ ದಾಖಲೆಗಳಿಂದ ಸ್ಪಷ್ಟವಾಗಿದೆ. ಅಲ್ಲದೆ ಅವರು ಅಕ್ರಮ ಹಣದಿಂದಲೇ ಆಸ್ತಿ ಗಳಿಸಿರುವುದನ್ನು ಇಡಿ ಪತ್ತೆ ಹಚ್ಚಿದೆ ಎಂದು ಹೇಳಲಾಗುತ್ತಿತ್ತು. ಆದರೆ ಮುಡಾ ಹಗರಣ ಸಂಬಂಧ ತನಿಖೆ ಬಗ್ಗೆ ನ್ಯಾಯಾಲಯ ▶ 6ನೇ ಪುಟಕ್ಕೆ

> **“ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ಅವರನ್ನು ಇಡಿ ಬಂಧಿಸಿದೆ. ಇದು ಬಿಜೆಪಿ ಹೋರಾಟಕ್ಕೆ ಸಂದ ಜಯವಾಗಿದೆ. ಹೋರಾಟದಲ್ಲಿ ಕೈಜೋಡಿಸಿ, ಬೆಂಬಲ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ. –ಟಿ.ಎಸ್.ಶ್ರೀವತ್ಸ, ಶಾಸಕ, ಕೆ.ಆರ್.ಕ್ಷೇತ್ರ**

ಕೋಟ್ಯಾಧಿಪತಿಗಳ ಬಳಿ ಬಿಪಿಎಲ್ ಕಾರ್ಡ್ ಪತ್ತೆ!


ಬೆಂಗಳೂರು: ಕೋಟಿ, ಕೋಟಿ ಆಸ್ತಿ ಇರುವವರ ಬಳಿ ಕೂಡ ಬಿಪಿಎಲ್ ಕಾರ್ಡ್ ಇರುವುದು ಪತ್ತೆಯಾಗಿದೆ. ಹೀಗಾಗಿ ಅನರ್ಹರು ಪಡೆದಿರುವ ಬಿಪಿಎಲ್ ಕಾರ್ಡ್‌ಗಳ ಮೇಲೆ ರಾಜ್ಯ ಸರ್ಕಾರ ಹದ್ದಿನ ಕಣ್ಣಿಟ್ಟಿದ್ದು, ಆಹಾರ ಇಲಾಖೆಯಿಂದ ವಿಶೇಷ ಕಾರ್ಯಾಚರಣೆಯಲ್ಲಿ ಬಹಿರಂಗವಾಗಿದೆ. ಈ ಹಿನ್ನೆಲೆಯಲ್ಲಿ 8 ಲಕ್ಷಕ್ಕೂ ಹೆಚ್ಚು ಅಕ್ರಮವಾಗಿ ಪಡೆದಿರುವ ಬಿಪಿಎಲ್ ಕಾರ್ಡ್ ರದ್ದು ಮಾಡಲು ಮುಂದಾಗಿದೆ. 12,68,097 ಅನುಮಾನಾಸ್ಪದ ರೇಷನ್ ಕಾರ್ಡ್ ಪತ್ತೆಯಾಗಿದ್ದು, ಈ ಪೈಕಿ 8 ಲಕ್ಷ ರೇಷನ್ ಕಾರ್ಡ್ ರದ್ದಾಗುವ ಸಾಧ್ಯತೆ ಇದೆ. ಈ ಬಗ್ಗೆ ಇಲಾಖೆಯಿಂದ ಸರ್ಕಾರಕ್ಕೆ ವರದಿ ಸಲ್ಲಿಕೆ ಮಾಡಲಿದೆ. ಈ ಬಗ್ಗೆ ಸಚಿವ ಮುನಿಯಪ್ಪ ಪ್ರತಿಕ್ರಿಯಿಸಿ, ಬಿಪಿಎಲ್ ಕಾರ್ಡ್ ಬಗ್ಗೆ ಸೆಕ್ರೆಟರಿ ಮೀಟಿಂಗ್ ಮಾಡುತ್ತಿದ್ದೇನೆ. ಸುದ್ದಿಗೋಷ್ಠಿ ಮಾಡಿ ಮಾತನಾಡುತ್ತೇನೆ ಎಂದರು.

ಸಿದ್ದರಾಮಯ್ಯ ಪಾಲಿಗೆ ಕುರುಬರು ಟ್ರಂಪ್ ಕಾರ್ಡ್ ಆಗಿದ್ದಾರೆ

ಎಸ್‌ಟಿಗೆ ಸೇರಿಸುವುದು ಬರೀ ನಾಟಕ

ಸಿಎಂ ಸಿದ್ದರಾಮಯ್ಯ ವಿರುದ್ಧ ಎಂಎಲ್‌ಸಿ ಹೆಚ್.ವಿಶ್ವನಾಥ್ ಆಕ್ರೋಶ

- **ಮುಖ್ಯಮಂತ್ರಿ ಕುರ್ಚಿ ಬಳಿ ಡಿ.ಕೆ.ಶಿವಕುಮಾರ್ ಬರುತ್ತಿದ್ದಂತೆ ನಾಟಕ ಶುರು ಮಾಡಿದ್ದಾರೆ**
- **ಸಿದ್ದರಾಮಯ್ಯ ಮನಸ್ಸು ಮಾಡಿದ್ರೆ ಕುರುಬರನ್ನು ಎಂದೋ ಎಸ್‌ಟಿಗೆ ಸೇರಿಸಬಹುದಿತ್ತು**
- **ಕುರುಬರ ಬೆಳವಣಿಗೆಗೆ ಕಿಂಚಿತ್ತೂ ಕಾಳಜಿ ವಹಿಸಿಲ್ಲ; ಅಷ್ಟೇ ಏಕೆ ಹಿಂದುಳಿದ ವರ್ಗಕ್ಕೆ ಅವರ ಕೊಡುಗೆ ಶೂನ್ಯ**
- **ಅಧಿಕಾರದಲ್ಲಿದ್ದಾಗ ಒದೆಯುತ್ತಾರೆ; ಕಷ್ಟ ಬಂದಾಗ ನೆನೆಯುತ್ತಾರೆ**



ಹೆಚ್.ವಿಶ್ವನಾಥ್

ಮೈಸೂರು, ಸೆ.16(ಬಿಎಲ್‌ಯು)– ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ.ಶಿವಕುಮಾರ್ ಅವರಿಗೆ ಹಸ್ತಾಂತರ ಮಾಡದೆ ಅಧಿಕಾರದಲ್ಲಿ ಮುಂದುವರೆಯಲು ಸಿದ್ದರಾಮಯ್ಯ ಕುರುಬ ಸಮುದಾಯವನ್ನು ಟ್ರಂಪ್ ಕಾರ್ಡ್ ಆಗಿ ಬಳಸಿಕೊಳ್ಳುತ್ತಿದ್ದಾರೆ. ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವುದಾಗಿ ಅವರ ಬೆಂಬಲ ಪಡೆಯುವ ಷಡ್ಯಂತ್ರ ರೂಪಿಸಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆರೋಪಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕುರುಬ ಸಮುದಾಯದ ಬೆಳವಣಿಗೆ ಬಗ್ಗೆ ಸಿದ್ದರಾಮಯ್ಯ ಅವರಿಗೆ ಕಿಂಚಿತ್ತೂ ಕಾಳಜಿ ಇಲ್ಲ. ಆದರೆ ರಾಜಕೀಯವಾಗಿ ಸಂಕಷ್ಟ ಎದುರಾದಾಗ ಮಾತ್ರ ಈ ಸಮುದಾಯದ ಬೆಂಬಲ ಪಡೆಯುತ್ತಾರೆ. ಇಷ್ಟು ವರ್ಷದ ರಾಜಕಾರಣದಲ್ಲಿ ಸಿದ್ದರಾಮಯ್ಯ ಅವರು ಇದೇ ಕುತಂತ್ರ ಅನುಸರಿಸಿಕೊಂಡು ಬಂದಿದ್ದಾರೆ. ಸಿದ್ದರಾಮಯ್ಯರ ರಾಜಕಾರಣದ ಬೆಳವಣಿಗೆಗೆ ಕುರುಬ ಸಮುದಾಯದವರು ಮೆಟ್ಟಿಲಾಗಿದ್ದಾರೆ ಎಂದು ಆಪಾದಿಸಿದರು.


ಸಿದ್ದರಾಮಯ್ಯ ವಿರೋಧಿಸಿದ್ದರು: ಹಲವು ವರ್ಷಗಳ ಹಿಂದೆ ಕುರುಬ ಸಮುದಾಯವನ್ನು ಎಸ್‌ಟಿಗೆ ಟ್ಯಾಗ್ ಮಾಡಲು ಸ್ವತಃ ಸಿದ್ದರಾಮಯ್ಯ ಅವರೇ ವಿರೋಧ ವ್ಯಕ್ತಪಡಿಸಿದರು. ಇದುವರೆಗೆ ಕುರುಬರಿಗೆ ಸಿದ್ದರಾಮಯ್ಯ ಯಾವುದೇ ಕೊಡುಗೆ ನೀಡಿಲ್ಲ. ಈ ಸತ್ಯ ಅರಿಯದ ಕುರುಬರು ಅವರನ್ನು ಬೆಂಬಲಿಸುತ್ತಿದ್ದಾರೆ. ಇಂಗ್ಲಿಷ್ ಸಿನಿಮಾ ನೋಡುವಾಗ ಏನೂ ಅರ್ಥವಾಗದೆ ಇದ್ದರೂ ಶಿಳ್ಳೆ ಹೊಡೆಯುವಂತೆ ಸಿದ್ದರಾಮಯ್ಯ ಭಾಷಣಕ್ಕೆ ಶಿಳ್ಳೆ, ಚಪ್ಪಾಳೆ ಹೊಡೆಯುತ್ತಾರೆ ಎಂದು ವಿಶ್ವನಾಥ್ ಗೇಲಿ ಮಾಡಿದರು. ▶ 6ನೇ ಪುಟಕ್ಕೆ

ಸಿದ್ದರಾಮಯ್ಯ ಬೆಂಬಲಿಸಿದರೆ ಕನಕ ಗುರು ಪೀಠದ ಸ್ವಾಮೀಜಿ ತಲೆದಂಡವಾಗುತ್ತೆ...!

ಸಿಎಂ ಸ್ಥಾನವನ್ನು ಡಿ.ಕೆ.ಶಿವಕುಮಾರ್‌ಗೆ ಹಸ್ತಾಂತರಿಸುವ ವಿರುದ್ಧ ಸಿದ್ದರಾಮಯ್ಯ ರೂಪಿಸುವ ಹೋರಾಟದಲ್ಲಿ ಕಾಗಿನೆಲೆ ಕನಕ ಗುರುಪೀಠದ ಮಠಾಧೀಶರು ಭಾಗಿಯಾದರೆ ಅವರ ತಲೆದಂಡವಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಎಚ್ಚರಿಸಿದ್ದಾರೆ. ಡಿ.ಕೆ.ಶಿವಕುಮಾರ್‌ಗೆ ಸಿಎಂ ಸ್ಥಾನ ಹಸ್ತಾಂತರ ಮಾಡದಂತೆ ಕೆಲವೇ ದಿನದಲ್ಲಿ ಹೋರಾಟ ಆರಂಭವಾಗಲಿದೆ. ಇದರ ಹಿಂದೆ ನಿಲ್ಲುವ ಸಿದ್ದರಾಮಯ್ಯ, ಹೋರಾಟದಲ್ಲಿ ಭಾಗಿಯಾಗುವಂತೆ ಕನಕ ಗುರುಪೀಠದ ಮಠಾಧೀಶರನ್ನು ಛೂ ಬಿಡುತ್ತಾರೆ. ಸಿದ್ದರಾಮಯ್ಯ ಅವರ ಮಾತಿಗೆ ಕಟಿ ಬದ್ದರಾಗಿ ಕಾಗಿನೆಲೆ ಕನಕ ಗುರುಪೀಠದ ಮಠಾಧೀಶರು ಹೋರಾಟ ಮಾಡಿದರೆ ಒಂದು ಕ್ಷಣವೂ ಆ ಸ್ಥಾನದಲ್ಲಿ ಮುಂದುವರೆಯಲು ಸ್ವಾಮೀಜಿಗೆ ನಾವು ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಕನಕ ಗುರುಪೀಠಕ್ಕೆ ಮಠಾಧೀಶರನ್ನಾಗಿ ಮಾಡಿದ್ದು ನಾನೇ ಹೊರತು ಸಿದ್ದರಾಮಯ್ಯ ಅಲ್ಲ. ಈ ಸತ್ಯ ಸಂಗತಿ ನೆನಪಿನಲ್ಲಿಟ್ಟುಕೊಳ್ಳಿ. ಕನಕ ಗುರುಪೀಠಕ್ಕೂ ಸಿದ್ದರಾಮಯ್ಯರಿಗೂ ಯಾವುದೇ ಸಂಬಂಧವಿಲ್ಲ. ಮಠಾಧಿಪತಿಗಳು ಸಿದ್ದರಾಮಯ್ಯ ಅಥವಾ ಕಾಂಗ್ರೆಸ್ ಪಕ್ಷದ ಜೀತದಾಳುಗಳಲ್ಲ. ಈ ವಾಸ್ತವತೆ ತಿಳಿದು ಸ್ವಾಮೀಜಿ ರಾಜಕಾರಣದಿಂದ ದೂರ ಇರಬೇಕು. ಶೃಂಗೇರಿ ಸೇರಿದಂತೆ ಹಲವು ಮಠಗಳು ರಾಜಕಾರಣದಿಂದ ಅಂತರ ಕಾಯ್ದುಕೊಂಡಂತೆ ಕನಕ ಗುರು ಪೀಠದ ಸ್ವಾಮೀಜಿ ಕೂಡ ರಾಜಕೀಯದಿಂದ ದೂರ ಇರಬೇಕು. ಸಂಕಷ್ಟದಿಂದ ಪಾರಾಗಿ ತನ್ನ ರಾಜಕಾರಣದ ಹಾದಿ ಸುಗಮ ಮಾಡಿಕೊಳ್ಳಲು ಸಿದ್ದರಾಮಯ್ಯ ತಂತ್ರ ಎಣೆದಿದ್ದಾರೆ. ಇದಕ್ಕೆ ಕುರುಬ ಸಮುದಾಯದವರು ಬಲಿಯಾಗಬಾರದು ಎಂದು ವಿಶ್ವನಾಥ್ ಹೇಳಿದರು.





ಸೆ.20ರಂದು ಬಿವಿಬಿಯಲ್ಲಿ ಶಮಾ ಕೃಷ್ಣಾ, ತಂಡದಿಂದ ಭರತನಾಟ್ಯ: ನೃತ್ಯ ವೈಭವ





ಮೈಸೂರು, ಸೆ.16– ಬೆಂಗಳೂರು ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಬೆಂಗಳೂರು–ಮೈಸೂರು ಭಾರತೀಯ ವಿದ್ಯಾ ಭವನದ ಸಂಯುಕ್ತ ಆಶ್ರಯದಲ್ಲಿ 151ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸೆ.20ರಂದು ಸಂಜೆ 6 ಗಂಟೆಗೆ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಶ್ರದ್ಧಾ ನೃತ್ಯ ತಂಡ ಅರ್ಪಿಸುವ ಭರತನಾಟ್ಯ: ನೃತ್ಯ ವೈಭವ ಕಾರ್ಯಕ್ರಮವನ್ನು ಶ್ರೀಮತಿ ಶಮಾ ಕೃಷ್ಣ ಮತ್ತು ಅವರ ಶಿಷ್ಯರು ಪ್ರಸ್ತುತಪಡಿಸಲಿದ್ದಾರೆ.

ಮೈಸೂರಿನ ಭಾರತೀಯ ವಿದ್ಯಾ ಭವನದಲ್ಲಿ ಅನುಹಿತ, ರಂಜಿತಾ, ಶ್ರೀವಿದ್ಯಾ, ಶ್ರೀನಿಧಿ, ಪ್ರತಿಷ್ಠಾ, ಅನನ್ಯಾ, ಕೀರ್ತಿ, ಇಂಚರ, ಶಾರದ, ಪ್ರಾರ್ಥನಾ, ರಕ್ಷಾ, ಪ್ರಿಯಾ, ಅನುಷಾ, ಅಕ್ಷಯರಮ್ಯ, ವಿದಿತಾ, ರಸಜ್ಞ, ಋಷಿ, ವಿಜಯಲಕ್ಷ್ಮಿ ಮತ್ತು ಸ್ಮಿತಾ ಅವರೊಂದಿಗೆ ಶಾಮಕೃಷ್ಣ ಕಾರ್ಯಕ್ರಮ ನೀಡಲಿದ್ದಾರೆ.

ಕೆ.ಶಮಾ ಕೃಷ್ಣ : ಬೆಂಗಳೂರಿನ ಶಮಾ ಭಾರತದ ಶಾಸ್ತ್ರೀಯ ನೃತ್ಯ ಪ್ರದರ್ಶನ ಪ್ರಮುಖ ಕಲಾವಿದರಲ್ಲಿ ಒಬ್ಬರು.

ಭರತನಾಟ್ಯದಲ್ಲಿ ಪ್ರಾವೀಣ್ಯತೆಯ ಪರೀಕ್ಷೆಯನ್ನು ಪೂರ್ಣಗೊಳಿಸಿರುವ ಅವರು, ತಂಜಾವೂರಿನ ಶಾಸ್ತ್ರ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಬೆಂಗಳೂರು ದೂರದರ್ಶನ ಕೇಂದ್ರದ ಎ ದರ್ಜೆಯ ಕಲಾವಿದೆ ಮತ್ತು ದೂರದರ್ಶನದಲ್ಲಿ ಹಲವಾರು ಪ್ರದರ್ಶನಗಳನ್ನು ನೀಡಿದ್ದಾರೆ. ಅವರು ಐಸಿಸಿಆರ್‌ನ ಎಂಪನೇಲ್ಡ್ ಕಲಾವಿದೆಯೂ ಆಗಿದ್ದಾರೆ. ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯಿಂದ ಹಿರಿಯ ಮಟ್ಟದ ವಿದ್ಯಾರ್ಥಿ ವೇತನ ಪಡೆದಿರುವ ಅವರು, ಹಲವಾರು ರಾಷ್ಟ್ರೀಯ ಮಟ್ಟದ ನೃತ್ಯ ಸ್ಪರ್ಧೆಗಳಲ್ಲಿ ಗೆದ್ದಿದ್ದಾರೆ. ಶಮಾ ದಿವಂಗತ ಗುರು ಸುಂದರಿ ಸಂತಾನಂ ಅವರಿಂದ ನಾಟ್ಯ ಶಾಸ್ತ್ರದ 108 ಕರಣಗಳಲ್ಲಿ ತರಬೇತಿ ಪಡೆದಿದ್ದಾರೆ. ಪದ್ಮವಿಭೂಷಣ ಗುರು ಡಾ.ಪದ್ಮ ಸುಬ್ರ ಮಣಿಯಂ ಅವರಿಂದ ಭರತನಾಟ್ಯ ಕಲಿಯುತ್ತಿದ್ದಾರೆ.

ದಸರಾ ಯಶಸ್ಸಿನಲ್ಲಿ ಹೋಟೆಲ್ ಮಾಲೀಕರ ಪಾತ್ರ ಹೆಚ್ಚಿರುತ್ತದೆ

ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಸಲಹೆ

ಮೈಸೂರು,ಸೆ.16(ಜಿಎ)–ಪ್ರತಿ ಬಾರಿ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಯಶಸ್ವಿಯಾಗಲು ಹೋಟೆಲ್ ಮಾಲೀಕರು ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮೀಜಿ ತಿಳಿಸಿದರು.

ಮೈಸೂರಿನ ಬಿ.ಎನ್.ರಸ್ತೆಯ ಪೈ ವಿಸ್ತಾದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ 30ನೇ ವಾರ್ಷಿಕೋತ್ಸವ ಹಾಗೂ ಹಿರಿಯ ಹೋಟೆಲ್ ಉದ್ಯಮಿಗಳಿಗೆ ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೋಟೆಲ್ ಮಾಲೀಕರು ದಸರಾ ಮಹೋತ್ಸವಕ್ಕೆ ದೇಶ–ವಿದೇಶಗಳಿಂದ ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ಅತ್ಯುತ್ತಮ ಆತಿಥ್ಯ ನೀಡುವ ಮೂಲಕ ದಸರಾ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿಕೊಂಡಿದ್ದಾರೆ. ದಸರಾದ ಯಾವುದೇ ಕಾರ್ಯಕ್ರಮ ನೋಡಿಕೊಂಡು ಬರುವವರಿಗೆ ತಡರಾತ್ರಿವರೆಗೂ ರುಚಿ, ಶುಚಿತ್ವದ ಆಹಾರ ನೀಡುವ ಮೂಲಕ ಮೈಸೂರು ಆತಿಥ್ಯ ಪ್ರಪಂಚದಾದ್ಯಂತ ಹೆಸರು ವಾಸಿಯಾಗಿದೆ ಎಂದು ಮೈಸೂರು ಹೋಟೇಲ್ ಮಾಲೀಕರ ಕೆಲಸವನ್ನು ಶ್ಲಾಘಿಸಿದರು.

ದಸರಾ ಮಾತ್ರವಲ್ಲದೆ ಇಂದು ಹೋಟೆಲ್ ಮಾಲೀಕರು ಗುಣಮಟ್ಟದ ಆಹಾರ ನೀಡುವ ಮೂಲಕ ಭಾರತದ ಆರೋಗ್ಯ ಸ್ಥಿತಿಗೆ ಕೊಡುಗೆ ನೀಡುತ್ತಿದ್ದಾರೆ. ಆತಿಥ್ಯ ಶಿಸ್ತಿನಿಂದ ಕೂಡಿದರೆ, ಸ್ವಾಸ್ಥ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಲಿದೆ. ಹೋಟೆಲ್ ಒಂದು ದಿನ ಬಂದ್ ಮಾಡಿದರೆ, ಸರ್ಕಾರ ಊಟ ನೀಡಲು ಸಾಧ್ಯವಿಲ್ಲ. ಸರ್ಕಾರದ ಬದಲು ಹೋಟೆಲ್ ಮಾಲೀಕರು ಆ ಪಾಲುದಾರಿಕೆ ವಹಿಸಿಕೊಂಡಿದ್ದಾರೆ. ಉತ್ತಮವಾಗಿ ನಿರ್ವಹಣೆ ಮಾಡುತ್ತಿದ್ದಾರೆ. ಹೋಟೆಲ್ ಮಾಲೀಕರ ಸಂಘದ ಉತ್ತಮ ಕೆಲಸವನ್ನು ಗುರುತಿಸಬೇಕು ಎಂದರು.

ಹೋಟೆಲ್ ಮಾಲೀಕರು ತಮ್ಮ ಕೆಲಸದ ನಡುವೆ ಸಮಾಜ ಸೇವೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಅದರಲ್ಲಿ ಇಂದು ಮೂವರು ಹಿರಿಯರನ್ನು ಆಯ್ಕೆ ಮಾಡಿರುವವರು ಸ್ಫೂರ್ತಿ ತುಂಬುವ ವ್ಯಕ್ತಿಗಳಾಗಿದ್ದಾರೆ. ಅವರ ಸೇವೆ ಹೀಗೆ ನಿರಂತರವಾಗಿ ಮುಂದು ವರೆಯಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಹೋಟೆಲ್ ಉದ್ಯಮಿಗಳಾದ ಬಿ.ವಿಜಯ ಲಕ್ಷ್ಮಿ ಹಯವದನ ಆಚಾರ್, ಬಿ.ಬಾಲ ಕೃಷ್ಣಭಟ್ ಹಾಗೂ ಡಿ.ಚಂದ್ರಶೇಖರ್ ಶೆಟ್ಟಿ ಅವರಿಗೆ ಸಹಕಾರ ಮಿತ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ಹಾಗೂ ಉಪಾಧ್ಯಕ್ಷರಾದ ಆನಂದ ಎಂ.ಶೆಟ್ಟಿ, ಜಿಲ್ಲಾ ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಉಪಸ್ಥಿತರಿದ್ದರು.



ಮೈಸೂರಿನ ಬಿ.ಎನ್.ರಸ್ತೆಯ ಹೋಟೆಲ್ ಪೈ ವಿಸ್ತಾದಲ್ಲಿ ಏರ್ಪಡಿಸಿದ್ದ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ 30ನೇ ವಾರ್ಷಿಕೋತ್ಸವದಲ್ಲಿ ಹಿರಿಯ ಹೋಟೆಲ್ ಉದ್ಯಮಿಗಳಿಗೆ ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್‌ಗೆ ಲಾಗೈಡ್ ಬಳಗದಿಂದ ಶುಭಾಶಯ...



ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಬಳಗದ ವತಿಯಿಂದ ಮೈಸೂರಿನ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಕೇಕ್ ಕತ್ತರಿಸಿ, ಮೈಸೂರು ಪೇಟ ಹಾಕಿ, ಶಾಲು ಹೊದಿಸಿ, ನೆನಪಿನ ಕಾಣಿಕೆ ನೀಡಿ, ಅಭಿನಂದಿಸಿ, ಶುಭಾಶಯ ಕೋರಲಾಯಿತು. ಲಾಗೈಡ್ ಗೌರವ ಸಂಪಾದಕ, ಹಿರಿಯ ವಕೀಲ ಎಚ್.ಎನ್.ವೆಂಕಟೇಶ್, ವಕೀಲರ ಸಂಘದ ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಹಿರಿಯ ವಕೀಲರಾದ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ಗಂಗಾಧರ್ ಶ್ರೀನಿವಾಸ್, ಲೋಕೇಶ್, ರಾಜೇಶ್, ಸುಲೋಚನಾ ಇತರರಿದ್ದರು.

ನಾಳೆ ಉದ್ಬೂರು ಗೇಟ್ ಬಳಿ ವಿಷ್ಣು ಸ್ಮಾರಕದಲ್ಲಿ ವಿಷ್ಣುವರ್ಧನ್ ಜನ್ಮದಿನ ಆಚರಣೆ

ಮೈಸೂರು,ಸೆ.16(ಜಿಎ)–ಡಾ.ವಿಷ್ಣುವರ್ಧನ್ ಸ್ಮಾರಕ ಅಭಿಮಾನಿಗಳ ಒಕ್ಕೂಟದಿಂದ ಸೆ.18ರಂದು ಬೆಳಿಗ್ಗೆ 10ಕ್ಕೆ ಉದ್ಬೂರು ಗೇಟ್ ಬಳಿಯ ವಿಷ್ಣುವರ್ಧನ್ ಸ್ಮಾರಕ ಆವರಣದಲ್ಲಿ ವಿಷ್ಣುವರ್ಧನ್ ಜನ್ಮದಿನಾಚರಣೆ ಆಯೋಜಿಸಲಾಗಿದೆ ಎಂದು ಒಕ್ಕೂಟದ ಗೌರವಾಧ್ಯಕ್ಷ ಎಂ.ಡಿ.ಪಾರ್ಥಸಾರಥಿ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರತ್ನ ಪ್ರಶಸ್ತಿ ದೊರೆತಿರುವುದಕ್ಕೆ ಸಂಭ್ರಮಾಚರಣೆ ನಡೆಯಲಿದ್ದು, ಅಂದು ಬೆಳಿಗ್ಗೆ 10ಕ್ಕೆ ಭಾರತಿ ವಿಷ್ಣುವರ್ಧನ್ ಕುಟುಂಬದವರು ಪೂಜೆ ನೆರವೇರಿಸುವರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಮುಖಂಡ ಎಂ.ಕೆ.ಸೋಮಶೇಖರ್ ಪಾಲ್ಗೊಳ್ಳುವರು. ಬೆಳಿಗ್ಗೆ 11ರಿಂದ ವಿಷ್ಣು ಗ್ರೂಪ್ ತಂಡವು ವಿಷ್ಣುವರ್ಧನ್ ನಟನೆಯ ಚಿತ್ರಗಳ ಗೀತ ಗಾಯನ ನಡೆಸುವರು. ಸುಮಾರು 5,000 ಜನಕ್ಕೆ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಗೌರವಾಧ್ಯಕ್ಷ ಟಿ.ವಿ.ಸುರೇಶ್, ಅಧ್ಯಕ್ಷ ಸಿದ್ದಪ್ಪ, ಉಪಾಧ್ಯಕ್ಷ ಸಂತೋಷ್, ಖಜಾಂಚಿ ಎಸ್.ಆರ್. ರಾಜು, ಉಮೇಶ್, ಮಹದೇವ್ ಉಪಸ್ಥಿತರಿದ್ದರು.

ಅಭಿನಂದನೆ...



ಮಾಜಿ ಶಾಸಕ ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರು ನಗರ (ಜಿಲ್ಲಾ) ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆಯಿಂದ ಸನ್ಮಾನಿಸಲಾಯಿತು. ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಪ್ರಧಾನ ಕಾರ್ಯದರ್ಶಿ ಮೋಹನ್ ಕುಮಾರ್, ಕಾರ್ಯದರ್ಶಿ ಮಂಜುನಾಥ್, ಸರ್ದಾರ್ ಮುಖೇಶ್, ರಂಗಪ್ಪಗೌಡ ಮತ್ತಿತರರಿದ್ದರು.

ಶುಭಾಶಯ...



ಮೈಸೂರು ತಾಲೂಕು ಜಯಪುರ ವ್ಯಾಪ್ತಿಯ ಬರಡನಪುರದ ಗುರುಮಹಾಂತೇಶ್ವರ ದಾಸೋಹ ಮಠದ ಕಿರಿಯ ಶ್ರೀಗಳಾದ ಚನ್ನಬಸವ ಸ್ವಾಮೀಜಿಯವರ ಜನ್ಮದಿನೋತ್ಸವ ಪ್ರಯುಕ್ತ ಸಮಾಜ ಸೇವಕ ಎಸ್.ಶ್ರೀಕಾಂತ್ ಶ್ರೀಮಠಕ್ಕೆ ಭೇಟಿ ನೀಡಿ, ಸ್ವಾಮೀಜಿಯವರಿಗೆ ಶಾಲು ಹೊದಿಸಿ, ಜನ್ಮದಿನದ ಶುಭಾಶಯ ಕೋರಿ, ಕಿರಿಯ ಶ್ರೀಗಳಿಂದ ಆಶೀರ್ವಾದ ಪಡೆದರು. ಮಠದ ಪೀಠಾಧ್ಯಕ್ಷರಾದ ಪರಶಿವಮೂರ್ತಿ ಸ್ವಾಮೀಜಿ ಉಪಸ್ಥಿತರಿದ್ದರು.

ಮುಂದಿನ ಪೀಳಿಗೆಗೆ ಅರೆ ಭಾಷೆ ಸಂಸ್ಕೃತಿ ಪರಿಚಯಿಸಲು ಕರೆ

ಮೈಸೂರು,ಸೆ.16–ಅರೆ ಭಾಷೆ ಸಂಸ್ಕೃತಿ ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ, ಅವರು ಅವುಗಳನ್ನು ಅನುಸರಿಸಿ ಮುನ್ನಡೆಯುವಂತೆ ಹಿರಿಯರು ಪ್ರೇರಣೆ ನೀಡಬೇಕೆಂದು ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸದಾನಂದ ಮಾವಾಜಿ ಕರೆ ನೀಡಿದರು.

ಮೈಸೂರಿನ ಕೊಡಗು ಗೌಡ ಸಮಾಜದಲ್ಲಿ ಏರ್ಪಡಿಸಿದ್ದ ಕೈಲ್ ಮುಹೂರ್ತ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಯುವ ಪೀಳಿಗೆ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಪ್ರೀತಿ ಬೆಳೆಸಿಕೊಂಡಾಗ ಮಾತ್ರ ಸಂಸ್ಕೃತಿ ಉಳಿಯಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಅರೆ ಭಾಷೆ ಬೆಳವಣಿಗೆಗೆ ಸಂಬಂಧಿಸಿದಂತೆ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಅಕಾಡೆಮಿಯಿಂದ ಸಾಧ್ಯವಾದಷ್ಟು ಅನುದಾನ ಕೊಡಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ ಮಾತನಾಡಿ, ನಮ್ಮ ಸಾಂಪ್ರದಾಯಿಕ ಆಚರಣೆಗಳನ್ನು ಕೇವಲ ಸಾಂಕೇತಿಕವಾಗಿ ಮಾತ್ರ ಆಚರಣೆ ಮಾಡದೆ, ಮನೆ ಮನೆಗಳಲ್ಲೂ ಆಚರಣೆ ಮಾಡಿದಾಗ ಸಂಸ್ಕೃತಿ ಗಟ್ಟಿಯಾಗಿ ಉಳಿಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಮೈಸೂರು ಗೌಡ ಸಮಾಜದ ಕಾರ್ಯ ಶೈಲಿಯನ್ನು ಪ್ರಶಂಸಿಸಿದ ಅವರು, ಎಲ್ಲಾ ಸಮಾಜಗಳು ಇದೇ ಮಾದರಿಯಲ್ಲಿ ಕಾರ್ಯ ಪ್ರವೃತ್ತರಾಗುವ ಅಗತ್ಯವಿದೆ ಎಂದರು.

ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಚಂದ್ರಾವತಿ ಬಡ್ಡಡ್ಕ ಮಾತನಾಡಿ, ಅರೆಭಾಷೆ ಉಳಿಸಿ, ಬೆಳೆಸಲು ಅಕಾಡೆಮಿಯು ಶಾಲಾ ಕಾಲೇಜುಗಳಲ್ಲಿ ಅರೇ ಭಾಷೆ ಸಂಘಗಳನ್ನು ಸ್ಥಾಪಿಸುವ ಮೂಲಕ ಪ್ರಯತ್ನಪಡುತ್ತಿದೆ, ಅಲ್ಲದೆ ವಿವಿಧ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಬೆಳೆಸಲು ಪ್ರಯತ್ನಪಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರದಿಂದ ಮೈಸೂರಿನಲ್ಲೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ಕೊಡಗು ಗೌಡ ಸಮಾಜದ ಅಧ್ಯಕ್ಷ ಕೊಂಬಾರನ ಬಸಪ್ಪ ಮಾತನಾಡಿ, ಪ್ರಾಚೀನ ಕಾಲದಲ್ಲಿ ಕೊಡಗಿನಲ್ಲಿ ಕೃಷಿ ಚಟುವಟಿಕೆ ಮುಗಿದ ನಂತರ ಆಚರಿಸುತ್ತಿದ್ದ ಕೈಲು ಮುಹೂರ್ತ ಹಬ್ಬದ ವೈಶಿಷ್ಟತೆ ವಿವರಿಸಿದರು.

ಮೈಸೂರು ಕೊಡಗು ಗೌಡ ಸಮಾಜದ ಕಾರ್ಯದರ್ಶಿ ಪೊನ್ನೆಟಿ ನಂದ ಸ್ವಾಗತಿಸಿದರೆ, ಮೈಸೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ನಡುವಟ್ಟಿರ ಗೀತಾ ಲಕ್ಷ್ಮಣ ವಂದಿಸಿದರು. ಸಮಾಜದ ನಿರ್ದೇಶಕ ಪಟ್ಟಡ ಶಿವಕುಮಾರ್ ನಿರೂಪಿಸಿದರು. ಮೈಸೂರು ಕೊಡಗು ಗೌಡ ಸಮಾಜದ ಪದಾಧಿಕಾರಿಗಳಾದ ಕುದುಪಜೆ ಚಂದ್ರಶೇಖರ್, ನಡುವಟ್ಟಿರ ಲಕ್ಷ್ಮಣ್, ನಡುಮನೆ ಚಂಗಪ್ಪ, ನಿರ್ದೇಶಕರಾದ ಹೊಸೂರು ರಾಘವ, ಕುಂಟುಪುಣಿ ರಮೇಶ್, ಕೊಂ ಬಾರನ ಸುಬ್ಬಯ್ಯ, ಪಾಣತ್ತಲೆ ವಸಂತ್, ತೋಟಂ ಬೈಲು ಇಂದಿರಾ, ಚಪ್ಪೆರ ಯಮುನಾ, ಕುಂಟುಪುಣಿ ಶೀಲ ಉಪಸ್ಥಿತರಿದ್ದರು.



ಮೈಸೂರಿನ ಕೊಡಗು ಗೌಡ ಸಮಾಜದಲ್ಲಿ ಏರ್ಪಡಿಸಿದ್ದ ಕೈಲ್ ಮುಹೂರ್ತ ಸಮಾರಂಭವನ್ನು ಕರ್ನಾಟಕ ಅರೇ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸದಾನಂದ ಮಾವಾಜಿ ಉದ್ಘಾಟಿಸಿದರು.

ಸೆ.22ರಿಂದ ಶ್ರೀ ಲಕ್ಷ್ಮಿ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ ಕಾರ್ಯಕ್ರಮ

ಮೈಸೂರು,ಸೆ.16(ಜಿಎ)–ಮೈಸೂರಿನ ನಾಗನಹಳ್ಳಿಯಲ್ಲಿ ಸೆ.22ರಿಂದ 24ರವರೆಗೆ ಶ್ರೀ ಲಕ್ಷ್ಮಿ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ ಹಾಗೂ ವಿವಿಧ ಕಾರ್ಯಕ್ರಮ ನಡೆಯಲಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶ್ರೀ ಲಕ್ಷ್ಮಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಎನ್.ಎಂ.ಜಗದೀಶ್‌ಗೌಡ ಈ ವಿಷಯ ತಿಳಿಸಿ, ಸೆ.22ರಂದು ಬೆಳಿಗ್ಗೆ 8ರಿಂದ ಪೂಜಾ ಕಾರ್ಯಗಳು ಆರಂಭವಾಗಲಿದೆ. ಸೆ.24ರಂದು ಮಧ್ಯಾಹ್ನ 12ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ನೆರವೇರಿಸುವರು. ವಿವಿಧ ಮಠಾಧೀಶರು, ರಾಜಕೀಯ ಮುಖಂಡರು ಪಾಲ್ಗೊಳ್ಳುವರು. ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಲಿದೆ ಎಂದರು. ಸುದಿಗೋಷ್ಠಿಯಲ್ಲಿ ಕಾರ್ಯದರ್ಶಿ ಎನ್.ಎಸ್.ಶ್ರೀಕಂಠು ಪಣ್ಣೇಗಾರ್, ಟ್ರಸ್ಟಿಗಳಾದ ಎನ್.ಕೆ.ಮಹದೇವಪ್ಪ, ಎನ್.ಎಸ್.ಸಿಂಗಪ್ಪ, ನಾ.ನಾ.ಮಹೇಶ್, ವೇಣು, ಯಶೋಧಾ ಉಪಸ್ಥಿತರಿದ್ದರು.

ನಿಧನ

ಡಾ.ಎಚ್.ಸಿ.ಚನ್ನೇಗೌಡ



ಮೈಸೂರು, ಸೆ. 16– ಮೈಸೂರಿನ ಹೆಬ್ಬಾಳ್ ಮೊದಲ ಹಂತದ 7ನೇ ಮೇನ್ ನಿವಾಸಿ, ನಿವೃತ್ತ ಮೂಳೆ ಮತ್ತು ಕೀಲು ತಜ್ಞ ಡಾ.ಎಚ್.ಸಿ.ಚನ್ನೇಗೌಡ (79) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಮಂಡ್ಯ ಮತ್ತು ಹುಣಸೂರಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿದ್ದರು. ನಿವೃತ್ತಿ ಬಳಿಕ ಮೈಸೂರಿನಲ್ಲಿ ಕ್ಲಿನಿಕ್ ಪ್ರಾರಂಭಿಸಿ, ಕಡಿಮೆ ಖರ್ಚಿನಲ್ಲಿ ಬಡವರಿಗೆ ಚಿಕಿತ್ಸೆ ನೀಡುತ್ತಿದ್ದರು. ಮೃತರಿಗೆ ಪತ್ನಿ ಯಶೋಧ, ಇಬ್ಬರು ಪುತ್ರರು, ಓರ್ವ ಪುತ್ರಿ, ಐವರು ಮೊಮ್ಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆ ಹೆಬ್ಬಾಳ್ ಸ್ಮಶಾನದಲ್ಲಿ ಸಂಜೆ ನೆರವೇರಿತು.

ರುಕ್ಮಿಣಿ



ಮೈಸೂರಿನ ಹೆಬ್ಬಾಳಿನ ಮಾದೇಗೌಡ ಸರ್ಕಲ್ ನಿವಾಸಿ ರುಕ್ಮಿಣಿ (52) ಭಾನುವಾರ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೊಸಕೋಟೆ ರಾಜೇಶ್



ಮೈಸೂರಿನ ಶ್ರೀ ನಟರಾಜ ಪ್ರತಿಷ್ಠಾನದ ತಿ.ನರಸೀಪುರ ತಾಲೂಕು ಚಿದರವಳ್ಳಿಯ ಶ್ರೀ ಗೌರಿಶಂಕರ ಪ್ರೌಢಶಾಲೆಯ ಕನ್ನಡ ಸಹ ಶಿಕ್ಷಕ ಹೊಸಕೋಟೆ ರಾಜೇಶ್ (42) ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಓರ್ವ ಪುತ್ರ, ಸಹೋದರ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಸ್ವಗ್ರಾಮ ಹೊಸಕೋಟೆಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ವರ್ಗ ತಿಳಿಸಿದೆ.

ಶ್ರೀಮತಿ ವಿಜಯಲಕ್ಷ್ಮಿ



ಮೈಸೂರಿನ ಸರಸ್ವತಿಪುರಂ ನಿವಾಸಿ ಶ್ರೀಮತಿ ವಿಜಯಲಕ್ಷ್ಮಿ (54) ಅವರು ಮಂಗಳವಾರ ನಿಧನರಾದರು. ಮೃತರು ಪತಿ ರಾಮಸ್ವಾಮಿ, ಪುತ್ರ ಮನೀತ್ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ಬುಧವಾರ) ಮಧ್ಯಾಹ್ನ ಜಯನಗರದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.09.2025 ಬುಧವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗ್ಯಾಸ್ಟ್ರೈಟಿಸ್ (ಆಮ್ಲ ಪಿತ್ತ) ಕುರಿತು ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ಬಂಜೆತನ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಿಗಾಗಿ ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9.30 ರಿಂದ.
- **ನಿರಂತರ ಫೌಂಡೇಷನ್ :** ಸಹಜ ತರಬೇತಿ ಶಿಬಿರಾರ್ಥಿಗಳಿಂದ ಜನಗಣಮನ ನಾಟಕ ಪ್ರದರ್ಶನ, ನಿರ್ದೇಶನ : ಎಂ.ಎಂ. ಸುಗುಣ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತೂಮಾಟಿ ದೊಣಪ್ಪ ಶತಜಯಂತಿ ಸಮಿತಿ :** ತೂಮಾಟಿ ದೊಣಪ್ಪ ಸಾಹಿತ್ಯ ಬಹುಮುಖ ಸೇವೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ತೂಮಾಟಿ ಸುಧಾಕರ್, ಪ್ರೊ.ಚಿಗಿಚರ್ಲ ಕೃಷ್ಣಾರೆಡ್ಡಿ, ಕರಾಮುವಿವಿ ಡೀನ್ ಪ್ರೊ.ಎಂ. ರಾಮನಾಥಂ ನಾಯುಡು, ಕುಲಸಚಿವರಾದ ಪ್ರೊ.ಎಸ್.ಕೆ.ನವೀನ್‌ಕುಮಾರ್, ಡಾ.ಸಿ.ಎಸ್. ಆನಂದಕುಮಾರ್, ಹಣಕಾಸು ಅಧಿಕಾರಿ ಪ್ರೊ.ಎಸ್.ನಿರಂಜನ್‌ರಾಜ್, ಕರಾಮುವಿವಿ ಡೀನ್ ಡಾ. ಎನ್.ಆರ್. ಚಂದ್ರೇಗೌಡ, ಸ್ಥಳ: ವ್ಯವಸ್ಥಾಪನಾ ಮಂಡಳಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ
- **ಟ್ವಿನ್ಸ್ ಸಿಎಸ್‌ಸಿ ಡಿಜಿಟಲ್ ಸೇವಾ ಕೇಂದ್ರ :** ಮಾವುತ ಮತ್ತು ಕಾವಾಡಿಗರ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮ, ಮುಖ್ಯ ಅತಿಥಿಗಳು : ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಪ್ರಭುಗೌಡ, ಶಾಕಿಬ್ ಅಹ್ಮದ್, ವಿ. ಮಹೇಶ್, ದಿನಕರ್, ಶ್ರೀಮತಿ ಆರ್. ಯಶೋಧ, ಆರ್ಯನ್ ಗಂಧದಗುಡಿ, ಸ್ಥಳ: ತೋಡಿ ಸೋಮೇಶ್ವರ ದೇವಸ್ಥಾನ, ಅರಮನೆ ಆವರಣ, ಬೆಳಗ್ಗೆ 10ಕ್ಕೆ.
- **ಸ್ನೇಹ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಮಂಜುನಾಥ್, ಸ್ಥಳ: ಅಮರಾವತಿ ಬಡಾವಣೆ, ಮರಟಿಕ್ಯಾತನಹಳ್ಳಿ, ಜಯಪುರ ಹೋಬಳಿ, ಬೆಳಗ್ಗೆ 11.30ಕ್ಕೆ
- **ಭೀಮ ಜ್ಯೋತಿ ಸೌಹಾರ್ದ ಸಹಕಾರಿ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ಕ್ಕೆ.
- **ವಿಷ್ಣುವರ್ಧನ್ ಅಭಿಮಾನಿಗಳ ಒಕ್ಕೂಟ :** ಕರ್ನಾಟಕ ರತ್ನ ಡಾ. ವಿಷ್ಣುವರ್ಧನ್‌ರವರ 75ನೇ ವರ್ಷದ ಹುಟ್ಟುಹಬ್ಬದ ಆಚರಣೆ, ಮುಖ್ಯ ಅತಿಥಿಗಳು : ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಶಿವಕುಮಾರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಅರಮನೆ ಮುಂಭಾಗದಲ್ಲಿರುವ ವಿಷ್ಣುವರ್ಧನ್ ಉದ್ಯಾನವನ, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು– ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ. ಜ್ಯೋತಿ, ವ್ಯಾಖ್ಯಾನ–ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ವೃತ್ತಿ ಮಾರ್ಗದರ್ಶನ–ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಕುಲಪತಿಗಳಾದ ಡಾ. ನಾಗೇಶ್ ವಿ.ಬೆಟ್ಟಕೋಟೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ರೋಣು ಮಜುಂದಾರ್–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಪಿ.ಎಸ್. ರಂಜನಿ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅರುಣಾ ಸಾಯಿರಾಂ–ಹಾಡುಗಾರಿಕೆ, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 6.50 ಕೃಷಿರಂಗ–ತೆಂಗಿನ ತೋಟಗಳ ನಿರ್ವಹಣೆ ಕುರಿತು ಮೈಸೂರು ಜಿಲ್ಲಾ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಮಂಜುನಾಥ ಅಂಗಡಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವ ಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ, ಆಕಾಶವಾಣಿ 90–ನೆನಪುಗಳ ಹೊತ್ತು ಸಂಗೀತ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಡಾ.ಆರ್.ವಿಶ್ವೇಶ್ವರನ್ ಅವರೊಂದಿಗೆ ಸಂವಾದ. ಪ್ರಸ್ತುತಿ–ಟಿ.ವಿ. ವಿದ್ಯಾಶಂಕರ್ ಹಾಗೂ ತುಮಕೂರು ಬಿ. ರವಿಶಂಕರ್, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಸರ್ ಎಂ.ವಿಶ್ವೇಶ್ವರಯ್ಯನವರು ಇಂಜಿನಿಯರ್‌ಗಳಿಗೆ ಆದರ್ಶಪ್ರಾಯರು

● ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಅಭಿಮತ ● ಅವರು ಸ್ಥಾಪಿಸಿದಂತಹ ಹಲವು ಕಾರ್ಖಾನೆಗಳ ಪುನಶ್ಚೇತನಕ್ಕೆ ಮನವಿ



58ನೇ ಎಂಜಿನಿಯರುಗಳ ದಿನಾಚರಣೆ, ನಿವೃತ್ತ ಇಂಜಿನಿಯರ್‌ಗಳಿಗೆ ಎಮಿನೆಂಟ್ ಇಂಜಿನಿಯರ್ಸ್ ಅವಾರ್ಡ್‌ನ್ನು ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಪ್ರದಾನ ಮಾಡಿದರು.

ಮೈಸೂರು, ಸೆ.16(ಎಸ್‌ಪಿಎನ್)– ಭಾರತ ರತ್ನ, ಸರ್ ಎಂ.ವಿಶ್ವೇಶ್ವರಯ್ಯನವರು, ಈ ನಾಡು ಕಂಡ ಅಪರೂಪದ ಇಂಜಿನಿಯರ್ ಹಾಗೂ ಇಂದಿನ ಯುವ ಇಂಜಿನಿಯರ್‌ಗಳಿಗೆ ಆದರ್ಶಪ್ರಾಯರು ಎಂದು ಮಾಜಿ ಸಚಿವರೂ ಆದ ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಅಭಿಪ್ರಾಯಪಟ್ಟರು.

ಮೈಸೂರು ಇಂಜಿನಿಯರ್‌ಗಳ ಸಂಸ್ಥೆಯ ಸರ್‌ಎಂವಿ ಸಭಾಂಗಣದಲ್ಲಿ ಭಾರತೀಯ ಇಂಜಿನಿಯರ್‌ಗಳ ಸಂಸ್ಥೆ, ಮೈಸೂರು ಕೇಂದ್ರದ ವತಿಯಿಂದ ಆಯೋಜಿಸಿದ್ದ 58ನೇ ಇಂಜಿನಿಯರ್‌ಗಳ ದಿನಾಚರಣೆಯಲ್ಲಿ ನಿವೃತ್ತ ಇಂಜಿನಿಯರ್‌ಗಳಿಗೆ ಅಭಿನಂದಿಸಿ, ಮಾತನಾಡಿದರು.

ಸರ್.ಎಂ.ವಿಶ್ವೇಶ್ವರಯ್ಯನವರು ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸೇರಿದಂತೆ ನೀರಾವರಿ, ಉದ್ಯಮ ಸೇರಿದಂತೆ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ, ಉದ್ಯೋಗ ಸೃಷ್ಟಿಗೆ ಕಾರಣಕರ್ತರಾದರು. ಸರ್.ಎಂ.ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಫಲವಾಗಿ ಸ್ಥಾಪಿಸಿರುವ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ ಪುನಶ್ಚೇತನಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ರಾಜ್ಯದ ಕಚ್ಚಾ ಅದಿರನ್ನು ವಿದೇಶಕ್ಕೆ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿದೆ. ಇದನ್ನು ತಡೆದು ಸ್ಥಳೀಯವಾಗಿ ತಯಾರಿಸಲು ಆದ್ಯತೆ ನೀಡಬೇಕು. ಇಲ್ಲಿಯವರೆಗೆ ಆಡಳಿತ ನಡೆಸಿದ ಸರ್ಕಾರಗಳು ಉದ್ಯೋಗ ಮತ್ತು ಆದಾಯ ಕೊಡುತ್ತಿದ್ದ ಉಕ್ಕಿನ ಕಾರ್ಖಾನೆ ಮುಚ್ಚುವ ಹಂತಕ್ಕೆ ತಲುಪಿಸಿವೆ. ಈ ಕುರಿತು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಭದ್ರಾವತಿ ಉಕ್ಕಿನ ಕಾರ್ಖಾನೆ ಪುನರಾರಂಭಕ್ಕೆ ಸಾವಿರ ಕೋಟಿ ರೂ. ಅನುದಾನ ನೀಡುವುದಾಗಿ ಘೋಷಿಸಿದ್ದಾರೆ. ಇದು ಸ್ವಾಗತಾರ್ಹ. ಈ ಕುರಿತು ರಾಜ್ಯ ಸರ್ಕಾರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರು ಮಾದರಿ ಸಂಸ್ಥಾನವಾಯ್ತು: ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತಾವಧಿಯಲ್ಲಿ ದಿವಾನರಾಗಿ ರೂಪಿಸಿದ ಅಭಿವೃದ್ಧಿ ಯೋಜನೆಗಳು ಮೈಸೂರು ಸಂಸ್ಥಾನವನ್ನು ಮಾದರಿಯನ್ನಾಗಿಸಿದವು. ಮೈಸೂರು ವಿವಿ, ಕನ್ನಡ ಸಾಹಿತ್ಯ ಪರಿಷತ್, ಶಿಂಷಾ ಜಲವಿದ್ಯುತ್ ಯೋಜನೆ, ಕೆಆರ್‌ಎಸ್, ವಾಣಿವಿಲಾಸ ಸಾಗರ ಸೇರಿದಂತೆ ಹಲವು ಜನಪರ ಯೋಜನೆಗಳ ಅನುಷ್ಠಾನಕ್ಕೆ ಸರ್‌ಎಂವಿ ಅವರ ಶ್ರಮವಿದೆ ಎಂದರಲ್ಲದೆ, ಸರ್‌ಎಂವಿ ಸ್ಮರಣಾರ್ಥ ವಿಟಿಯು ತಾಂತ್ರಿಕ ವಿವಿ ಸ್ಥಾಪಿಸಿರುವುದು ಸ್ವಾಗತಾರ್ಹ. ಇದೇ ವಿವಿಯ ಕುಲಪತಿಗಳಾಗಿರುವ ಡಾ.ವಿದ್ಯಾ ಶಂಕರ್ ಮೈಸೂರಿನವರು. ಅವರನ್ನು ಮೈಸೂರಿನ ಎಂಜಿನಿಯರ್‌ಗಳ ಸಂಸ್ಥೆಯ ಪದಾಧಿಕಾರಿಗಳು ಗೌರವಿಸುವಂತೆ ಸಲಹೆ ನೀಡಿದರು.

ಸರ್‌ಎಂವಿಯವರು 1919ರಿಂದ 1959ರವರೆಗೆ 40 ವರ್ಷಗಳ ಕಾಲ ಭಾರತ ದೇಶದ ವಿವಿಧ ತಾಂತ್ರಿಕ ಸಲಹಾ ಸಮಿತಿಗಳಲ್ಲಿ ಗಣನೀಯ ಸೇವೆ ಸಲ್ಲಿಸಿದರು. ಇವರ ಸಾಧನೆಯನ್ನು ಗುರುತಿಸಿದ ಕೇಂದ್ರ ಸರ್ಕಾರ 1955ರಲ್ಲಿ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಯಾವುದೇ ತಂತ್ರಜ್ಞಾನ ಇಲ್ಲದ ಸಂದರ್ಭದಲ್ಲಿ ಅವರು ಕೈಗೊಂಡ ಕೆಲಸಗಳಿಗೆ ನೊಬೆಲ್ ಪ್ರಶಸ್ತಿ ಸಲ್ಲಬೇಕಿತ್ತು ಎಂದರು.

ಕ್ರಿ.ಶ 1861ರಿಂದ 1962ರ ವರೆಗೆ ಇಡೀ ವಿಶ್ವದಲ್ಲೆ ಮೊಟ್ಟ ಮೊದಲ ಬಾರಿಗೆ ಆರ್ಥಿಕ ಯೋಜನೆಯ ಕಲ್ಪನೆಯನ್ನು ಪಡೆದು, ಪ್ರತಿಭಾಶಾಲಿ ಎಂಜಿನಿಯರ್ ಮಾತ್ರವಲ್ಲದೆ ಪ್ರಸಿದ್ಧ ಎಂಜಿನಿಯರಾಗಿ, ಕೈಗಾರಿಕೋದ್ಯಮಿಯಾಗಿ, ಸಮರ್ಥ ಆಡಳಿತಗಾರರಾಗಿ, ಕನ್ನಡ ಆಡಳಿತ ಭಾಷೆ ಅನುಷ್ಠಾನಗೊಳಿಸಿದವರಾಗಿ, ಶಿಕ್ಷಣ ತಜ್ಞರಾಗಿ, ಸಮಾಜ ಸುಧಾರಕರಾಗಿ, ಕೆಲಸ ಮಾಡಿದ್ದಾರೆ ವಿಶ್ವೇಶ್ವರಯ್ಯನವರು. ಈ ವೇಳೆ ಸಂಸ್ಥೆಯ ಅಧ್ಯಕ್ಷ ಆರ್.ದೀಪು, ಸಂಯೋಜಕ ಎ.ಎಸ್.ಸತೀಶ್, ಕಾರ್ಯದರ್ಶಿ ಕೆ.ಎ. ಅನಿತಾ ವೆಂಕಟೇಶ್, ಪದಾಧಿಕಾರಿಗಳಾದ ರೊ.ಎಂ.ಕೆ.ನಂಜಯ್ಯ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಎಮಿನೆಂಟ್ ಇಂಜಿನಿಯರ್ಸ್ ಅವಾರ್ಡ್–2025ಗೆ ಭಾಜನರಾದರು

ಎಂ.ಎಸ್.ಶ್ರೀಕಂಠಶರ್ಮಾ, ಎಚ್.ಎಸ್.ವೆಂಕಟೇಶ ಶಾಸ್ತ್ರಿ, ಎಸ್.ಸಿ.ಬಾಲ್ವತ್, ಡಾ.ಥೋತ್ರೆಯಿಂಗಮ್ ಕಾಸರ್, ಡಾ.ಸುರೇಖಾ ಮನೋಜ್, ಡಾ.ಎಂ.ಎಸ್. ಗೋವಿಂದೇಗೌಡ, ಎಂ.ಮಹದೇವ, ಶ್ರೀನಿವಾಸ ವರದರಾಜನ್, ಡಾ.ಡಿ.ಪುಟ್ಟೇಗೌಡ, ಬಿ.ಶಿವಶಂಕರ್, ಡಾ.ಎಂ.ಎಲ್.ಛಾಯಾದೇವಿ, ಡಾ.ಎಂ.ವಿ.ಲಿಖಿತ್ ಕುಮಾರ್, ಡಾ.ಸುಮತಿ ರಾಮಕೃಷ್ಣಗೌಡ, ಡಾ.ಸ್ಮಿತಾ ಜಾಯ್, ಡಾ.ಡಿ.ರಾಜೇಶ್ವರಿ, ಡಾ.ಎಚ್.ಎಲ್.ಗುರುರಾಜ್ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಮಲ್ಟಿಪ್ಲೆಕ್ಸ್‌ಗಳಲ್ಲಿ ಏಕರೂಪ ದರ ನಿಗದಿ ವಿಚಾರ: ಮಧ್ಯಂತರ ಆದೇಶ ಕಾಯ್ದಿರಿಸಿದ ಹೈಕೋರ್ಟ್



ಬೆಂಗಳೂರು, ಸೆ.16–ಮಲ್ಟಿಪ್ಲೆಕ್ಸ್‌ಗಳಲ್ಲಿ ಏಕರೂಪ ದರ ನಿಗದಿ ವಿಚಾರ ಸಂಬಂಧ ಮಧ್ಯಂತರ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ. 200 ರೂ.ಗೆ ಚಿತ್ರ ಪ್ರದರ್ಶನ ಮಾಡಿದರೆ ನಷ್ಟ ಉಂಟಾಗುತ್ತೆ ಎಂದು ಮಲ್ಟಿಪ್ಲೆಕ್ಸ್ ಅಸೋಸಿಯೇಷನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯಿತು.

ಮಲ್ಟಿಪ್ಲೆಕ್ಸ್‌ಗಳ ಪರವಾಗಿ ಮುಕುಲ್ ರೋಹ್ಟಗಿ ವಾದಿಸಿ, ಸಂವಿಧಾನದ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಉಲ್ಲಂಘನೆಯಾಗಿದೆ. 2017ರಲ್ಲಿಯೂ ಸರ್ಕಾರ ಇದೇ ರೀತಿಯ ಆದೇಶ ಹೊರಡಿಸಿದ್ದಾಗ ಹೈಕೋರ್ಟ್ ರದ್ದುಪಡಿಸಿತ್ತು ಟಿಕೆಟ್ ಖರೀದಿಸಿ ಚಿತ್ರ ನೋಡುವುದು ಗ್ರಾಹಕನಿಗೆ ಬಿಟ್ಟದ್ದು, ಈ ವಿಚಾರದಲ್ಲಿ ಸರ್ಕಾರ ಮಧ್ಯಪ್ರವೇಶಿಸುವಂತಿಲ್ಲವೆಂದು ವಾದ ಮಂಡಿಸಿದರು.

ಹೊಂಬಾಳೆ ಫಿಲಂಸ್ ಪರ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ವಾದಿಸಿ, ಜಿಎಸ್‌ಟಿ ಹೊರತುಪಡಿಸಿದ ಟಿಕೆಟ್ ದರ 200 ರೂ. ನಿಗದಿಪಡಿಸಲಾಗಿದೆ. ಇದು ವಿವೇಚನೆಯಿಲ್ಲದೇ ಸರ್ಕಾರ ಕೈಗೊಂಡ ನಿರ್ಧಾರ. ಸಿನಿಮಾ ನಿರ್ಮಿಸಲು ಎಷ್ಟೆಲ್ಲಾ ಶ್ರಮ, ಬಂಡವಾಳ ಬೇಕಾಗುತ್ತದೆ. ಅಂಕಿ ಅಂಶ ಸಂಗ್ರಹಿಸದೇ ಸರ್ಕಾರದ ಸ್ವೇಚ್ಛೆಯ ನಿರ್ಧಾರವಾಗಿದೆ ಎಂದು ವಾದಿಸಿದ್ದಾರೆ.

ಈ ಮಧ್ಯೆ, 200 ರೂ. ನಿಗದಿ ಮಾಡಿರೋದು ಒಳ್ಳೆಯ ನಿರ್ಧಾರ ಅಂತ ನಿರ್ಮಾಪಕಿ ಪ್ರಿಯಾ ಹಾಸನ್, ನಿರ್ಮಾಪಕರಾದ ಎ ಗಣೇಶ್, ಚಿಂಗಾರಿ ಮಹದೇವ್ ಹೇಳಿದ್ದಾರೆ. ಅಲ್ಲದೇ ಕೋರ್ಟ್ ಮೆಟ್ಟಿಲೇರಿರುವವರು ಅರ್ಜಿ ವಾಪಸ್ ಪಡೆಯಬೇಕು. ಇಲ್ಲವಾದಲ್ಲಿ ನಾವೂ ಕಾನೂನು ಹೋರಾಟ ಮಾಡುತ್ತೇವೆ ಎಂದು ಫಿಲ್ಮ್ ಚೇಂಬರ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಮೈಸೂರು ಮತ್ತು ಚಾಮರಾಜನಗರ ಡೈರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಹಳೆ ಮೈಸೂರು ಡೈರಿ ಸಂಕೀರ್ಣ, ಸಿದ್ದಾರ್ಥನಗರ, ಟಿ.ನರಸೀಪುರ ರಸ್ತೆ, ಮೈಸೂರು–11

2024–2025 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರ

ಮಾನ್ಯರೇ,

2024–25 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 24.09.2025 ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ವಿನೋದ್ ಟೂರಿಸಂ ಹೋಂ, ಇಂದಿರಾ ವೆಂಕಟಲಿಂಗಯ್ಯ ಛತ್ರದ ಪಕ್ಕ, ಹಳೆ ಡೈರಿ ಎದುರು, ಮಲೆಮಹದೇಶ್ವರ ರಸ್ತೆ, ಮೈಸೂರು–11, ಇಲ್ಲಿ ಏರ್ಪಡಿಸಲಾಗಿದೆ. ವಾರ್ಷಿಕ ಸಾಮಾನ್ಯ ಮಹಾಸಭೆಯ ನೋಟಿಸ್ ಅನ್ನು ಈಗಾಗಲೇ ಸಂಘದ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿಕೊಡಲಾಗಿದೆ. ಒಂದು ವೇಳೆ ನೋಟಿಸ್ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ ತಪ್ಪದೇ ಹಾಜರಾಗಲು ಕೋರಿದೆ.

ಕಾರ್ಯಕಾರಿ ಮಂಡಳಿಯ ಅಪ್ಪಣೆ ಮೇರೆಗೆ
ಶ್ರೀ ಬಸವಣ್ಣ ಬಿ
ಕಾರ್ಯದರ್ಶಿ

ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳು ಪ್ರಚಲಿತ ವಿದ್ಯಮಾನಗಳತ್ತ ಗಮನ ಕೇಂದ್ರೀಕರಿಸಬೇಕು

ಐಪಿಎಸ್ ಅಧಿಕಾರಿ ಕೆ.ಎಲ್.ಸೂರಜ್ ಕಿವಿಮಾತು



ಜ್ಞಾನಬುತ್ತಿ ಸಂಸ್ಥೆಯ ಐಎಎಸ್/ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ತರಬೇತಿ ಶಿಬಿರದಲ್ಲಿ ಐಪಿಎಸ್ ಅಧಿಕಾರಿ ಕೆ.ಎಲ್.ಸೂರಜ್ ಮಾತನಾಡುತ್ತಿರುವುದು

ಮೈಸೂರು, ಸೆ.16(ಎಸ್‌ಪಿಎನ್)– ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಎಂದರೆ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಹೇಳಿಕೊಡುವ ಟ್ಯೂಷನ್ ತರ ಅಲ್ಲ. ಪ್ರತಿಯೊಬ್ಬ ಅಭ್ಯರ್ಥಿಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವರ್ಷಗಟ್ಟಲೇ ಕಠಿಣ ಪರಿಶ್ರಮ ಅಗತ್ಯ ಎಂದು 2023ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಕೆ.ಎಲ್.ಸೂರಜ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಲಕ್ಷ್ಮಿಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಐಎಎಸ್/ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ತರಬೇತಿ ಶಿಬಿರದಲ್ಲಿ ಅವರು ಮಾತನಾಡಿದರು.

ಐಎಎಸ್, ಐಪಿಎಸ್, ಐಆರ್‌ಎಸ್ ಹಾಗೂ ಐಎಫ್‌ಎಸ್ ಪರೀಕ್ಷೆಗಳಿಗೆ ಜಗತ್ತಿನ ಎಲ್ಲಾ ವಿಷಯಗಳ ಬಗ್ಗೆ ಅಧ್ಯಯನ ಬಹಳ ಮುಖ್ಯ. ಯಾವ ಘಟನೆಗಳ ಮೇಲೆ ಪ್ರಶ್ನಾವಳಿಗಳನ್ನು ಕೇಳುತ್ತಾರೋ ತಿಳಿಯುವುದಿಲ್ಲ. ಹಾಗೂ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಾಗುವ ಬೆಳವಣಿಗೆ ಕುರಿತು ಆಕಾಂಕ್ಷಿಗಳು ಸದಾ ಗಮನಿಸುತ್ತಿರಬೇಕು ಎಂದು ಸಲಹೆ ನೀಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಆಕಾಂಕ್ಷಿಗಳು ಪಠ್ಯದ ಚೌಕಟ್ಟು, ಪರೀಕ್ಷಾ ವಿಧಾನ ಕುರಿತು ತಿಳಿದುಕೊಂಡು ಮೊದಲು ಅಧ್ಯಯನ ಆರಂಭಿಸಬೇಕು. ರಾಜಕೀಯ ಕ್ಷೇತ್ರದಲ್ಲಾಗುವ ಬದಲಾವಣೆ ಕುರಿತು ನ್ಯಾಯಾಂಗದ ಮೂಲಕ ಇತ್ಯರ್ಥವಾದಾಗ ಅದರ ತೀರ್ಪುಗಳ ಕುರಿತು ಅಧ್ಯಯನ ಮಾಡಬೇಕು. ಉದಾಹರಣೆಗೆ ಮಾಜಿ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ ಪ್ರಕರಣ ಸೇರಿದಂತೆ ಸಂವಿಧಾನಾತ್ಮಕ ವಿಷಯಗಳ ಸುಪ್ರೀಂ ಕೋರ್ಟ್ ತೀರ್ಪುಗಳ ಬಗ್ಗೆ ಗಮನಹರಿಸುವಂತೆ ಸಲಹೆ ನೀಡಿದರು.

ಸರ್ಕಾರಿ ಶಾಲೆಗಳಲ್ಲಿ ಬೋಧನೆ ಮಾಡುವ ಶಿಕ್ಷಕರೇ, ಖಾಸಗಿ ಟ್ಯೂಷನ್ ಸೆಂಟರ್‌ಗಳಲ್ಲಿ ಪಠ್ಯದಲ್ಲಿರುವ ಪಾಠಗಳನ್ನು ಹೇಳಿಕೊಡುತ್ತಾರೆ. ಅಲ್ಲಿ ಹೇಳಿದ ಅಂಶಗಳನ್ನೇ ಇಲ್ಲಿಯು ನಾಲ್ಕೈದು ಬಾರಿ ಹೇಳಿ, ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸಿ 100ಕ್ಕೆ 100 ಅಂಕ ಗಳಿಸಲು ಮಾತ್ರ ಒತ್ತು ನೀಡುತ್ತಾರೆ. ಆದರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗಿಯಾಗುವ ಅಭ್ಯರ್ಥಿಗಳು, ಬೇರೆ ಬೇರೆ ಕೃತಿಗಳನ್ನು ಅಧ್ಯಯನ ಮಾಡುವುದು ಬಹಳ ಮುಖ್ಯ ಎಂದರು.

ಅಖಿಲ ಭಾರತ ಸಹಕಾರ ಮಹಾಮಂಡಲದ ನಿರ್ದೇಶಕ ವೈ.ಎನ್.ಶಂಕರೇಗೌಡ ಮಾತನಾಡಿ, ಸ್ಪಧಾತ್ಮಕ ಪರೀಕ್ಷೆಗಳಲ್ಲಿ ಭಾಗಿಯಾಗುವ ವಿದ್ಯಾರ್ಥಿಗಳು ಕಷ್ಟ ಶ್ರಮದಿಂದ ಮುಂದೆ ಬರಬೇಕು. ಕಠಿಣ ಪರಿಶ್ರಮದಿಂದ ದೊರಕುವ ಅವಕಾಶಗಳಿಗೆ ಸಮಾಜದಲ್ಲಿ ಸಾಕಷ್ಟು ಗೌರವ, ಅಭಿಮಾನ ದೊರಕಿಸಿಕೊಡುತ್ತದೆ. ಹಾಗೂ ಜ್ಞಾನ ಬುತ್ತಿ ತರಬೇತಿಯಲ್ಲಿ ಭಾಗಿಯಾಗಿರುವ ವಿದ್ಯಾರ್ಥಿಗಳು ಕಠಿಣ ಪರಿಶ್ರಮದ ಮೂಲಕ ಸಾಧನೆ ಮಾಡುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಟಿ.ಸಿ.ಸುದೀಪ್, ರೋಹನ್ ರವಿಕುಮಾರ್, ಪ್ರೊ. ಹೊನ್ನಯ್ಯ, ಪ್ರೊ. ವಿ.ಜಯಪ್ರಕಾಶ್, ಡಾ.ಈ.ಶಿವಪ್ರಸಾದ್, ಯು.ಎಂ.ಶರದ್‌ರಾವ್, ಡಾ.ಕೃಪ ಗಣೇಶ ಡಾ.ಎಸ್.ಬಿ.ಎಂ.ಪ್ರಸನ್ನ, ಪ್ರೊ.ಸಿ.ಕೆ.ಕಿರಣ್ ಕೌಶಿಕ್, ಕೆ.ವೈ.ನಾಗೇಂದ್ರ ಹಾಗೂ ಜ್ಞಾನಬುತ್ತಿ ಸಂಸ್ಥೆಯ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡ, ಖಜಾಂಚಿ ಹೆಚ್. ಬಾಲಕೃಷ್ಣ ಉಪಸ್ಥಿತರಿದ್ದರು.

ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಶ್ರೀ ಪ್ರಸನ್ನ ಕಲ್ಯಾಣೇಶ್ವರ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷ ಬಿ.ಆನಂದ್, ಉಪಾಧ್ಯಕ್ಷರಾದ ದಿವ್ಯಶ್ರೀ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ನಿರ್ದೇಶಕರಾದ ಪಾಂಡುರಂಗ, ಗಣೇಶ್, ಬಾಲಾಜಿ, ಎಂ.ಎಂ. ಪ್ರಸಾದ್, ಮಹೇಶ್, ಎಂ.ಬಸವರಾಜು ಜೋಗಿ, ದಿವ್ಯನಾದನ್, ಗೋವಿಂದ, ಉಷಾ ಕೆ.ಆರ್, ರಮಾದೇವಿ, ಉಷಾ, ಸುಮಿತ್ರ ಕಾರ್ಯದರ್ಶಿ ಪದ್ಮರಾಜ್ ಇದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ನಾನು ಮನೆ ಬಿಟ್ಟು ಓಡಿ ಹೋದ್ರೆ ಏನ್ ಮಾಡ್ತೀಯಾ?
ಹೆಂಡತಿ : ಪೇಪರ್‌ನಲ್ಲಿ ಜಾಹೀರಾತು ಹಾಕಿಸ್ತೀನಿ!
ಗಂಡ : ಏನಂತ?
ಹೆಂಡತಿ : ಮದುವೆಯಾಗಲು ಗಂಡ ಬೇಕಾಗಿದ್ದಾನೆ ಅಂತ !

ಮೈಸೂರು ಮಿತ್ರ

ಬುಧವಾರ, 17 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನಾ ಅಳಬೇಕು ನನಗೊಂದು ಹೆಗಲು ಬೇಕು. ಕಣ್ಣೀರೊರೆಸಲು ನಿಷ್ಠಾವಂತ ಕೈಗಳು ಬೇಕು. ಮನಸಿಗೆ ಮುದ ನೀಡುವ ಮುಗ್ಧ ಮನಸು ಬೇಕು. ಬೇರೆ ಏನೂ ಬೇಡ ಎನ್ನುವಷ್ಟು ಯಾರಾದರೂ ಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಬ್ಬಿಣ ಬಿಸಿಯಿದ್ದಾಗಲೇ ತಟ್ಟಬೇಕು.

ನಿಮ್ಮ ಪತ್ರಗಳು

ಯುವ ಸಂಭ್ರಮದಲ್ಲಿ ಪೊಲೀಸರ ದರ್ಪ

ಮಾನ್ಯರೆ,

ನಾಡಹಬ್ಬ ಮೈಸೂರು ದಸರಾದ ಪ್ರಯುಕ್ತ ಮೈಸೂರಿನ ಬಯಲು ರಂಗ ಮಂದಿರದಲ್ಲಿ ನಡೆಯುತ್ತಿರುವ ಯುವ ಸಂಭ್ರಮ ಕಾರ್ಯಕ್ರಮವನ್ನು ವಿಶೇಷವಾಗಿ ಯುವ ಸಮೂಹದ ಪ್ರತಿಭೆ ಪ್ರದರ್ಶನ ಮಾಡಲು ಆಯೋಜಿಸಲಾಗಿದೆ. ಇದು ದಸರಾಗೆ ಸಂಬಂಧಿಸಿದ ಕಾರ್ಯಕ್ರಮ ಆದ ಕಾರಣ ಇದನ್ನು ನೋಡಲು ಎಂದಿನಂತೆ ಈ ಬಾರಿಯೂ ಹೆಚ್ಚಿನ ಪ್ರಮಾಣದಲ್ಲಿ ಯುವ ಸಮೂಹ ಆಗಮಿಸುತ್ತದೆ. ಕಾರ್ಯಕ್ರಮದ ಭದ್ರತೆಗಾಗಿ ಹಾಗೂ ಸುರಕ್ಷತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಿರುವುದು ಒಳ್ಳೆಯ ವಿಚಾರ. ಜನಸಂದಣಿ ನಿಯಂತ್ರಣ ಮಾಡಲು ಪೊಲೀಸರು ಎಲ್ಲಾ ಗೇಟುಗಳನ್ನು ಬಂದ್ ಮಾಡುತ್ತಾರೆ. ಇದರಿಂದ ರಂಗ ಮಂದಿರದ ಹೊರಗೆ ಜನರ ನೂಕಾಟ ಹೆಚ್ಚಾಗಿದೆ. ಹೀಗೆ ಬೆಂಗಳೂರು ಕ್ರೀಡಾಂಗಣದಲ್ಲಿ ಗೇಟ್ ಬಂದ್ ಮಾಡಿದ ಕಾರಣ ಕಾಲ್ತುಳಿತಕ್ಕೆ ಯುವಕರು ಸಾವನ್ನಪ್ಪಿದರು. ಇಂಥ ದುರ್ಘಟನೆಗಳಿಗೆ ಯುವ ಸಂಭ್ರಮ ಸಾಕ್ಷಿ ಆಗಬಾರದು. ಯಾವ ವರ್ಷ ಇಲ್ಲದ ಗೇಟ್ ಬಂದ್ ಈ ಬಾರಿ ಯಾಕೆ?

ಜೊತೆಗೆ ಪೊಲೀಸರ ದರ್ಪ ಜೋರಾಗಿದೆ. ಏಕೆಂದರೆ ಕಾರ್ಯಕ್ರಮದಲ್ಲಿ ಕರ್ತವ್ಯನಿರತ ಕೆಲ ಪೊಲೀಸರು ದ್ವಾರದ ಬಳಿ ಸಾರ್ವಜನಿಕರು ವೀಡಿಯೋ ಮಾಡುತ್ತಿದ್ದ ಮೊಬೈಲ್‌ಗಳನ್ನು ಜನರ ಮೇಲೇರಿ ಕಸಿದುಕೊಳ್ಳುತ್ತಾರೆ. ಸೋಮವಾರ (ಸೆ.5) ಜನರು ಸಂತೋಷಕ್ಕೊ ಅಥವಾ ಆಶ್ಚರ್ಯಕ್ಕೊ ಜನಸಮೂಹದ ದೃಶ್ಯ ಸೆರೆ ಹಿಡಿದರೆ ಪೊಲೀಸರು ಮೊಬೈಲ್ ಅನ್ನು ಕಿತ್ತುಕೊಂಡರು. ಪೊಲೀಸ್ ಇಲಾಖೆಯಿಂದ ಯಾವುದೇ ವೀಡಿಯೋ ನಿಷೇಧ ಬ್ಯಾನರ್‌ಗಳು ಅಳವಡಿಸಿಲ್ಲ ಎಂದ ಮೇಲೆ ಈ ರೀತಿ ಜನರ ವೈಯಕ್ತಿಕ ವಸ್ತುಗಳಾದ ಮೊಬೈಲ್ ಅನ್ನು ಕಿತ್ತುಕೊಳ್ಳುವ ಅಧಿಕಾರವನ್ನು ನಿಮಗೆ ಕೊಟ್ಟವರು ಯಾರು ಪೊಲೀಸರೇ? ಈ ರೀತಿ ಮಾಡಿದ ಪೊಲೀಸ್ ಯಾರು ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಅಳವಡಿಸಿರುವ CCTV ಮೂಲಕ ಗುರುತಿಸಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಎಷ್ಟು ಮೊಬೈಲ್ ಅನ್ನು ಕಸಿದುಕೊಂಡಿದ್ದೀರಾ ಎಂಬ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಿ. ಇನ್ನೂ ಇದನ್ನು ಹೊರತುಪಡಿಸಿ ಜನರ ನಿಯಂತ್ರಣ ಮಾಡಲು ಪೊಲೀಸರು ಲಾಠಿ ಚಾರ್ಜ್ ಮಾಡಿದರು. ಇದರಿಂದ ಬೆದರಿದ ಸಾರ್ವಜನಿಕರು ಒಬ್ಬರ ಮೇಲೆ ಒಬ್ಬರು ಬಿದ್ದು ಪೆಟ್ಟು ಮಾಡಿಕೊಂಡರು. ಇದು ಏನಾದ್ರೂ ಒಂದು ವೇಳೆ ಕಾಲ್ತುಳಿತಕ್ಕೆ ತಿರುಗಿದ್ದರೆ ಇದರ ಹೊಣೆಯನ್ನು ಯಾರು ಹೊರುತ್ತಿದ್ದರು ಪೊಲೀಸರೇ? ಬ್ಯಾರಿಕೇಡ್ ವ್ಯವಸ್ಥೆ ಇಲ್ಲದೆ ಲಾಠಿ ಚಾರ್ಜ್ ಮೂಲಕ ಸರತಿ ಸಾಲು ಮಾಡಿಸುತ್ತೀರಲ್ಲ ಪೊಲೀಸರೇ ಇದು ನ್ಯಾಯವೇ?

ಯುವ ದಸರಾ ಸೇರಿದಂತೆ ದಸರಾ ಉದ್ಘಾಟನೆ ನಂತರ ಸಾಲು ಸಾಲು ಕಾರ್ಯಕ್ರಮಗಳು ಜರುಗಲಿವೆ. ಪೊಲೀಸ್ ಆಯುಕ್ತರು ಹಾಗೂ ಸಚಿವರು ಇದನ್ನು ಗಮನದಲ್ಲಿಟ್ಟುಕೊಂಡು ಮತ್ತೆ ಇಂತಹ ಘಟನೆಗಳು ಮರುಕಳಿಸದಂತೆ ಗಮನಹರಿಸಿ ಈ ಬಾರಿಯ ದಸರಾವನ್ನು ಯಶಸ್ವಿ ಮಾಡೋಣ.

–ರಂಜನ್ ಆರ್., ಪತ್ರಿಕೋದ್ಯಮ ಪದವೀಧರ, ಮೈಸೂರು.

ಸಂತ ಫಿಲೋಮಿನಾ ಚರ್ಚ್ ಹಿಂಭಾಗ ರಸ್ತೆಯಲ್ಲಿ ಕಸದ ರಾಶಿ



ಮಾನ್ಯರೆ,

ಮೈಸೂರಿನ ವಾರ್ಡ್ ಸಂಖ್ಯೆ 27 ರ ಹಾಗೂ ವಿಶ್ವ ಪಾರಂಪರಿಕ ತಾಣ ಸಂತ ಫಿಲೋಮಿನಾ ಚರ್ಚ್ ಹಿಂಭಾಗ ರಸ್ತೆ ಉದ್ದಗಲಕ್ಕೂ ಕಸದ ರಾಶಿ ಬಿದ್ದಿದೆ. ಇದನ್ನು ಚಿತ್ರದಲ್ಲಿ ಕಾಣಬಹುದಾಗಿದೆ. ಮೈಸೂರು ನಗರಪಾಲಿಕೆಯ ವಲಯ ಕಚೇರಿಯ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ನಿವಾಸಿಗಳು ತಂದರೂ ವಾರಗಟ್ಟಲೇ ಕಸ ವಿಲೇವಾರಿ ಮಾಡಲು ಮನಸ್ಸಿಲ್ಲ. ನೊಂದ ನಾಗರಿಕರ ಮನವಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ದರ್ಪದ ಮಾತುಗಳು ಕೇಳಿ ಸಾಕಾಗಿದೆ. ವಿಶ್ವವಿಖ್ಯಾತ ದಸರಾ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಸುವ ಅಧಿಕಾರಿಗಳು, ಸಾವಿರಾರು ಪ್ರವಾಸಿಗರು ಆಗಮಿಸುವ ಸಂದರ್ಭದಲ್ಲಿ ಇತ್ತ ಗಮನಹರಿಸಿ ಮೈಸೂರಿನ ಮಾನ ಹರಾಜಾಗುವುದನ್ನು ತಪ್ಪಿಸಲು ಕೋರಿ ಈ ಮನವಿ.

–ಶ್ರೀಕಂಠಮೂರ್ತಿ ಎನ್, ಲಷ್ಕರ್ ಮೊಹಲ್ಲಾ, ಮೈಸೂರು.

ವಿಕಲಚೇತನರಿಗೆ ಜಿಎಸ್‌ಟಿ ಭಾರ

ಮಾನ್ಯರೆ,

ಇತ್ತೀಚಿನ ಜಿ.ಎಸ್.ಟಿ ಸುಧಾರಣೆಯಲ್ಲಿ ವಿಕಲಚೇತನರಿಗೆ ಅಗತ್ಯವಾದ ವೈದ್ಯಕೀಯ ಉಪಕರಣಗಳ ಮೇಲೂ ತೆರಿಗೆ ಮುಂದುವರೆಸಿರುವುದು ಅತ್ಯಂತ ಕಳವಳಕಾರಿ ಸಂಗತಿ. ಇದು ಅವರ ವಿಶೇಷ ಅಗತ್ಯಗಳನ್ನು ಅರ್ಥಮಾಡಿಕೊಳ್ಳದ ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಮತ್ತು ಸಹಾನುಭೂತಿಯ ಕೊರತೆಯನ್ನು ತೋರಿಸುತ್ತದೆ.

ಐಷಾರಾಮಿ ವಸ್ತುಗಳು ಮತ್ತು ಮನೆಯ ಸಾಮಾನ್ಯ ಬಳಕೆಯ ವಸ್ತುಗಳ ಮೇಲಿನ ಜಿ.ಎಸ್.ಟಿ ಕಡಿತಗೊಂಡಿದ್ದರೂ, ಕೃತಕ ಅಂಗಗಳು, ನಡೆದಾಡುವ ಸಹಾಯಕ ಉಪಕರಣಗಳು, ಕಿವಿಯ ಕೋಕ್ಲಿಯರ್ ಇಂಪ್ಲಾಂಟ್‌ಗಳು ಮತ್ತು ಇತರ ಅಗತ್ಯ ವೈದ್ಯಕೀಯ ಸಾಧನಗಳ ಮೇಲೆ ಇನ್ನೂ 18% ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಇದು ವಿಕಲಚೇತನರಿಗೆ ಆರ್ಥಿಕ ಹೊರೆ ಮಾತ್ರವಲ್ಲ ಜೀವನ ನಡೆಸಲು ಇನ್ನಷ್ಟು ಕಷ್ಟವೆನಿಸುತ್ತದೆ. ಉದಾಹರಣೆಗೆ, ಕೃತಕ ಅಂಗಗಳ ಕಿಟ್‌ಗಳು 75,000 ಕ್ಕಿಂತಲೂ ಹೆಚ್ಚು ಬೆಲೆ ಬಾಳುತ್ತವೆ. ಈಗಾಗಲೇ ದುಬಾರಿಯಾದ ಇಂತಹ ಉಪಕರಣಗಳ ಮೇಲಿನ ಜಿ.ಎಸ್.ಟಿ, ಅಂಗವಿಕಲರ ಆರ್ಥಿಕ ಸಂಕಷ್ಟವನ್ನು ಇನ್ನಷ್ಟು ಹೆಚ್ಚಿಸುತ್ತದೆ.ಸರ್ಕಾರವು ಇಂತಹ ಅವಶ್ಯಕ ಉಪಕರಣಗಳ ಮೇಲಿನ ಜಿ.ಎಸ್.ಟಿ ಕಡಿಮೆ ಮಾಡದಿರುವುದು ಅಥವಾ ಸಂಪೂರ್ಣವಾಗಿ ವಿನಾಯಿತಿ ನೀಡದಿರುವುದು, ಸಮಾಜದಲ್ಲಿ ಅಂಗವಿಕಲರ ಒಳಗೊಳ್ಳುವಿಕೆಯ ಬಗ್ಗೆ ನಿಜವಾದ ಬದ್ಧತೆಯ ಕೊರತೆಯನ್ನು ತೋರಿಸುತ್ತದೆ. ಆದ್ದರಿಂದ ಕೇಂದ್ರ ಸರ್ಕಾರವು ತಕ್ಷಣವೇ ಈ ನೀತಿಯನ್ನು ಮರುಪರಿಶೀಲಿಸಿ, ವಿಕಲಚೇತನರಿಗೆ ಗೌರವದಿಂದ ಮತ್ತು ಸ್ವತಂತ್ರವಾಗಿ ಬದುಕಲು ಅಗತ್ಯವಾದ ವೈದ್ಯಕೀಯ ಉಪಕರಣಗಳು ಸುಲಭವಾಗಿ ದೊರೆಯುವಂತಾಗಬೇಕು.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ಒಮ್ಮೆ ಯೋಚಿಸಿ! ಮೋದಿ ಹೆಮ್ಮೆಯ ಪ್ರಧಾನಿಯಲ್ಲವೆ...

–ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷರು.





ನರೇಂದ್ರ ಮೋದಿ, ಪ್ರಧಾನಮಂತ್ರಿ

ನೂರಾರು ವೈಶಿಷ್ಟ್ಯತೆ ಹಾಗೂ ಶ್ರೀಮಂತ ಸಾಂಸ್ಕೃತಿಕತೆಯನ್ನು ಅಳವಡಿಸಿಕೊಂಡ ನಮ್ಮ ಭಾರತದಂತಹ ಮತ್ತೊಂದು ದೇಶವನ್ನು ವಿಶ್ವ ಭೂಪಟದಲ್ಲಿ ಕಾಣಲಾಗದು. ವಿಶ್ವದ ಅತ್ಯಂತ ಸಮೃದ್ಧ ಪ್ರಜಾಪ್ರಭುತ್ವ ಹಾಗೂ ಅಖಂಡತೆಯನ್ನು ಎತ್ತಿ ಹಿಡಿಯುವುದರ ಜೊತೆಗೆ ಪ್ರತಿ ಪ್ರಜೆಯ ಹಿತಾಸಕ್ತಿ ಕಾಯುವ ನಮ್ಮ ಸಂವಿಧಾನವು ಅಪರೂಪದಲ್ಲಿ ಅಪರೂಪ. ಇದು ಭಾರತದ ಹೆಮ್ಮೆ, ಭಾರತೀಯರ ಹಿರಿಮೆ.

ಗತಕಾಲದಿಂದಲೂ ಹಲವು ರೀತಿಯ ದಾಳಿ ಸಹಿಸಿಕೊಂಡಿರುವ ಭಾರತದಲ್ಲಿ ಇಂದಿಗೂ ಸಾಂಸ್ಕೃತಿಕ ದಾಳಿಗಳು ಮುಂದುವರೆದಿವೆ. ಆದರೆ ಇದಕ್ಕೆಲ್ಲಾ ಜಗ್ಗದೆ ಭಾರತೀಯತೆ ಗಟ್ಟಿಯಾಗಿ ಉಳಿದಿದೆ. ತನ್ನ ಬಲಿಷ್ಠತೆಯನ್ನು ವಿಶ್ವದ ಮುಂದೆ ಸಾಬೀತುಪಡಿಸಿ, ಮುಂಚೂಣಿ ಸ್ಥಾನದಲ್ಲಿ ತಲೆ ಎತ್ತಿ ನಿಂತಿದೆ. ಇದು ದಿಢೀರ್ ಆಗಿರುವ ಸುಧಾರಣೆಯಲ್ಲ. ಇದು ಈ ಹಿಂದಿನ ಆಡಳಿತ ವ್ಯವಸ್ಥೆಯ ಭಾರಿ ಲೋಪಗಳನ್ನು ಸರಿಪಡಿಸಿಕೊಂಡು, ಶತಕೋಟಿ ಭಾರತೀಯರ ಆಶೋತ್ತರಗಳಂತೆ ಆಡಳಿತ ನಡೆಸಿದ್ದರ ಪರಿಣಾಮ. ನಮ್ಮ ಹೆಮ್ಮೆಯ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಪ್ರಧಾನ ಸೇವಕನಾಗಿ 11 ವರ್ಷಗಳ ಕಾಲ ಅವಿರತವಾಗಿ ದುಡಿದಿದ್ದರ ಪ್ರತಿಫಲ ಎನ್ನುವುದು ನಮ್ಮೆಲ್ಲರ ಹೆಮ್ಮೆ.

ಕಲ್ಲು–ಮುಳ್ಳುಗಳ ಕಠಿಣ ಹಾದಿಯಲ್ಲೇ ನಡೆದು ಬಂದಿರುವ ಮೋದಿ, ಇಂದು ಹೂವಿನ ರಾಶಿ ಚೆಲ್ಲಿ ಭಾರತದ ಅಭಿವೃದ್ಧಿ ರಥವನ್ನು ಎಳೆಯುತ್ತಿದ್ದಾರೆ. ಅಟಲ್ ಜೀ ಅವರ ಆದರ್ಶ ಅನುಸರಿಸಿ, ಗುಜರಾತಿನ ಮುಖ್ಯಮಂತ್ರಿಯಾಗುವ ಮೂಲಕ ದೇಶವೇ ನಿಬ್ಬೆರಗಾಗುವಂತೆ ಮಾಡಿದ ಮೋದಿ, ದಶಕಕ್ಕೂ ಹೆಚ್ಚು ಕಾಲ ಅಭಿವೃದ್ಧಿ ಕ್ರಾಂತಿ ನಡೆಸಿದ್ದಾರೆ. ಅಂದೇ ದೇಶದ ಜನತೆ ಭರವಸೆಯ ನಾಯಕನನ್ನು ಗುರುತಿಸಿಕೊಂಡರು.

ಜನಾಶಯದಂತೆ 2014ರಲ್ಲಿ ಭಾರತವು ಧೀಮಂತ ಪ್ರಧಾನಿಯನ್ನು ಪಡೆಯಿತು. 2019 ಹಾಗೂ 2024ರ ಮಹಾ ಚುನಾವಣೆಯಲ್ಲಿ ಗೆದ್ದ ಭಾರತಾಂಬೆಯ ಹೆಮ್ಮೆಯ ಪುತ್ರ ನರೇಂದ್ರ ಮೋದಿ, 11 ವರ್ಷ ಯೋಜಿಸಿದ್ದು ನೂರಾರು, ಸಾಧಿಸಿದ್ದು ಹಲವಾರು.

ಬ್ಯಾಂಕುಗಳ ಮೆಟ್ಟಿಲು ತುಳಿಯದ ಕಟ್ಟಕಡೆಯ ಪ್ರಜೆಗೂ ಜನ್–ಧನ್ ಖಾತೆ ಮೂಲಕ ಆರ್ಥಿಕ ಚೈತನ್ಯ ತುಂಬುವ ಸಂಕಲ್ಪ ತೊಟ್ಟು, ಆ ನಿಟ್ಟಿನಲ್ಲಿ ಕ್ರಾಂತಿಕಾರಿ ಹೆಜ್ಜೆ ಇಟ್ಟರು. ಈ ಮೂಲಕ 50 ಕೋಟಿಗೂ ಹೆಚ್ಚು ಜನ, ಬ್ಯಾಂಕ್‌ಗಳಲ್ಲಿ ಖಾತೆ ತೆರೆದು ಉಳಿತಾಯ ಆರಂಭಿಸಿದ್ದು, ಆರ್ಥಿಕ ಸಮಾನತೆಗೆ ಬುನಾದಿ ಆಯಿತು.

ಬಸವ ತತ್ವವನ್ನು ಅಕ್ಷರಶಃ ಗೌರವಿಸುವ ಮೋದಿ, ಸ್ವಾವಲಂಬಿ ಭಾರತದ ನಿರ್ಮಾಣಕ್ಕೆ ಸಂಕಲ್ಪ ತೊಟ್ಟರು. ಸ್ವದೇಶಿ ಉತ್ಪನ್ನಗಳನ್ನು ಉತ್ತೇಜಿಸುವ ಮೂಲಕ ರೈತರು ಹಾಗೂ ಶ್ರಮಿಕ ವರ್ಗಕ್ಕೆ ಶಕ್ತಿ ತುಂಬಿದರು. ಮಹಾತ್ಮ ಗಾಂಧಿಯವರು ಆರಂಭಿಸಿದ ಸ್ವದೇಶಿ ಚಳುವಳಿಯನ್ನು ಅಕ್ಷರಶಃ ಸಾಕಾರಗೊಳಿಸಿ, ಸಮೃದ್ಧ ರಾಷ್ಟ್ರ ಕಟ್ಟಲು ಮುನ್ನಡೆದಿದ್ದಾರೆ.

ಪ್ರತಿಯೊಬ್ಬ ಪ್ರಜೆಯ ಬದುಕು ಅರಳಿಸುವ ಸಬ್ ಕಾ ಸಾಥ್–ಸಬ್ ಕಾ ವಿಕಾಸ್, ಆರ್ಥಿಕ ಅಪರಾಧಗಳನ್ನು ನಿಷ್ಕ್ರಿಯಗೊಳಿಸಿದ ನೋಟು ಅಮಾನ್ಯೀಕರಣ, ಅವ್ಯವಹಾರಕ್ಕೆ ಕಡಿವಾಣ ಹಾಕಿದ ಜಿಎಸ್‌ಟಿ ತೆರಿಗೆ ಪದ್ಧತಿ ಜಾರಿ ಹಾಗೂ ಕಾಲಾನುಸಾರ ಪರಿಷ್ಕರಣೆ, ಇಂತಹ ಹಲವು ಮಹತ್ವದ ಹೆಜ್ಜೆಗಳು ಸುಧಾರಣೆಗೆ ನೆರವಾಗಿವೆ.

ವಿಫುಲ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ ದೇಶೀಯ ಉತ್ಪನ್ನಗಳಿಗೆ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಸಕಲ ರೀತಿಯ ಬೆಂಬಲ ನೀಡುವ ಯೋಜನೆಗಳನ್ನು ರೂಪಿಸಲಾಗಿದೆ. 'ಮುದ್ರಾ ಯೋಜನೆ' ಮೂಲಕ ಅಸಂಘಟಿತ ವ್ಯಾಪಾರಿ ವಲಯ ಹಾಗೂ ಉತ್ಪನ್ನ ವಲಯಗಳಿಗೆ ದೊಡ್ಡ ಮಟ್ಟದ ಆರ್ಥಿಕ ನೆರವು ಒದಗಿಸಲಾಗಿದೆ. ಆಯಾ ರಾಜ್ಯಗಳ ನೈಸರ್ಗಿಕ ಸಂಪನ್ಮೂಲಗಳನ್ನು ಆಧರಿಸಿ ಯೋಜನೆ ರೂಪಿಸಲಾಗಿದೆ. ಆರ್ಥಿಕ ಪ್ರಗತಿಗಾಗಿ ವಿದೇಶಿ ಬಂಡವಾಳ ನೇರ ಹೂಡಿಕೆ, ಹಣದುಬ್ಬರ ನಿಯಂತ್ರಣ ಹಾಗೂ ತೆರಿಗೆ ಸಂಗ್ರಹದಲ್ಲಿ ಗಣನೀಯ ಸಾಧನೆಯ ಗುರಿ ತಲುಪಲಾಗಿದೆ. ಇಂದು ಜಾಗತಿಕ ಮಟ್ಟದಲ್ಲಿ ಜಪಾನ್‌ನಂತಹ ಆರ್ಥಿಕ ಬಲಿಷ್ಠ ರಾಷ್ಟ್ರವನ್ನು ಹಿಂದಿಕ್ಕಿ ಭಾರತ ಮುನ್ನಡೆದಿದೆ ಎಂದರೆ ಅದಕ್ಕೆ ಆರ್ಥಿಕ ಶಿಸ್ತು ಹಾಗೂ ದೂರದೃಷ್ಟಿತ್ವದ ಯೋಜನೆಗಳೇ ಕಾರಣ ಎನ್ನುವುದನ್ನು ಎಲ್ಲರೂ ಒಪ್ಪಲೇಬೇಕು.

ತಪಸ್ವಿ ಭಗೀರಥನಂತೆ ಮೋದಿ ಅವರು ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಪೂರೈಸುವ 'ಜಲ ಜೀವನ್ ಮಿಷನ್' ಯೋಜನೆ ಅನುಷ್ಠಾನದಲ್ಲಿ ಯಶಸ್ವಿಯಾಗಿದ್ದಾರೆ. ಬಡವರಿಗೆ ಸೂರು, ಉಜ್ವಲ್ ಯೋಜನೆಯಡಿ ಎಲ್‌ಪಿಜಿ ಸಿಲಿಂಡರ್ ವ್ಯವಸ್ಥೆ, ರಾಷ್ಟ್ರೀಯ ಶಿಕ್ಷಣ ನೀತಿಯಡಿ ಗುಣಮಟ್ಟದ ಹಾಗೂ ಜಾಗತಿಕ ಪೈಪೋಟಿಗೆ ಸಜ್ಜುಗೊಳಿಸುವ ಶಿಕ್ಷಣ ಕಲ್ಪಿಸಿರುವುದನ್ನು ಸ್ಮರಿಸಲೇಬೇಕು.

ಯಾವುದೇ ಪಕ್ಷದ ಅಧಿಕಾರವಿರಲಿ ಕರುನಾಡಿನ ಬಗ್ಗೆ ಪ್ರಧಾನಿ ಮೋದಿಯವರಿಗೆ ವಿಶೇಷ ಕಾಳಜಿ ಮತ್ತು ಪ್ರೀತಿ. 11 ವರ್ಷಗಳಲ್ಲಿ 1,860 ಕಿಲೋ ಮೀಟರ್ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಸೇರಿದಂತೆ, ರಸ್ತೆ, ರೈಲ್ವೆ, ನಗರಾಭಿವೃದ್ಧಿ ಮತ್ತು ಇಂಧನ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡಿ, ರಾಜ್ಯಕ್ಕೆ ಶಕ್ತಿ ತುಂಬಿದ್ದಾರೆ. ವಿಶ್ವ ಪ್ರವಾಸೋದ್ಯಮ ಭೂಪಟದಲ್ಲಿ ಉನ್ನತ ಸ್ಥಾನದಲ್ಲಿರುವ ಮೈಸೂರನ್ನು ಕೇಂದ್ರೀಕರಿಸಿಕೊಂಡು ನೂರಾರು ಕೋಟಿ ನೆರವು ನೀಡಿದ್ದಾರೆ.

ರೈಲ್ವೆ ಮಾರ್ಗಗಳನ್ನು ವಿದ್ಯುದ್ದೀಕರಣಗೊಳಿಸುವ ಯೋಜನೆ ಐತಿಹಾಸಿಕ ಪ್ರಗತಿ ಸಾಧಿಸಿದ್ದು,

> **ಶತ್ರು ರಾಷ್ಟ್ರಗಳ ಬೆದರಿಕೆ ಹಾಗೂ ದೇಶದೊಳಗಿನ ಸ್ವಾರ್ಥ ವಿದ್ರೋಹಿ ಶಕ್ತಿಗಳನ್ನು ಮೆಟ್ಟಿ ನಿಂತು, ಭಾರತದ ಸಾರ್ವಭೌಮತ್ವಕ್ಕಾಗಿ ತಮ್ಮ ಇಡೀ ಜೀವನವನ್ನು ಸಮರ್ಪಿಸಿಕೊಂಡಿರುವ ಮೋದಿ ಅವರು, ನೂರ್ಕಾಲ ಬಾಳಬೇಕು. ಮೋದಿ ಸರ್ಕಾರದ ಯೋಜನೆ ಹಾಗೂ ಸಾಧನೆಗಳು ಭಾರತ ಜಾಗತಿಕ ಮಟ್ಟದಲ್ಲಿ ಸ್ವಾಭಿಮಾನದಿಂದ ಮುಂಚೂಣಿಯತ್ತ ಸಾಗಿದೆ. ಮೋದಿಯವರ ಸೇವೆ ಹಾಗೂ ಆಡಳಿತ ಇನ್ನೂ ಹಲವಾರು ವರ್ಷಗಳ ಕಾಲ ಈ ದೇಶಕ್ಕೆ ಅವಶ್ಯವಿದೆ.**

ಕರ್ನಾಟಕದ ಶೇ.96.5ರಷ್ಟು ರೈಲ್ವೆ ಮಾರ್ಗಗಳ ವಿದ್ಯುದೀಕರಣಗೊಳಿಸಲಾಗಿದೆ. ರಾಜ್ಯದಲ್ಲಿ 10 ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ. ಅಮೃತ ಭಾರತ ಯೋಜನೆಯಡಿ ರೈಲು ವ್ಯವಸ್ಥೆಗೆ ಆಧುನೀಕರಣದ ಸ್ಪರ್ಶ ನೀಡಲಾಗುತ್ತಿದೆ. ಶೀಘ್ರದಲ್ಲೇ ದೇಶಾದ್ಯಂತ ಬುಲೆಟ್ ಟ್ರೇನ್‌ಗಳ ಸದ್ದು ಕೇಳಲಿದ್ದು, ಈ ಯೋಜನೆಯಲ್ಲೂ ಕರ್ನಾಟಕಕ್ಕೆ ಆದ್ಯತೆ ನೀಡಿದ್ದಾರೆ.

ಪ್ರಧಾನಿ ಮೋದಿಯವರ ಸಂಕಲ್ಪದಂತೆ ಪ್ರತಿಯೊಂದು ಗ್ರಾಮವೂ ಆಧುನಿಕ ತಂತ್ರಜ್ಞಾನದ ಸ್ಪರ್ಶ ಪಡೆದು, ರೈತರ ಬದುಕು ಹಸನಾಗುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಲಾಗಿದೆ. ಪಿಎಂ–ಕಿಸಾನ್ ಯೋಜನೆಯಡಿ ಕರ್ನಾಟಕದ 58 ಲಕ್ಷಕ್ಕೂ ಹೆಚ್ಚು ರೈತರಿಗೆ 13,669 ಕೋಟಿ ರೂ.ಗಳನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ. ಪ್ರಧಾನಮಂತ್ರಿ ಬೆಳೆ ವಿಮೆ ಸಾಲ ಹಾಗೂ ವಿಮೆ ಯೋಜನೆಯಡಿ 2500 ಕೋಟಿ ರೂ. ಪರಿಹಾರ ನೀಡಲಾಗಿದೆ. ಕಿಸಾನ್ ಕ್ರೆಡಿಟ್ ಮಿತಿಯನ್ನು 3ರಿಂದ 5 ಲಕ್ಷಕ್ಕೆ ಏರಿಸಲಾಗಿದೆ.

ರಾಜ್ಯದಲ್ಲಿ ಪ್ರಧಾನಮಂತ್ರಿ ವಸತಿ ಯೋಜನೆಯಡಿ 8 ಲಕ್ಷ ಕುಟುಂಬಗಳಿಗೆ ಮನೆಗಳು ಮಂಜೂರಾಗಿದ್ದು, ಇದರಲ್ಲಿ 4.45 ಲಕ್ಷಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸಲಾಗಿದೆ. ಆಯುಷ್ಮಾನ್ ಯೋಜನೆಯಡಿ ಪ್ರತಿಯೊಬ್ಬರಿಗೂ ಆರೋಗ್ಯ ಸೇವೆ ಖಾತರಿ ಜೊತೆಗೆ 70 ವರ್ಷ ಮೇಲ್ಪಟ್ಟ ಹಿರಿಯರಿಗೆ 5 ಲಕ್ಷ ರೂ.ವರೆಗೆ ಉಚಿತ ಚಿಕಿತ್ಸೆ ಕಲ್ಪಿಸಲಾಗಿದೆ. ಈವರೆವಿಗೂ 1.5 ಕೋಟಿಗೂ ಹೆಚ್ಚು ಜನ ಈ ಯೋಜನೆಯ ಅನುಕೂಲ ಪಡೆದುಕೊಂಡಿದ್ದಾರೆ.

ಅಧಿಕಾರಕ್ಕೆ ಬಂದ ಮೊದಲ ವರ್ಷದಿಂದಲೇ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯಡಿ ದೇಶದ ಕೋಟ್ಯಾಂತರ ಜನರಿಗೆ ಆಹಾರ ಧಾನ್ಯಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಇದರಲ್ಲಿ 75 ಲಕ್ಷ ಕರ್ನಾಟಕದ ಫಲಾನುಭವಿಗಳಿದ್ದಾರೆ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕದಲ್ಲಿ ಜಾರಿಯಲ್ಲಿದ್ದ ಭಾಗ್ಯಲಕ್ಷ್ಮೀ ಯೋಜನೆ ಮಾದರಿಯಲ್ಲಿ ಮೋದಿಯವರು ಆರಂಭಿಸಿದ ಸುಕನ್ಯಾ ಸಮೃದ್ಧಿ ಯೋಜನೆಯಡಿ ಕರ್ನಾಟಕದಲ್ಲಿ 27.6 ಲಕ್ಷ ಖಾತೆಗಳನ್ನು ತೆರೆಯಲಾಗಿದೆ.

ಶಾಸಕಾಂಗದಲ್ಲಿ ಶೇ.33ರಷ್ಟು ಮೀಸಲಾತಿ ತರುವ ನಿಟ್ಟಿನಲ್ಲಿ ನಾರಿ ಶಕ್ತಿ ವಂದನ್ ಅಧಿನಿಯಮವನ್ನು ಜಾರಿಗೆ ತಂದು ನೈಜ ಸ್ತ್ರೀ ಶಕ್ತಿಯ ಪ್ರತಿಷ್ಠಾಪನೆಗೆ ಮೋದಿ ಅವರು ಅಡಿಪಾಯ ಹಾಕಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯ ಚಾರಿತ್ರಿಕ ಮೈಲಿಗಲ್ಲು. ಯುವ ಸಮುದಾಯವನ್ನು ದೇಶದ ನೈಜ ಸಂಪನ್ಮೂಲ ಎಂದು ಪರಿಗಣಿಸಿರುವ ಮೋದಿಯವರ ಸರ್ಕಾರ, ಸ್ಟಾರ್ಟ್ ಅಪ್ ಇಂಡಿಯಾ ಯೋಜನೆ ರೂಪಿಸಿದೆ. ರಾಜ್ಯದಲ್ಲಿ 12,353 ನವೋದ್ಯಮ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು ದೇಶದ ಕ್ಷಿಪ್ರ ಬೆಳವಣಿಗೆಯ ಸಂಕೇತವಾಗಿದೆ. ಐಐಟಿ, ಐಐಐಟಿ ಮತ್ತು ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿದೆ. ಯುವ ಶಕ್ತಿಯನ್ನು ಮತ್ತಷ್ಟು ಉತ್ತೇಜಿಸುವ ಯೋಜನೆಗಳಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಭಾರತೀಯರ ಐದು ಶತಮಾನಗಳ ಕನಸು ಸಾಕಾರಗೊಳಿಸುವ ನಿಟ್ಟಿನಲ್ಲಿ ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣ ಮಾಡಲಾಗಿದೆ. ಕರುನಾಡಿನ ಮೈಸೂರಿನಿಂದ ಬಾಲರಾಮನನ್ನು ಸ್ವಾಗತಿಸಿ, ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಮೈಸೂರಿನ ಚಾಮುಂಡೇಶ್ವರಿ ದೇವಾಲಯ ಸೇರಿದಂತೆ ಉಡುಪಿ, ಬೀದರ್ ಹಾಗೂ ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮನ ಕ್ಷೇತ್ರಗಳನ್ನು ಪ್ರಸಾದ್ ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ.

ಹೀಗೆ ಮೋದಿಯವರ 11 ವರ್ಷಗಳ ಯೋಜನೆ ಹಾಗೂ ಸಾಧನೆಗಳನ್ನು ಒಂದು ಲೇಖನದಲ್ಲಿ ವಿವರಿಸಲಾಗದು. ದೇಶದ ಅಭಿವೃದ್ಧಿ ಹಾಗೂ ರಾಷ್ಟ್ರದ ಸುರಕ್ಷತೆ ವಿಷಯದಲ್ಲಿ ಮೋದಿಯವರು ರಾಜಿ ಮಾಡಿಕೊಂಡ ಒಂದೇ ಒಂದು ಉದಾಹರಣೆ ಇಲ್ಲ. ಭಾರತದ ಸಿರಿ ಕಿರೀಟ ಕಾಶ್ಮೀರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಆರ್ಟಿಕಲ್ 370ಯನ್ನು ರದ್ದು ಮಾಡುವ ಮೂಲಕ ಸಾರ್ವಭೌಮ ಭಾರತದ ಶಕ್ತಿಯನ್ನು ಜಗತ್ತಿಗೆ ಪರಿಚಯಿಸಲಾಗಿದೆ. ಭಾರತದ ಅಖಂಡತೆಗೆ ಹಾಗೂ ಶಾಂತಿಗೆ ನಿರಂತರ ಭಂಗ ತರುತ್ತಿದ್ದ ಭಯೋತ್ಪಾದಕ ಶಕ್ತಿಯನ್ನು ಕಿತ್ತೊಗೆಯುವ ನಿಟ್ಟಿನಲ್ಲಿ ಸರ್ಜಿಕಲ್ ಸ್ಟ್ರೈಕ್ ಹಾಗೂ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಇನ್ನೂ ಹಸಿರಾಗಿವೆ. ಭಾರತ ಸ್ನೇಹಕ್ಕೂ ಬದ್ಧ, ಸಮರಕ್ಕೂ ಸಿದ್ಧ ಎಂಬ ಸಂದೇಶ ರವಾನಿಸಲಾಗಿದೆ. ರಾಜತಾಂತ್ರಿಕ ಮಾರ್ಗದಲ್ಲಿ ನೈಪುಣ್ಯತೆಯನ್ನು ಸಾಧಿಸಿ ಅಮೇರಿಕಾ ಒಡ್ಡಿದ ಸುಂಕ ಸವಾಲನ್ನು ಮೆಟ್ಟಿ ನಿಂತು ಜಾಗತಿಕ ಮಟ್ಟದಲ್ಲಿ ಶಕ್ತಿ ಪ್ರದರ್ಶಿಸಲಾಗಿದೆ. ಮೋದಿಯವರ ಜಾಗತಿಕ ನಾಯಕತ್ವಕ್ಕೆ ಮಣಿದಂತಿರುವ ಟ್ರಂಪ್ ಮಾತುಕತೆ ಬಾಗಿಲು ತೆರೆದಿದ್ದಾರೆ.

ಶತ್ರು ರಾಷ್ಟ್ರಗಳ ಬೆದರಿಕೆ ಹಾಗೂ ದೇಶದೊಳಗಿನ ಸ್ವಾರ್ಥ ವಿದ್ರೋಹಿ ಶಕ್ತಿಗಳನ್ನು ಮೆಟ್ಟಿ ನಿಂತು, ಭಾರತದ ಸಾರ್ವಭೌಮತ್ವಕ್ಕಾಗಿ ತಮ್ಮ ಇಡೀ ಜೀವನವನ್ನು ಸಮರ್ಪಿಸಿಕೊಂಡಿರುವ ಮೋದಿ ಅವರು, ನೂರ್ಕಾಲ ಬಾಳಬೇಕು. ಮೋದಿ ಸರ್ಕಾರದ ಯೋಜನೆ, ಸಾಧನೆಗಳು ಭಾರತ ಜಾಗತಿಕ ಮಟ್ಟದಲ್ಲಿ ಸ್ವಾಭಿಮಾನದಿಂದ ಮುಂಚೂಣಿಯತ್ತ ಸಾಗಿದೆ. ಮೋದಿಯವರ ಸೇವೆ, ಆಡಳಿತ ಇನ್ನೂ ಹಲವು ವರ್ಷಗಳ ಕಾಲ ಈ ದೇಶಕ್ಕೆ ಅವಶ್ಯವಿದೆ.

ಅರಮನೆ ದರ್ಬಾರ್ ಹಾಲ್‌ನಲ್ಲಿ 'ಸಿಂಹಾಸನ', ಕನ್ನಡಿ ತೊಟ್ಟಿಯಲ್ಲಿ 'ಭದ್ರಾಸನ' ಜೋಡಣೆ

● ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಮ್ಮುಖದಲ್ಲಿ ಜೋಡಣಾ ಕಾರ್ಯ ● ಬಿಗಿ ಭದ್ರತೆಯಲ್ಲಿ ಸ್ಟ್ರಾಂಗ್ ರೂಮ್‌ನಿಂದ ಬಿಡಿಭಾಗ ರವಾನೆ



ಅರಮನೆ ದರ್ಬಾರ್ ಹಾಲ್‌ನಲ್ಲಿ ಚಿನ್ನದ ಸಿಂಹಾಸನ ಜೋಡಣೆ ಮಾಡಿರುವುದು.

ಮೈಸೂರು,ಸೆ.16(ಎಂಟಿವೈ)–ದಸರಾ ಮಹೋತ್ಸವದ ವೇಳೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನಡೆಸುವ ಖಾಸಗಿ ದರ್ಬಾರ್‌ಗಾಗಿ ಮಂಗಳವಾರ ಅರಮನೆಯ ಸ್ಟ್ರಾಂಗ್ ರೂಮ್‌ನಿಂದ ಚಿನ್ನದ ಸಿಂಹಾಸನ ಹಾಗೂ ಬೆಳ್ಳಿ ಭದ್ರಾಸನದ ಬಿಡಿಭಾಗಗಳನ್ನು ಬಿಗಿ ಭದ್ರತೆಯಲ್ಲಿ ತಂದು ದರ್ಬಾರ್ ಹಾಲ್ ಹಾಗೂ ಕನ್ನಡಿ ತೊಟ್ಟಿಯಲ್ಲಿ ಜೋಡಣೆ ಮಾಡಲಾಯಿತು.

ನವರಾತ್ರಿ ವೇಳೆ ಅರಮನೆಯ ಒಳಾಂಗಣದಲ್ಲಿ ಯದುವಂಶದ ಪರಂಪರೆಯಂತೆ ಖಾಸಗಿ ದರ್ಬಾರ್ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯ ಜರುಗಲಿದ್ದು, ಅದಕ್ಕಾಗಿ ಸಿದ್ಧತೆ ಮಾಡಿ ಕೊಳ್ಳಲಾಗುತ್ತಿದೆ. ರಾಜವಂಶಸ್ಥರು ನವರಾತ್ರಿ ವೇಳೆ ರತ್ನ ಖಚಿತ ಸಿಂಹಾಸನವೇರಿ ಖಾಸಗಿ ದರ್ಬಾರ್ ನಡೆಸುವ ಸಂಪ್ರದಾಯವಿದ್ದು, ಅದಕ್ಕಾಗಿ ಇಂದು ಸಿಂಹಾಸನ ಹಾಗೂ ಭದ್ರಾಸನ ಜೋಡಣಾ ಕಾರ್ಯ ಪೂರ್ಣಗೊಳಿಸಲಾಯಿತು.

ಹೋಮದ ಬಳಿಕ ಸ್ಟ್ರಾಂಗ್ ರೂಮ್ ಓಪನ್: ಸಿಂಹಾಸನ ಜೋಡಣೆಗಾಗಿ ದರ್ಬಾರ್ ಹಾಲ್‌ನಲ್ಲಿ ಅರಮನೆಯ ಪುರೋಹಿತರು ಬೆಳಗ್ಗೆ 7.30ಕ್ಕೆ ಗಣಪತಿ, ಚಾಮುಂಡೇಶ್ವರಿ ಪೂಜೆ, ನವಗ್ರಹ ಹೋಮ, ಶಾಂತಿ ಪೂಜೆ ನೆರವೇರಿಸಿದ ಬಳಿಕ ವಿವಿಧ ಹೋಮ–ಹವನ ನಡೆಸಿದರು. ಅಂತಿಮವಾಗಿ ಪೂರ್ಣಾಹುತಿ ಬಳಿಕ, ರಾಜವಂಶಸ್ಥರ ಸೂಚನೆ ಮೇರೆಗೆ ಅರಮನೆಯಲ್ಲಿರುವ ಸ್ಟ್ರಾಂಗ್ ರೂಮ್ ತೆರೆಯಲಾಯಿತು.

ಬಿಡಿ ಭಾಗಗಳ ಸ್ಥಳಾಂತರ: ಸ್ಟ್ರಾಂಗ್ ರೂಮ್ ನಲ್ಲಿದ್ದ ಚಿನ್ನದ ಸಿಂಹಾಸನದ ಪೀಠ, ಛತ್ರಿ ಸೇರಿದಂತೆ 9 ಬಿಡಿ ಭಾಗಗಳನ್ನು ದರ್ಬಾರ್ ಹಾಲ್‌ಗೆ ಕೊಂಡೊಯ್ಯಲಾಯಿತು. ಬೆಳ್ಳಿಯ ಭದ್ರಾಸನದ 8 ಬಿಡಿ ಭಾಗಗಳನ್ನು ಕನ್ನಡಿ ತೊಟ್ಟಿಗೆ ಸಾಗಿಸಲಾಯಿತು. ನಂತರ ಬೆಳಗ್ಗೆ 10.45ರಿಂದ 11.15 ರೊಳಗೆ ಸಿಂಹಾಸನ ಜೋಡಣೆ ಮಾಡಿ, ಪೂಜೆ ಸಲ್ಲಿಸಿದ ಬಳಿಕ ಬೆಳ್ಳಿಯ ಭದ್ರಾಸನವನ್ನು ಸಹ ಜೋಡಣೆ ಮಾಡಲಾಯಿತು. ಬಳಿಕ ಪಟ್ಟದ ಆನೆ, ಪಟ್ಟದ ಕುದುರೆ ಹಾಗೂ ಪಟ್ಟದ ಹಸುವನ್ನು ಗೋಶಾಲೆಗೆ ಕರೆತರಲಾಯಿತು.

ಸಿಸಿ ಕ್ಯಾಮರಾಗಳಿಗೆ ಪರದೆ: ಸ್ಟ್ರಾಂಗ್ ರೂಮ್‌ನಿಂದ ಸಿಂಹಾಸನದ ಬಿಡಿಭಾಗಗಳನ್ನು ತರುವ ವೇಳೆ ಅರಮನೆಯ ಒಳಾಂಗಣದ ಮಾರ್ಗದಲ್ಲಿದ್ದ ಸಿಸಿ ಕ್ಯಾಮರಾಗಳಿಗೆ ಪರದೆ ಬಿಡಲಾಗಿತ್ತು. ಸಿಂಹಾಸನ ಜೋಡಣೆ ಮಾಡಿದ ನಂತರ ಸಿಂಹಾಸನಕ್ಕೂ ಪರದೆ ಬಿಡಲಾಯಿತು. ಸೆ.22ರಂದು ಮುಂಜಾನೆ 5.30ರಿಂದ 5.45ರೊಳಗೆ ಸಿಂಹಾಸನಕ್ಕೆ 'ಸಿಂಹ'ದ ಜೋಡಣೆ ಮಾಡಿದ ನಂತರ ಖಾಸಗಿ ದರ್ಬಾರ್ ನೆರವೇರಲಿದೆ.

ಅರಮನೆಯ ಸಿಬ್ಬಂದಿಗಳಿಂದಲೇ ಜೋಡಣೆ: ಚಿನ್ನದ ಸಿಂಹಾಸನ ಹಾಗೂ ಬೆಳ್ಳಿ ಭದ್ರಾಸನವನ್ನು ಈ ಹಿಂದೆ ನಂಜನಗೂಡು ತಾಲೂಕಿನ ಗೆಜ್ಜಗಳ್ಳಿಯಿಂದ ಕೆಲವರು ಬಂದು ವ್ಯವಸ್ಥಿತವಾಗಿ ಜೋಡಣೆ ಮಾಡುವ ಪದ್ಧತಿ ಅನುಸರಿಸುತ್ತಾ ಬರಲಾಗಿತ್ತು. ಆದರೆ, ಕಳೆದ ಕೆಲ ವರ್ಷಗಳಿಂದ ಅರಮನೆಯ ಸಿಬ್ಬಂದಿಗಳೇ ಸಿಂಹಾಸನ ಮತ್ತು ಭದ್ರಾಸನ ಜೋಡಣೆ ಮಾಡುತ್ತಿದ್ದಾರೆ. ಈ ಬಾರಿಯೂ ಅರಮನೆಯ ಸಿಬ್ಬಂದಿಯೇ ಜೋಡಣಾ ಕಾರ್ಯ ನಡೆಸಿದರು. ಬಿಗಿ ಭದ್ರತೆ ಹಿನ್ನೆಲೆಯಲ್ಲಿ ಸಿಂಹಾಸನ ಜೋಡಣಾ ಕಾರ್ಯಕ್ಕೆ ನಿಯೋಜಿಸಲ್ಪಟ್ಟಿದ್ದ ಅರಮನೆ ಸಿಬ್ಬಂದಿ ಮೊಬೈಲ್ ಪಡೆದು ಲಾಕರ್‌ನಲ್ಲಿಡಲಾಗಿತ್ತು.

ಇಂದಿನಿಂದ ಯುವ ದಸರಾ ಟಿಕೆಟ್ ಮಾರಾಟ

ಮೈಸೂರು, ಸೆ.16(ಆರ್‌ಕೆ)– ವಿಶ್ವಪ್ರಸಿದ್ಧ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲೊಂದಾದ ಯುವ ದಸರಾ ಕಾರ್ಯಕ್ರಮಕ್ಕೆ ನಾಳೆ (ಸೆ.17)ಯಿಂದ ಆನ್‌ಲೈನ್‌ನಲ್ಲಿ ಟಿಕೆಟ್‌ಗಳನ್ನು ಖರೀದಿಸಬಹುದಾಗಿದೆ. ಬುಕ್ ಮೈ ಷೋದಲ್ಲಿ ಟಿಕೆಟ್‌ಗಳನ್ನು ಖರೀದಿ ಮಾಡಬಹುದಾಗಿದ್ದು, ಆಫ್‌ಲೈನ್‌ನಲ್ಲಿ ಟಿಕೆಟ್‌ಗಳು ಲಭ್ಯವಿರುವುದಿಲ್ಲ. ಆದರೆ ಯುವ ದಸರಾ ನಡೆಯುವ ಸ್ಥಳದಲ್ಲಿ ಅಂದಿನ ಕಾರ್ಯಕ್ರಮದ ಟಿಕೆಟ್‌ಗಳನ್ನು ಅಂದೇ ಮಾರಾಟ ಮಾಡಲಾಗುವುದು ಎಂದು ದಸರಾ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಈ ಬಾರಿ 5000 ರೂ. ಹಾಗೂ 2,500 ರೂ. ಟಿಕೆಟ್ ದರ ನಿಗದಿ ಮಾಡ ಲಾಗಿದ್ದು, ಒಂದು ಟಿಕೆಟ್‌ನಲ್ಲಿ ಒಬ್ಬರಿಗೆ ಮಾತ್ರ ಪ್ರವೇಶವಿರುತ್ತದೆ. ಸಾರ್ವಜನಿಕರು ಎಷ್ಟು ಟಿಕೆಟ್‌ಗಳನ್ನಾದರೂ ಖರೀದಿಸಬಹುದು, ಟಿಕೆಟ್ ಹೊಂದಿರುವವರಿಗೆ ವಿಶೇಷ ಆಸನ ವ್ಯವಸ್ಥೆ ಮಾಡಲಾಗುವುದು. ಒಬ್ಬರಿಗೆ ಇಂತಿಷ್ಟೇ ಟಿಕೆಟ್ ಎಂಬ ಮಿತಿ ಇರಲ್ಲ. ಟಿಕೆಟ್ ಇಲ್ಲದೆಯೂ ಉಚಿತವಾಗಿ ಕಾರ್ಯಕ್ರಮವನ್ನು ವೀಕ್ಷಿಸುವ ವ್ಯವಸ್ಥೆ ಇರುತ್ತದೆ. ಕಳೆದ ವರ್ಷ ಯುವ ದಸರಾಗೆ 8000 ರೂ., 5000 ರೂ. ಹಾಗೂ 2,500 ರೂ. ಟಿಕೆಟ್ ದರ ನಿಗದಿ ಮಾಡಲಾಗಿತ್ತು. ಆದರೆ ಈ ಬಾರಿ ಯುವ ದಸರಾ ಉಪಸಮಿತಿಯು ಟಿಕೆಟ್ ದರವನ್ನು ಕಡಿಮೆ ಮಾಡಿದೆ ಎಂದು ತಿಳಿಸಿದ್ದಾರೆ. ಸೆಪ್ಟೆಂಬರ್ 23ರಿಂದ 27ರವರೆಗೆ 5 ದಿನಗಳ ಕಾಲ ಮೈಸೂರಿನ ಉತ್ತನಹಳ್ಳಿ ಸಮೀಪ, ರಿಂಗ್ ರಸ್ತೆ ಬಳಿಯ ವಿಶಾಲ ಮೈದಾನದಲ್ಲಿ ಯುವ ದಸರಾ ಕಾರ್ಯಕ್ರಮಗಳು ನಡೆಯಲಿದ್ದು, ಅದಕ್ಕಾಗಿ ನಾಳೆಯಿಂದ ಸಿದ್ಧತಾ ಕಾರ್ಯ ಆರಂಭವಾಗಲಿದೆ. ಭವ್ಯ ವೇದಿಕೆ, ವಿದ್ಯುತ್ ಸಂಪರ್ಕ, ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ವಾಹನ ಗಳ ನಿಲುಗಡೆ ಸೇರಿದಂತೆ ಪ್ರೇಕ್ಷಕರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಲಾಗುವುದು. ಯುವಕ–ಯುವತಿಯರು, ಮಹಿಳೆಯರು ಹಾಗೂ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗುವುದು ಎಂದರು. ಸೆ.23ರಂದು ಮೊದಲ ದಿನ ಹೆಸರಾಂತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಸೆ.24 ಪ್ರೀತಮ್ ಚಕ್ರವರ್ತಿ, ಸೆ.25 ಜುಬಿನ್ ನೌಟಿಯಾಲ್, ಸೆ.26 ದೇವಿ ಶ್ರೀ ಪ್ರಸಾದ್, ಸೆ.27ರಂದು ಸುನಿಧಿ ಚೌಹಾನ್ ಅವರು ಕಲಾ ಪ್ರದರ್ಶನ ನೀಡಿ, ಯುವ ಸಮೂಹವನ್ನು ರಂಜಿಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಬಾನು ಮುಷ್ತಾಕ್ ದಸರಾ ಉದ್ಘಾಟನೆಗೆ ಕೋರ್ಟ್ ಹಸಿರು ನಿಶಾನೆ; ದಲಿತ ಮಹಾಸಭಾ ಸಂಭ್ರಮಾಚರಣೆ



ಮೈಸೂರಿನ ಟೌನ್‌ಹಾಲ್ ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ದಲಿತ ಮಹಾಸಭಾ ಮೈಸೂರು ವಿಭಾಗದಿಂದ ಸಂಭ್ರಮಾಚರಣೆ ನಡೆಸಲಾಯಿತು.


ಮೈಸೂರು, ಸೆ.16(ಎಂಕೆ)– ನಾಡ ಹಬ್ಬ ಮೈಸೂರು ದಸರಾ ಮಹೋತ್ಸವ–2025 ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಆಯ್ಕೆ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ಅರ್ಜಿ ವಜಾಗೊಂಡ ಹಿನ್ನೆಲೆಯಲ್ಲಿ ದಲಿತ ಮಹಾಸಭಾ ಮೈಸೂರು ವಿಭಾಗದ ವತಿಯಿಂದ ಸಂಭ್ರಮಾಚರಣೆ ನಡೆಸಲಾಯಿತು.

ಮೈಸೂರಿನ ಟೌನ್‌ಹಾಲ್ ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಸಾಹಿತಿ ಬಾನು ಮುಷ್ತಾಕ್ ಭಾವಚಿತ್ರವುಳ್ಳ ಪೋಸ್ಟರ್‌ಗಳನ್ನು ಹಿಡಿದು, ಸಿಹಿ ಹಂಚಿ ಜೈಕಾರ ಕೂಗಿದರಲ್ಲದೆ ಸಂವಿಧಾನ, ಜಾತ್ಯಾತೀತ, ಸೌಹಾರ್ದತೆಯ ನಡಿಗೆ ಚಾಮುಂಡಿಯ ಕಡೆಗೆ ಸಂದ ಜಯವಾಗಿದೆ ಎಂದು ಸಂಭ್ರಮ ವ್ಯಕ್ತಪಡಿಸಿದರು.

ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರ ಆಯ್ಕೆ ಸಮರ್ಥವಾಗಿದ್ದು, ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋದವರಿಗೆ ಮುಖಭಂಗವಾಗಿದೆ. ನಾಡ ಹಬ್ಬ ಎಲ್ಲರೂ ಸೇರಿ, ಒಂದಾಗಿ ಆಚರಿಸುವ ಹಬ್ಬವಾಗಿದ್ದು, ಜಾತಿ–ಧರ್ಮಗಳ ಎತ್ತಿ ಕಟ್ಟುವ ಕೆಲಸ ಖಂಡನೀಯ ಎಂದರು.

ಕಾಂಗ್ರೆಸ್ ನಗರ ವಕ್ತಾರ ರಾಜೇಶ್, ಸಂಶೋಧಕರ ಸಂಘದ ರಾಜ್ಯಾಧ್ಯಕ್ಷ ಡಾ.ಮರಿದೇವಯ್ಯ, ಮುಖಂಡರಾದ ಅಹಿಂದ ಲೋಕೇಶ್, ನಂಜುಂಡಸ್ವಾಮಿ, ಚೆನ್ನಯ್ಯ, ಬಾಬು, ಇಬ್ರಾಹಿಂ, ಪ್ರಭುಸ್ವಾಮಿ, ಪುಟ್ಟಸ್ವಾಮಿ, ಬಸವಣ್ಣ, ಕಿರಣ್, ಶಿವರಾಜು, ಸಿದ್ದರಾಜು ಮತ್ತಿತರರಿದ್ದರು.

ಶ್ರೀ ಚನ್ನಕೇಶವ ಸ್ವಾಮಿ ವಿದ್ಯಾ ಸಂಸ್ಥೆಯ 52ನೇ ವಾರ್ಷಿಕೋತ್ಸವ



ಮೈಸೂರಿನ ಕಲಾಮಂದಿರದಲ್ಲಿ ನಡೆದ ಶ್ರೀ ಚನ್ನಕೇಶವಸ್ವಾಮಿ ವಿದ್ಯಾಸಂಸ್ಥೆಯ 52ನೇ ವಾರ್ಷಿಕೋತ್ಸವದಲ್ಲಿ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಸಂಸ್ಥೆಯ ವತಿಯಿಂದ ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಲಾಯಿತು.



ಕೆ.ಪಿ. ನಾಗರತ್ನಗೆ ಪಿಹೆಚ್.ಡಿ

ಮೈಸೂರು: ಡಾ. ಟಿ.ಕೆ. ಕೆಂಪೇಗೌಡ ಅವರ ಮಾರ್ಗದರ್ಶನದಲ್ಲಿ ಕೆ.ಪಿ. ನಾಗರತ್ನ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

2ನೇ ದಿನವೂ ಕೈಗಾರಿಕಾ ಪ್ರದೇಶಗಳಲ್ಲಿ ಕಾಲ್ನಡಿಗೆ ಜಾಗೃತಿ ಜಾಥಾ

ಕಾರ್ಖಾನೆಗಳಲ್ಲಿ ಕಾಯಂ, ಗುತ್ತಿಗೆ ನೌಕರರ ಬಗ್ಗೆ ತಾರತಮ್ಯ ಕುರಿತು ಜಾಗೃತಿ



ಎರಡನೇ ದಿನದ ಜಾಗೃತಿ ಜಾಥಕ್ಕೆ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವು ಚಾಲನೆ ನೀಡಿದರು.

ಮೈಸೂರು, ಸೆ.16(ಜಿಎ)– ನಾಮ ಫಲಕಗಳಲ್ಲಿ ಶೇ.60ಕ್ಕಿಂತಲೂ ಹೆಚ್ಚು ಕನ್ನಡ ಭಾಷೆ ಬಳಕೆ ಮಾಡಬೇಕು, ಕನ್ನಡಿಗರಿಗೆ ಕಡ್ಡಾಯವಾಗಿ ಉದ್ಯೋಗ ನೀಡಬೇಕು, ಕಾರ್ಖಾನೆಗಳಲ್ಲಿ ಕಾಯಂ ಮತ್ತು ಗುತ್ತಿಗೆ ನೌಕರರ ವೇತನ ಮತ್ತು ಊಟೋಪಚಾರಗಳಲ್ಲಿ ತಾರತಮ್ಯ ಮಾಡುತ್ತಿರುವುದನ್ನು ಖಂಡಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ಕೈಗಾರಿಕಾ ಪ್ರದೇಶಗಳಲ್ಲಿ ನಡೆಸುತ್ತಿರುವ ಕಾಲ್ನಡಿಗೆ ಜಾಥಾ ಮಂಗಳವಾರ ಎರಡನೇ ದಿನಕ್ಕೆ ಕಾಲಿಟ್ಟಿದ್ದು, ಇಂದು ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಜಾಗೃತಿ ಮೂಡಿಸಿದರು.

ಜಾಗೃತಿ ಜಾಥಾಕ್ಕೆ ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವು ಚಾಲನೆ ನೀಡಿದರು. ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಸಾಕಷ್ಟು ಕಾರ್ಖಾನೆಗಳಿದ್ದು, ಬಹುತೇಕ ಕಾರ್ಖಾನೆಗಳ ನಾಮಫಲಕಗಳಲ್ಲಿ ಕನ್ನಡ ಭಾಷೆ ಬಳಕೆಯಾಗಿದ್ದರೂ ಅದಕ್ಕೆ ಅಗ್ರಸ್ಥಾನ ನೀಡಿರಲಿಲ್ಲ, ಕಾಟಾಚಾರಕ್ಕೆ ಎಂಬಂತೆ ಸಣ್ಣ ಅಕ್ಷರಗಳಲ್ಲಿ ಕನ್ನಡ ಭಾಷೆ ಬಳಸಿರುವುದನ್ನು ಕಣ್ಣಾರೆ ಕಂಡ ರಾಜಶೇಖರ ಅವರು ಕಾರ್ಖಾನೆ ವ್ಯವಸ್ಥಾಪಕರು, ಮುಖ್ಯಸ್ಥರನ್ನು ಕರೆದು ನಾಮಫಲಕಗಳಲ್ಲಿ ಕನ್ನಡ ಭಾಷೆಗೆ ಅಗ್ರಸ್ಥಾನ ನೀಡುವಂತೆ ತಿಳಿ ಹೇಳಿದರು.

ಕಾರ್ಖಾನೆಗಳಲ್ಲಿ ಬಾಲಕಾರ್ಮಿಕರು ಮತ್ತು ವೃದ್ಧರಿಂದ ಕೆಲಸ ಮಾಡಿಸಬಾರದು, ವೇತನ ತಾರತಮ್ಯ ಬಹಳ ಇದೆ, ಸೆಕ್ಯೂರಿಟಿ ಗಾರ್ಡ್‌ಗಳಿಂದ 12 ಗಂಟೆ ಕೆಲಸ ಮಾಡಿಸಿಕೊಂಡು, ಕೇವಲ 9 ಸಾವಿರ ಸಂಬಳ ನೀಡುತ್ತಿದ್ದೀರಿ, ಅದರಲ್ಲೂ ಇಎಸ್‌ಐ, ಪಿಎಫ್ ಕಟಾವು ಮಾಡಿಕೊಂಡು ಕೇವಲ 6,500 ರೂ ಕೈಗೆ ಸಿಗುತ್ತದೆ. ಇದರಲ್ಲಿ ಸಂಸಾರ ನಡೆಸುವುದು ಹೇಗೆ? ಎಂದು ಪ್ರಶ್ನಿಸಿದರಲ್ಲದೇ, ಉದ್ಯೋಗದಲ್ಲಿ ಕನ್ನಡಿಗರಿಗೆ, ಸ್ಥಳೀಯರಿಗೆ ಆದ್ಯತೆ ನೀಡಬೇಕು. ಕಾರ್ಖಾನೆಗಳಲ್ಲಿ ಉತ್ತರ ಭಾರತೀಯರಿಗೆ ಕೆಲಸ ನೀಡುವುದರಲ್ಲಿ ಆದ್ಯತೆ ನೀಡುವ ನೀವು ನಮ್ಮ ನೆಲ, ಜಲ, ಪರಿಸರವನ್ನು ಬಳಸಿಕೊಂಡು ಕನ್ನಡಿಗರಿಗೆ ಉದ್ಯೋಗ ನೀಡುವಲ್ಲಿ ವಂಚಿಸುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿ, ಕಾರ್ಮಿಕರ ಶೋಷಣೆ ತಪ್ಪಿಸಬೇಕು, ಜತೆಗೆ ಪರಿಸರ ರಕ್ಷಣೆಗೆ ಮುಂದಾಗಬೇಕು ಎಂದು ಒತ್ತಾಯಿಸಿ ಕರಪತ್ರ ನೀಡಿ ಜಾಗೃತಿ ಮೂಡಿಸಿದರು.

> “ನಮ್ಮ ನೆಲ, ಜಲ, ವಿದ್ಯುತ್, ಪರಿಸರ ಮುಂತಾದವುಗಳನ್ನು ಬಳಸಿಕೊಂಡು ವ್ಯಾಪಾರ ವ್ಯವಹಾರ ನಡೆಸುವ ಸಣ್ಣ ಮತ್ತು ದೊಡ್ಡ ಮಟ್ಟದ ಕೈಗಾರಿಕಾ ಉದ್ಯಮಿಗಳು ಉದ್ಯೋಗ ಮಾತ್ರ ಸ್ಥಳೀಯರಿಗೆ ನೀಡುತ್ತಿಲ್ಲ, ಇದು ಅನ್ಯಾಯ ಇವರ ವಿರುದ್ಧ ಕನ್ನಡಾಂಬೆ ರಕ್ಷಣಾ ವೇದಿಕೆ ನಡೆಸುತ್ತಿರುವ ಹೋರಾಟಕ್ಕೆ ನಾವು ಬೆಂಬಲ ನೀಡುತ್ತಿದ್ದೇವೆ. –ಕೂರ್ಗಳ್ಳಿ ಮಹದೇವು, ಜಿಪಂ ಮಾಜಿ ಅಧ್ಯಕ್ಷರು

ಈ ಸಂದರ್ಭದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್, ಡಿಪಿಕೆ ಪರಮೇಶ್, ರಾಜ್ಯ ಖಜಾಂಚಿ ನಂಜುಂಡ, ಮೈಸೂರು ಜಿಲ್ಲಾ ಅಧ್ಯಕ್ಷ ಸಂತೋಷ್, ಜಿಲ್ಲಾ ಮಹಿಳಾ ವಿಭಾಗದ ಅಧ್ಯಕ್ಷರಾದ ಮಂಜುಳ, ಪದಾಧಿಕಾರಿಗಳಾದ ಸಿಂಧುವಳ್ಳಿ ಶಿವಕುಮಾರ್, ಮನುಗೌಡ, ಸೋಮಶೇಖರ, ಗೌತಮ್, ಅನುರಾಜ್‌ಗೌಡ, ಮಂಜುನಾಥ್, ಸಿದ್ದೇಗೌಡ, ಕಿಕ್ಕೇರಿ ಕಿರಣ, ಶಿವಕುಮಾರ್, ಹೊನ್ನೇಗೌಡ, ರವಿಗೌಡ, ನಾಗರಾಜು, ರಾಜೇಗೌಡ, ಮಹದೇವಸ್ವಾಮಿ, ನೇಹ, ಗುಂಗ್ರಾಲ್ ಛತ್ರ ಲೋಕೇಶ್, ಕಿರಣ ಮತ್ತಿತರರು ಪಾಲ್ಗೊಂಡಿದ್ದರು.

ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ

ಮೈಸೂರು: ದಸರಾ ಮಹೋತ್ಸವ ಅಂಗವಾಗಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ 2025ರ ದಸರಾ ವಸ್ತುಪ್ರದರ್ಶನವನ್ನು ಸೆ.22ರಿಂದ ಡಿ.21ರವರೆಗೆ ಆಯೋಜಿಸಲಾಗಿದೆ. ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಸಾರ್ವಜನಿಕರು, ಪ್ರವಾಸಿಗರು ವೀಕ್ಷಿಸುವ ಸಲುವಾಗಿ ಲಲಿತಕಲಾ ಮತ್ತು ಕರಕುಶಲ ಹಾಗೂ ಮಹಿಳಾ ಮತ್ತು ಮಕ್ಕಳ ವಿಭಾಗದಲ್ಲಿ ಕಲಾವಿದರು ಏಪ್ರಿಲ್–2025ರ ನಂತರ ಅಂದವಾಗಿ ರಚಿಸಿದ ಕಲಾಕೃತಿಗಳನ್ನು ಹಾಗೂ ಮಹಿಳೆಯರು ಮತ್ತು ಮಕ್ಕಳು ಮನೆಯಲ್ಲಿಯೇ ತಯಾರಿಸಿದ ಕಲಾಕೃತಿಗಳನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಕಚೇರಿ ವೇಳೆಯಲ್ಲಿ ಭೇಟಿ ನೀಡಬಹುದು ಅಥವಾ ಮೊಸಂ: 7204202444, 8431517909 ಸಂಪರ್ಕಿಸಬಹುದು.

ಡಾ.ರಾಜ್‌ಕುಮಾರ್ ವೃತ್ತ ಫಲಕ ಅಳವಡಿಕೆಗೆ ಆಗ್ರಹ

ಪಾಲಿಕೆ ಆಯುಕ್ತರಿಗೆ ಕರ್ನಾಟಕ ಸೇನಾಪಡೆ ಮನವಿ



ಡಾ.ರಾಜ್‌ಕುಮಾರ್ ವೃತ್ತದಲ್ಲಿ ಫಲಕ ನಿರ್ಮಾಣಕ್ಕೆ ಆಗ್ರಹಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಸೆ.16(ಎಂಕೆ)– ಮೈಸೂರಿನ ಡಾ.ರಾಜ್‌ಕುಮಾರ್ ವೃತ್ತದಲ್ಲಿ (ಫೌಂಟೇನ್ ಸರ್ಕಲ್) ಕಾಣೆಯಾಗಿರುವ ಡಾ.ರಾಜ್‌ಕುಮಾರ್ ಹೆಸರಿನ ನಾಮಫಲಕವನ್ನು ಹೊಸದಾಗಿ ಇಲ್ಲವೆ ಮತ್ತೆ ಅಳವಡಿಸುವಂತೆ ನಗರಪಾಲಿಕೆ ಆಯುಕ್ತರಿಗೆ ಕರ್ನಾಟಕ ಸೇನಾಪಡೆ ವತಿಯಿಂದ ಮನವಿ ಸಲ್ಲಿಸಲಾಯಿತು.

ಬೆಂಗಳೂರು ಕಡೆಯಿಂದ ಮೈಸೂರಿಗೆ ಬರುವ ಎಲ್ಲಾ ವಾಹನಗಳು ಈ ವೃತ್ತದ ಮೂಲಕ ಹಾದುಹೋಗಬೇಕಾಗಿದ್ದು, ಮೊದಲೆಲ್ಲಾ ವಾಡಿಕೆಯಂತೆ ಈ ವೃತ್ತ ವನ್ನು ಫೌಂಟೇನ್ ವೃತ್ತ ಎಂದು ಕರೆಯ ಲಾಗುತ್ತಿತ್ತು. ಆದರೆ ಪಾಲಿಕೆ ವತಿಯಿಂದಲೇ ಈ ವೃತ್ತಕ್ಕೆ ಡಾ.ರಾಜ್‌ಕುಮಾರ್ ವೃತ್ತವೆಂದು ನಾಮಕರಣ ಮಾಡಿ, ನಾಮ ಫಲಕ ಅಳವಡಿಸಲಾಗಿತ್ತು. ಆದರೆ, ಇತ್ತೀಚೆಗೆ ನಾಮಫಲಕವನ್ನು ತೆಗೆದು ಬಸ್ ಪ್ರಯಾಣಿಕರಿಗೆ ತಂಗುದಾಣ ನಿರ್ಮಿಸಲಾಗುತ್ತಿದ್ದು, ಕೂಡಲೇ ವೃತ್ತದಲ್ಲಿ ಡಾ.ರಾಜ್‌ಕುಮಾರ್ ವೃತ್ತ ನಾಮಫಲಕ ಅಳವಡಿಸಬೇಕು ಎಂದು ಮನವಿ ಮಾಡಲಾಯಿತು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮುಖಂಡರಾದ ಗೋಲ್ಡನ್ ಸುರೇಶ್, ಪ್ರಭುಶಂಕರ್, ಬೋಗಾದಿ ಸಿದ್ದೇಗೌಡ, ಕೃಷ್ಣಪ್ಪ, ರಾಧಾಕೃಷ್ಣ, ಹನುಮಂತಯ್ಯ, ರಘು ಅರ್ಸ್, ದರ್ಶನ್‌ಗೌಡ ಉಪಸ್ಥಿತರಿದ್ದರು.

ದಸರಾ ಮನೆ–ಮನೆ ಗೊಂಬೆ ಸ್ಪರ್ಧೆ

ಮೈಸೂರು,ಸೆ.16(ಜಿಎ)– ರಾಜೀವ್ ಸ್ನೇಹ ಬಳಗ, ವಿಪ್ರ ಮಹಿಳಾ ಬಳಗ ಹಾಗೂ ಕೃಷ್ಣ ಕಾಲಿಂಗ್ ಚಾರಿಟೆಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ನಗರದ ನಿವಾಸಿಗಳಿಗಾಗಿ ದಸರಾ ಹಬ್ಬದ ಪ್ರಯುಕ್ತ ಮನೆ ಮನೆ ಗೊಂಬೆ ಸ್ಪರ್ಧೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಹಿಳಾ ಬಳಗದ ಅಧ್ಯಕ್ಷೆ ಡಾ.ಲಕ್ಷ್ಮಿ ಈ ವಿಷಯ ತಿಳಿಸಿ, ಸೆ.22ರಿಂದ ಅ.2ರವರೆಗೆ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಮೊದಲನೇ ಬಹುಮಾನ–25 ಸಾವಿರ, 2ನೇ ಬಹುಮಾನ–15 ಸಾವಿರ, ತೃತೀಯ ಬಹುಮಾನ–10 ಸಾವಿರ ಹಾಗೂ 25 ಮಂದಿಗೆ ತಲಾ 1 ಸಾವಿರದಂತೆ ಸಮಾಧಾನಕರ ಬಹುಮಾನ ನೀಡಲಾಗುವುದು. ಆಸಕ್ತರು ವಾಟ್ಸಪ್ ಸಂಖ್ಯೆ 99001 52867 ಅಥವಾ 9611966290ಗೆ ತಮ್ಮ ಮನೆಯಲ್ಲಿ ಕೂರಿಸಿರುವ ಗೊಂಬೆ ಪ್ರದರ್ಶನದ ಫೋಟೋ ಕಳುಹಿಸಬೇಕು. ತೀರ್ಪುಗಾರರು ನಂತರ ಮನೆಗಳಿಗೆ ಭೇಟಿ ನೀಡಿ ಬಹುಮಾನ ನಿರ್ಧರಿಸಲಿದ್ದಾರೆ ಎಂದರು.

ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ವಾಸವಾಗಿರುವ ಜನತೆಗೆ ಮಾತ್ರ ಅವಕಾಶವಿದ್ದು, ವ್ಯವಸ್ಥಿತವಾಗಿ, ವಿಷಯಾಧಾರಿತವಾಗಿ ದಸರೆಯ ಗೊಂಬೆಗಳನ್ನು ಸುಂದರವಾಗಿ ಅಲಂಕರಿಸಿ ನವರಾತ್ರಿ ಹಿನ್ನೆಲೆಯಲ್ಲಿ ಜೋಡಿಸಿರಬೇಕು ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕೃಷ್ಣ ಕಾಲಿಂಗ್‌ನ ಕೆ.ಆರ್.ಗಣೇಶ್‌ರಾವ್, ಸುಮತಿ ಸುಬ್ರಹ್ಮಣ್ಯ, ರಾಧಿಕಾ ರವಿ, ಸುಧಾ, ಸಿಂಧು ಉಪಸ್ಥಿತರಿದ್ದರು.

ವೃಂದೆ ನಾಟಕ ಪ್ರದರ್ಶನ

ಮೈಸೂರು,ಸೆ.16(ಜಿಎ)–ಮೈಸೂರಿನ ಕಲಾಸುರುಚಿ ಸಂಸ್ಥೆಯಿಂದ ರಮಾಗೋವಿಂದ ರಂಗಮಂದಿರದಲ್ಲಿ ಸೆ.19 ಮತ್ತು 20ರಂದು ಸಂಜೆ 6.30ಕ್ಕೆ ಅಲಕಾ ಕಟ್ಟೆಮನೆ ರಚನೆ ಹಾಗೂ ರಾಜಶೇಖರ ಕದಂಬ ನಿರ್ದೇಶನದ ವೃಂದೆ ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಸದಸ್ಯ ಕೆ.ನಾಗರಾಜ್ ಈ ವಿಷಯ ತಿಳಿಸಿ, ಪುರಾಣ ಆಧಾರಿತ ಕಥೆಗೆ ಮರುಸ್ಪರ್ಶ ನೀಡಲಾಗಿದೆ. ನರಸಿಂಹಕುಮಾರ್ ರಂಗ ಸಜ್ಜಿಕೆಯನ್ನು, ಬಿ.ಆರ್.ರವೀಶ್ ಅವರು ಸಂಗೀತ, ಅಶ್ವತ್ಥ್ ಕದಂಬ ವಸ್ತ್ರ ವಿನ್ಯಾಸ, ಜೀವನ್ ಕುಮಾರ್ ಹೆಗ್ಗೋಡು ಬೆಳಕಿನ ನಿರ್ವಹಣೆ ಮಾಡುವರು ಎಂದರು. ಗೋಷ್ಠಿಯಲ್ಲಿ ರಾಜಶೇಖರ್ ಕದಂಬ, ಅಲಕಾ ಕಟ್ಟೇಮನೆ, ಎಂ.ಪ್ರದೀಪ್ ಉಪಸ್ಥಿತರಿದ್ದರು.

ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿರುವ ರಸ್ತೆ, ವೃತ್ತ....





ದಸರಾ ಮಹೋತ್ಸವಕ್ಕೆ ಇನ್ನೈದು ದಿನಗಳು ಬಾಕಿ ಇದ್ದು, ನಗರವನ್ನು ವಿದ್ಯುತ್ ದೀಪಗಳಿಂದ ಶೃಂಗರಿಸುವ ಕಾರ್ಯ ಭರದಿಂದ ಸಾಗಿದೆ. ಈಗಾಗಲೇ ಪ್ರಮುಖ ರಸ್ತೆ, ವೃತ್ತಗಳಲ್ಲಿ ವರ್ಣರಂಜಿತ ದೀಪಗಳನ್ನು ಅಳವಡಿಸಿ ಪ್ರಯೋಗಾರ್ಥವಾಗಿ ಪ್ರದರ್ಶಿಸಲಾಗುತ್ತಿದೆ. ಅಂತೆಯೇ ಮಹಾರಾಜ ಕಾಲೇಜು ಮೈದಾನದ ಬಳಿಯ ಏಕಲವ್ಯ ವೃತ್ತದಲ್ಲಿ ವಿದ್ಯುತ್ ದೀಪಗಳಿಂದ ವಿಶೇಷ ಆಕೃತಿ ನಿರ್ಮಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಕೃಷ್ಣರಾಜ ಬುಲೇವಾರ್ಡ್ ರಸ್ತೆಯ ವಿಭಜಕದಲ್ಲಿನ ಮರಗಳೂ ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿರುವುದನ್ನು ಕಾಣಬಹುದು.

ಮೈಸೂರು ಮಿತ್ರ

ಸಭೆಗೆ ತಯಾರಾಗಿ ಬನ್ನಿ; ಇಲ್ಲ ಕ್ಷೇತ್ರ ಬಿಟ್ಟು ತೊಲಗಿ

ಶಾಸಕ ಹೆಚ್.ಟಿ.ಮಂಜು ಖಡಕ್ ಸೂಚನೆ



ತ್ರೈಮಾಸಿಕ ಕೆಡಿಪಿ ಸಭೆ ಶಾಸಕ ಹೆಚ್.ಟಿ.ಮಂಜು ಅಧ್ಯಕ್ಷತೆಯಲ್ಲಿ ನಡೆಯಿತು.

ಕೆ.ಆರ್.ಪೇಟೆ, ಸೆ.16– ಅಧಿಕಾರಿಗಳು ಜವಾಬ್ದಾರಿ ಅರಿತು ಕೆಡಿಪಿ ಸಭೆಗೆ ಪ್ರಗತಿಯ ವರದಿಯೊಂದಿಗೆ ಬನ್ನಿ, ಇಲ್ಲದಿದ್ದರೆ ನನ್ನ ಕ್ಷೇತ್ರದಿಂದ ಹೊರಹೋಗಬೇಕು ಎಂದು ಶಾಸಕ ಹೆಚ್.ಟಿ. ಮಂಜು ಅಧಿಕಾರಿಗಳ ವಿರುದ್ಧ ಗುಡುಗಿದರು.

ತಾಲೂಕಿನ ಚಿಕ್ಕೋನಹಳ್ಳಿ ರೇಷ್ಮೆ ತರಬೇತಿ ಸಭಾಂಗಣದಲ್ಲಿ ನಡೆದ ತಾಲೂಕು ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಅಧಿಕಾರಿಗಳು ಕಾಲಹರಣ ಮಾಡಿದರೆ ಸಹಿಸುವುದಿಲ್ಲ. ಕಳೆದ ಸಭೆಯಲ್ಲಿ ನೀಡಿದ ಅಂಕಿ–ಅಂಶವನ್ನೇ ಸ್ವಲ್ಪ ಬದಲಾವಣೆ ಮಾಡಿ ಮತ್ತೆ ನೀಡಿರುವ ಹಲವು ಇಲಾಖೆಗಳ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಸರ್ಕಾರವು ಲಕ್ಷಾಂತರ ರೂ ವೇತನ ನೀಡುತ್ತದೆ. ಇದಕ್ಕೆ ತಕ್ಕಂತೆ ಕೆಲಸ ಮಾಡುವುದನ್ನು ಕಲಿಯಿರಿ. ಇಲ್ಲದಿದ್ದರೆ ಬೇರೆ ಕಡೆಗೆ ವರ್ಗಾವಣೆ ಮಾಡಿಸಿಕೊಂಡು ಹೋಗಿ ಎಂದು ಖಡಕ್ ಸೂಚನೆ ನೀಡಿದರು.

ಕಿಕ್ಕೇರಿಯ ಪೊಲೀಸ್ ಇನ್ಸ್‌ಪೆಕ್ಟರ್ ರೇವತಿ ಅವರಿಗೆ ಫೋನ್ ಮಾಡಿದರೆ, ಬಂದೂಕು ಕೊಡಿ ಶಾಸಕರು ಕರೆ ಮಾಡಿದ್ದಾರೆ ಶೂಟ್ ಮಾಡಿ ಕೊಲ್ಲೋದಾಗಿ ಬೆದರಿಕೆ ಹಾಕುತ್ತಾರೆ. ಇಂತಹ ಧಮ್ಕಿಯೆಲ್ಲ ನನ್ನ ಬಳಿ ನಡೆಯಲ್ಲ ಎಂದು ಸಭೆಗೆ ಆಗಮಿಸಿದ್ದ ಎಎಸ್‌ಐ ರಮೇಶ್ ಅವರಿಗೆ ಎಚ್ಚರಿಸಿದರು. ಈ ಸಂಬಂಧ ಗೃಹಇಲಾಖೆಗೆ ವರದಿ ನೀಡುವಂತೆ ತಿಳಿಸಿದರು. ಶಾಸಕರೊಂದಿಗೆ ಅಶಿಸ್ತಿನಿಂದ ವರ್ತಿಸುವುದು ಇಂತಹ ಇಲಾಖೆಗೆ ಅವಮಾನ ಎಂದು ಬೇಸರ ವ್ಯಕ್ತಪಡಿಸಿದರು.

ಹುದ್ದೆಯನ್ನು ವ್ಯಾಪಾರ ಮಾಡಿಕೊಂಡಿದ್ದೀರಿ ಆಡಿಯೋ, ವೀಡಿಯೋಗಳ ಸಾಕ್ಷಿ ಕೊಟ್ಟರೂ ಕ್ರಮ ತೆಗೆದುಕೊಂಡಿಲ್ಲ. ರೈಡ್ ಮಾಡ ಬೇಕಾದಾಗ ಅಧಿಕಾರಿಗಳೇ ಮಾಹಿತಿ ಕೊಟ್ಟು ಹೋಗುತ್ತೀರಿ ಎಂದು ಅಬಕಾರಿ ಇನ್ಸ್‌ಪೆಕ್ಟರ್ ರಾಚಪ್ಪಾಜಿ ಸ್ವಾಮಿಗೆ ತರಾಟೆ ತೆಗೆದುಕೊಂಡರು. ಆಲೇನಹಳ್ಳಿ ಡೇರಿ ಕಾರ್ಯದರ್ಶಿ ಐದಾರು ಲಕ್ಷ ಅವ್ಯವಹಾರ ಮಾಡಿರೋದಾಗಿ ತಪ್ಪೊಪ್ಪಿ ಕೊಂಡಿದ್ದಾರೆ. ಅವರಿಂದ ಆ ಹಣ ವಸೂಲಿ ಮಾಡುವಂತೆ ಸಿಡಿಒ ಭರತಕುಮಾರ್‌ಗೆ ಹೇಳಿದರು.

ತಾಪಂ ಆಡಳಿತಾಧಿಕಾರಿ ಆಶಾ, ತಾಪಂ ಇಒ ಸುಷ್ಮಾ ಗ್ರೇಡ್2 ತಹಸೀಲ್ದಾರ್ ಲೋಕೇಶ್, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ಅಗ್ರಹಾರ ಬಾಚಹಳ್ಳಿ ಎ.ಬಿ.ಕುಮಾರ್, ತಾಲೂಕು ಯೋಜನಾಧಿಕಾರಿ ಶ್ರೀನಿವಾಸ್, ಕೆಡಿಪಿ ಸದಸ್ಯರಾದ ಬೀರುವಳ್ಳಿ ಆಕಾಶ್, ಬೂಕನಕೆರೆ ಮಲ್ಲಿಕಾರ್ಜುನ್, ಇಲ್ಯಾಸ್ ಪಾಷಾ, ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ.ತಿಮ್ಮೇಗೌಡ, ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್. ಯತೀಶ್, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಡಾ.ದಿವಾಕರ್, ಪಶು ವೈದ್ಯ ಸಹಾಯಕ ನಿರ್ದೇಶಕ ಡಾ.ಹೆಚ್. ಎಸ್. ದೇವರಾಜು, ತಾಲೂಕು ಆರೋಗ್ಯಾಧಿಕಾರಿ ಡಾ. ಅಜಿತ್, ತಾಲೂಕು ಅರಣ್ಯಾಧಿಕಾರಿ ಡಾ. ಅನಿತಾ ಬಿಸಿಎಂ ಅಧಿಕಾರಿ ಎಂ.ಎನ್. ವೆಂಕಟೇಶ್, ಚೆಸ್ಕಾಂ ಇಇ ಪುಟ್ಟಸ್ವಾಮಿ, ಎಇಇ ಶಂಕರ್, ಕೆಪಿಟಿಸಿಎಲ್ ಎಇಇ ಮಂಜುನಾಥ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳಿದ್ದರು

ಜಾತಿ ಗಣತಿ ವೇಳೆ 'ಒಕ್ಕಲಿಗ' ಎಂದೇ ನಮೂದಿಸಿ

ಜಾಗೃತಿ ಸಭೆಯಲ್ಲಿ ಆದಿ ಚುಂಚನಗಿರಿ ಸೇರಿ ಮೂವರು ಶ್ರೀಗಳ ಕರೆ



ಬಿಜಿಎಸ್ ಸಮುದಾಯ ಭವನದಲ್ಲಿ ನಡೆದ ಒಕ್ಕಲಿಗರ ಜನಜಾಗೃತಿ ಸಭೆಯನ್ನುದ್ದೇಶಿಸಿ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು.

ಮಂಡ್ಯ: ರಾಜ್ಯದಲ್ಲಿ 2ನೇ ಅತಿದೊಡ್ಡ ಸಮುದಾಯವಾಗಿರುವ 'ಒಕ್ಕಲಿಗ' ಸಮುದಾಯಕ್ಕೆ ಮೀಸಲಾತಿಯಲ್ಲಿ ಬಹಳ ಅನ್ಯಾಯವಾಗಿದ್ದು, ಇದನ್ನು ಪಡೆಯಬೇಕಾದರೆ ಸೆ.22ರಿಂದ ಆರಂಭವಾಗಲಿರುವ ಜಾತಿ ಜನಗಣತಿಯಲ್ಲಿ ಕಡ್ಡಾಯವಾಗಿ ಒಕ್ಕಲಿಗ ಎಂದು ನಮೂದಿಸುವಂತೆ ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸ್ಪಟಿಕಪುರಿ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಸ್ವಾಮೀಜಿ, ಕೆಂಗೇರಿಯ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದ ನಾಥ ಸ್ವಾಮೀಜಿ ಒಕ್ಕೊರಲಿನ ಕರೆ ನೀಡಿದ್ದಾರೆ.

ನಗರದ ಬಿಜಿಎಸ್ ಸಮುದಾಯ ಭವನದಲ್ಲಿ ರಾಜ್ಯ ಒಕ್ಕಲಿಗರ ಸಂಘ, ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಸಹಯೋಗದಲ್ಲಿ ಮಂಗಳವಾರ ನಡೆದ 'ಜಾತಿ ಜನಗಣತಿ: ಒಕ್ಕಲಿಗ ಸಮುದಾಯದ ಜಾಗೃತಿ ಸಭೆ'ಯಲ್ಲಿ ಮಾತನಾಡಿದ ಶ್ರೀಗಳು, ಕಾಂತರಾಜು ಆಯೋಗ ಸರ್ಕಾರಕ್ಕೆ ನೀಡಿದ ಜಾತಿ ಗಣತಿ ವರದಿಯಲ್ಲಿ ಒಕ್ಕಲಿಗರು 6ನೇ ಸ್ಥಾನದಲ್ಲಿದ್ದಾರೆ ಎಂದು ತೋರಿಸಲಾಗಿತ್ತು. ಮೀಸಲಾತಿ ಇಲ್ಲದಿದ್ದರೆ ಏನೂ ಆಗಲ್ಲ. ಒಕ್ಕಲಿಗ ಸಮುದಾಯಕ್ಕೆ ಕೇವಲ ಶೇ.4ರಷ್ಟು ಮಾತ್ರ ಮೀಸಲಾತಿ ಕೊಟ್ಟಿದ್ದಾರೆ. ಹಾಗಾಗಿ ನಾವೆಲ್ಲ ಒಂದೇ ಎಂದು ತೋರಿಸದಿದ್ದರೆ ಬೇರೆಯವರು ಕಾನೂನುಬದ್ಧವಾಗಿ ನಮ್ಮನ್ನು ಒಡೆದಾಳುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿದರು.

ಅನ್ಯಾಯವಾದರೆ ನಾವು ಸುಮ್ಮನಿರಲ್ಲ: ಸ್ಫಟಿಕ ಪುರಿ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಸ್ವಾಮೀಜಿ ಮಾತನಾಡಿ, ಕಾಂತರಾಜು ಆಯೋಗದ ವರದಿಯಲ್ಲಿ ಒಕ್ಕಲಿಗರ ಸಂಖ್ಯೆಯನ್ನು ಬಹಳ ಕಡಿಮೆ ತೋರಿಸಲಾಗಿತ್ತು. ವೀರಶೈವರನ್ನು ಬಿಟ್ಟರೆ 2ನೇ ಸ್ಥಾನದಲ್ಲಿರುವ ಒಕ್ಕಲಿಗ ಸಮುದಾಯವನ್ನು 6ನೇ ಸ್ಥಾನದಲ್ಲಿದ್ದಾರೆ ಎಂದು ತೋರಿಸಲಾಗಿತ್ತು. ಇದನ್ನು ವಿರೋಧಿಸಿ ಕಾಂತರಾಜು ವರದಿಯನ್ನು ಪರಿಗಣಿಸಬಾರದು ಎಂದು ಸರ್ಕಾರದ ಮೇಲೆ ಒತ್ತಡ ಹಾಕಿದ್ದರಿಂದಾಗಿ ಮತ್ತೆ 2ನೇ ಬಾರಿಗೆ ಸಮೀಕ್ಷೆ ಮಾಡುತ್ತಿದ್ದು, ಒಕ್ಕಲಿಗರು ತಮ್ಮ ಉಪಜಾತಿಗಳನ್ನು ಹೇಳದೆ 'ಒಕ್ಕಲಿಗ' ಎಂದೇ ನಮೂದಿಸಬೇಕೆಂದು ಸಲಹೆ ನೀಡಿದರು.

ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ನಾಗರಾಜು ಅವರು, ಜಾತಿ ಜನಗಣತಿ ಸಂದರ್ಭ ಯಾವ ರೀತಿ ನಮೂದಿಸಬೇಕೆಂಬ ಬಗ್ಗೆ ನೆರೆದಿದ್ದ ಒಕ್ಕಲಿಗ ಮುಖಂಡರಿಗೆ ಮಾರ್ಗದರ್ಶನ ನೀಡಿದರು. ಜಾತಿ ಗಣತಿದಾರರು ನಿಮ್ಮ ಮನೆ ಬಾಗಿಲಿಗೆ ಬಂದಾಗ 'ಒಕ್ಕಲಿಗ' ಎಂದು ನಮೂದಿಸಬೇಕೆಂದು ಶಾಸಕ ಪಿ.ರವಿಕುಮಾರ್ ಮನವಿ ಮಾಡಿದರು.

ಒಕ್ಕಲಿಗರು ಜಾಗೃತರಾಗದಿದ್ದರೆ ನಷ್ಟ: ಜಾತಿ ಗಣತಿ ಸಂದರ್ಭ ಒಕ್ಕಲಿಗರು ಸೋಮಾರಿತನ ಮಾಡಿದರೆ ಮುಂದಿನ ತಲೆಮಾರಿಗೆ ಬಹಳ ನಷ್ಟ ಆಗುತ್ತದೆ. ಒಕ್ಕಲಿಗ ಸಮುದಾಯ ರಾಜ್ಯ ಮತ್ತು ರಾಷ್ಟ್ರವನ್ನು ಕಟ್ಟಿ ಆಳಿದವರು. ಆದ್ದರಿಂದ ನಾವೆಲ್ಲರೂ ಎಚ್ಚೆತ್ತು ಒಗ್ಗಟ್ಟಾಗಿ ಏಕತೆಯನ್ನು ಪ್ರದರ್ಶಿಸಬೇಕೆಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಕರೆ ನೀಡಿದರು.

ವೇದಿಕೆಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಎಸ್.ಡಿ.ಜಯರಾಮ್, ನೆಲ್ಲಿಗೆರೆ ಬಾಲು, ಮಂಡ್ಯ ಚಂದ್ರು, ರಾಘವೇಂದ್ರ, ವಿಶಾಲ್ ರಘು, ಸೋಮಶೇಖರ್, ಸುಜಾತ ಕೃಷ್ಣ, ಉಮೇಶ್ ಇತರರು ಭಾಗವಹಿಸಿದ್ದರು.

ಯದುಶೈಲರಿಗೆ ಕವಿತಾ ಸ್ಮಾರಕ ಪ್ರಶಸ್ತಿ ಪ್ರದಾನ



ಬೆಸಗರಹಳ್ಳಿಯ ಗ್ರಾಪಂ ಮಾಜಿ ಸದಸ್ಯೆ ಶ್ರೀಮತಿ ಕೆ. ಯದುಶೈಲ ಸಂಪತ್ ಅವರಿಗೆ ಕವಿತಾ ಸ್ಮಾರಕ ಪ್ರಶಸ್ತಿ ನೀಡಿ ಗಣ್ಯರು ಗೌರವಿಸಿದರು.

ಮಂಡ್ಯ, ಸೆ.16– ಮಂಡ್ಯದ ಕರ್ನಾಟಕ ಸಂಘ ಆಯೋಜಿಸಿದ್ದ ಕವಿತಾ ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಿಲ್ಲೆಯ ಬೆಸಗರ ಹಳ್ಳಿಯ ಗ್ರಾ.ಪಂ ಮಾಜಿ ಸದಸ್ಯೆ ಶ್ರೀಮತಿ ಕೆ.ಯದುಶೈಲ ಸಂಪತ್‌ರವರಿಗೆ 2025ನೇ ಸಾಲಿನ ಕವಿತಾ ಸ್ಮಾರಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕರ್ನಾಟಕ ಸಂಘದ ಆವರಣದಲ್ಲಿರುವ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆದ ಸಮಾರಂಭದಲ್ಲಿ ಯದುಶೈಲರವರಿಗೆ ಮೈಸೂರು ಪೇಟ ತೊಡಿಸಿ ಶಾಲು ಹೊದಿಸಿ ಫಲತಾಂಬೂಲ ನೀಡಿ, 15 ಸಾವಿರ ರೂ. ಚೆಕ್, ಪ್ರಶಸ್ತಿ ಫಲಕ ನೀಡಿ ಅಭಿನಂದಿಸಿದರು.

ಮೈಸೂರಿನ ವಿಶ್ರಾಂತ ಪ್ರಾಧ್ಯಾಪಕಿ ಡಾ. ಹೆಚ್.ಎಂ.ಹೇಮಲತಾ ಮಹಿಳಾ ಬದುಕಿನ ವಿಭಿನ್ನ ನೆಲೆಗಳು ಎಂಬ ವಿಷಯದ ಬಗ್ಗೆ ಕವಿತಾ ಸ್ಮಾರಕ ದತ್ತಿ ಉಪನ್ಯಾಸ ನೀಡಿದರು.

ಸಮಾರಂಭದಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ಬಿ. ಜಯಪ್ರಕಾಶ್ ಗೌಡ, ಡಾ.ಎಂ.ಕೆಂಪಮ್ಮ, ಡಾ.ರಾಮೇಗೌಡ ಭವಾನಿ ಲೋಕೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದಸರಾ ವೇದಿಕೆ ನಿರ್ಮಾಣಕ್ಕೆ ಭೂಮಿಪೂಜೆ



ಶ್ರೀರಂಗಪಟ್ಟಣದಲ್ಲಿ ನಡೆಯಲಿರುವ ದಸರಾ ಮಹೋತ್ಸವದ ವೇದಿಕೆ ನಿರ್ಮಾಣಕ್ಕೆ ಪುರಸಭಾಧ್ಯಕ್ಷ ದಿನೇಶ್ ಭೂಮಿಪೂಜೆ ನೆರವೇರಿಸಿದರು.

ಶ್ರೀರಂಗಪಟ್ಟಣ, ಸೆ.16–ಪಟ್ಟಣದಲ್ಲಿ ಸೆ.25ರಿಂದ 28ರವರೆಗೆ ನಾಲ್ಕು ದಿನಗಳ ಕಾಲ ನಡೆಯುವ ದಸರಾ ಮಹೋತ್ಸವ ಸಾಂಸ್ಕೃತಿಕ ಕಾರ್ಯಕ್ರಮದ ಬೃಹತ್ ವೇದಿಕೆ ನಿರ್ಮಾಣ ಕಾಮಗಾರಿಗೆ ಪುರಸಭೆ ಅಧ್ಯಕ್ಷ ಎಂ.ಎಲ್.ದಿನೇಶ್ ಪೂಜೆ ಸಲ್ಲಿಸಿದರು.

ಪಟ್ಟಣದ ಶ್ರೀರಂಗನಾಥ ಸ್ವಾಮಿ ದೇವಾಲಯ ಮೈದಾನದಲ್ಲಿ ವೇದಿಕೆ ಸಿದ್ಧಪಡಿಸುವ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಶ್ರೀರಂಗಪಟ್ಟಣದಲ್ಲಿ ಮೊದಲ ದಿನ ದಸರಾ ಜಂಬೂ ಸವಾರಿ ಉತ್ಸವ ದಿನದಂದೇ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿವೆ. ಏಕಕಾಲಕ್ಕೆ 8 ಸಾವಿರ ಮಂದಿ ಕಾರ್ಯಕ್ರಮ ವೀಕ್ಷಣೆ ಮಾಡಲು ವೇದಿಕೆ ಸಿದ್ಧಪಡಿಸಲಾಗುತ್ತಿದೆ. ವೇದಿಕೆ ಅಕ್ಕ ಪಕ್ಕ ನಾನಾ ಮಾರಾಟ ಮಳಿಗೆಗಳು, ತಾತ್ಕಾಲಿಕ ಶೌಚಾಲಯ, ವೈದ್ಯರ ತಪಾಸಣೆ ಕೇಂದ್ರಗಳಿಗೂ ಪ್ರತ್ಯೇಕ ಸಿದ್ಧಪಡಿಸಲಾಗುತ್ತದೆ ಎಂದು ಹೇಳಿದರು.

ತಾ.ಪಂ ಇಒ ಎ.ಬಿ ವೇಣು, ಪುರಸಭೆ ಸದಸ್ಯರಾದ ಕೃಷ್ಣಪ್ಪ, ಗಂಜಾಂಶಿವು, ದಯಾನಂದ, ವಸಂತಕುಮಾರಿ ಲೋಕೇಶ್, ಪೂರ್ಣಿಮಾ, ನಾಗರತ್ನ, ಬಸವರಾಜು, ಪ್ರದೀಪ್, ಟೌನ್ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಲೋಕೇಶ್, ರಜನಿಕಾಂತ್, ಉಪಾಧ್ಯಕ್ಷ ರವಿಕುಮಾರ್, ಮುಖಂಡ ಅಭಿಷೇಕ್ ಮತ್ತಿತರರು ಹಾಜರಿದ್ದರು.

ಗಾಯಾಳುಗಳ ಮನೆಗೆ ವಿಹೆಚ್‌ಪಿ ನಾಯಕರ ಭೇಟಿ

ಮದ್ದೂರು, ಸೆ.16–ಪಟ್ಟಣದಲ್ಲಿ ಇತ್ತೀಚೆಗೆ ಗಣೇಶನ ವಿಸರ್ಜನೆ ಸಂದರ್ಭದಲ್ಲಿ ನಡೆದ ಕಲ್ಲು ತೂರಾಟದಲ್ಲಿ ಗಾಯಗೊಂಡಿದ್ದವರ ಮನೆಗೆ ವಿಶ್ವ ಹಿಂದು ಪರಿಷತ್ ಹಾಗೂ ಭಜರಂಗದಳದ ಕಾರ್ಯಕರ್ತರು ಭೇಟಿ ನೀಡಿ ಸಾಂತ್ವಾನ ಹೇಳಿದರು.

ಬಜರಂಗದಳದ ರಾಜ್ಯ ಸಂಚಾಲಕ ಗೋವರ್ಧನ್‌ಸಿಂಗ್ ಮಾತನಾಡಿ, ಹಿಂದುಗಳ ಮೇಲೆ ಯಾರೇ ಹಲ್ಲೆ ಮಾಡಿದರು ಸಹಿಸುವ ಪ್ರಶ್ನೆಯೇ ಇಲ್ಲ. ಕಲ್ಲು ತೂರಾಟದಲ್ಲಿ ಭಾಗಿಯಾದ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಇದಕ್ಕೂ ಮೊದಲು ಘಟನೆಯ ಸಂಬಂಧ ಪೊಲೀಸರಿಂದ ಮಾಹಿತಿ ಸಂಗ್ರಹಿಸಿದರು. ರಾಘವೇಂದ್ರ, ಪುನೀತ್ ಕುಮಾರ್, ರವಿ, ಸಾಗರ್, ಗುರು ಮಲ್ಲೇಶ್, ಜಗನ್ನಾಥ್, ವೀರಭದ್ರಸ್ವಾಮಿ ಇದ್ದರು.

ಕಕ್ಷಿದಾರನಿದ್ದ ಸ್ಥಳಕ್ಕೆ ಆಗಮಿಸಿ ಮಾನವೀಯತೆ ಮೆರೆದ ನ್ಯಾಯಾಧೀಶರು

ಮದ್ದೂರು, ಸೆ.16– ಅಪಘಾತ ಪ್ರಕರಣದಲ್ಲಿ ಕಾಲು ಮುರಿದುಕೊಂಡು ನ್ಯಾಯಾಲಯದ ಮೆಟ್ಟಿಲು ಹತ್ತಲು ಸಾಧ್ಯವಾಗದಿದ್ದಾಗ ನ್ಯಾಯಾಧೀಶರೇ ಕಕ್ಷಿದಾರನಿದ್ದ ಸ್ಥಳಕ್ಕೆ ಆಗಮಿಸಿ ವಿಮೆ ಪರಿಹಾರ ಹಣ ಬಿಡುಗಡೆಗೆ ಆದೇಶ ನೀಡುವ ಮೂಲಕ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶೆ ಮಾನವೀಯತೆ ವ್ಯಕ್ತಪಡಿಸಿದ್ದಾರೆ.

ಕಳೆದ ಜೂನ್‌ನಲ್ಲಿ ರಸ್ತೆ ಬದಿ ನಡೆದು ಹೋಗುವಾಗ ಕಾರು ಡಿಕ್ಕಿ ಹೊಡೆದ ಕಾರಣ ತಾಲೂಕಿನ ಸಿ.ಎ.ಕೆರೆ ಹೋಬಳಿಯ ರೈತ ಮಾದೇಗೌಡ(70) ಅವರ ಕಾಲು ಮುರಿದಿತ್ತು. ಮಾದೇಗೌಡ ವಿಮೆ ಪರಿಹಾರ ಕೋರಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಈ ಪ್ರಕರಣ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ ವಿಚಾರಣೆಗೆ ಬಂದಿತ್ತು. ಮಾದೇಗೌಡಗೆ ಮೆಟ್ಟಿಲು ಹತ್ತಲು ಸಾಧ್ಯವಿಲ್ಲ ಎಂಬ ವಿಷಯ ತಿಳಿದ ಜಡ್ಜ್, ತಾವೇ ಕೆಳಗಿಳಿದು ಬಂದು ದಾಖಲಾತಿ ಪರಿಶೀಲನೆ ನಡೆಸಿ ವಿಮಾ ಕಂಪನಿ ಯಿಂದ 2.5 ಲಕ್ಷ ರೂ ಪರಿಹಾರಕ್ಕೆ ಆದೇಶಿಸಿದರು.

ಕರ್ತವ್ಯದಲ್ಲಿದ್ದಾಗಲೇ ತಜ್ಞ ವೈದ್ಯ ನಿಧನ

ಮಂಡ್ಯ, ಸೆ.16–ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿರುವಾಗಲೇ ಪೆಥಾಲಜಿ ತಜ್ಞರೊಬ್ಬರು ಹೃದಯಾಘಾತಕ್ಕೆ ಒಳಗಾಗಿರುವ ಘಟನೆ ನಡೆದಿದೆ.



ಶ್ರೀ ಚಾಮುಂಡೇಶ್ವರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ನಿಶಾಂತ್‌ಕುಮಾರ್‌ರವರೇ ಹೃದಯಾಘಾತಕ್ಕೊಳಗಾದವರು. ಮಂಗಳವಾರ ಬೆಳಿಗ್ಗೆ ಕರ್ತವ್ಯದಲ್ಲಿದ್ದ ವೇಳೆ ತೀವ್ರ ಹೃದಯಾಘಾತವಾಗಿ ಕುಸಿದು ಬಿದ್ದ ಇವರಿಗೆ ಆಸ್ಪತ್ರೆಯಲ್ಲಿದ್ದ ಇತರೆ ವೈದ್ಯರು ಚಿಕಿತ್ಸೆ ನೀಡಿದರಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟರು.

ಇವರು ತಾಲೂಕಿನ ಹಳೇಬೂದನೂರು ಮೂಲದ ಮಂಡ್ಯದ ಚಾಮುಂಡೇಶ್ವರಿ ನಗರದಲ್ಲಿನ ಗುತ್ತಿಗೆದಾರ ಬಿ.ಸಿ.ಶಂಕರ್ ಮತ್ತು ಸುಲೋಚನಾ ಅವರ ಪುತ್ರ. ದೊಡ್ಡಪ್ಪ ಮೈಷುಗರ್ ಮಾಜಿ ಅಧ್ಯಕ್ಷ ಬಿ.ಸಿ.ಶಿವಾನಂದ, ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಹಳೇಬೂದನೂರಿನಲ್ಲಿ ಸಂಜೆ ಜರುಗಿತು.

ಒಂದನೇ ಪುಟದಿಂದ

ದಿನೇಶ್‌ಕುಮಾರ್ ಇಡಿ ವಶಕ್ಕೆ

ಅಸಮಾಧಾನ ಹೊರಹಾಕಿದ್ದರಿಂದ ದಿನೇಶ್‌ಕುಮಾರ್ ಪ್ರಾಸಿಕ್ಯೂಷನ್‌ಗೆ ಸರ್ಕಾರ, ಲೋಕಾಯುಕ್ತಕ್ಕೆ ಅನುಮತಿಸಿದ ಬೆನ್ನಲ್ಲೇ ಇಡಿ ವಶಕ್ಕೆ ಪಡೆದಿರುವುದು ಕುತೂಹಲ ಮೂಡಿಸಿದೆ

ವರ್ಗಾವಣೆ ಮಾಡಿದ್ದ ಸರ್ಕಾರ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ 2022ರಲ್ಲಿ ಅಧಿಕಾರ ವಹಿಸಿಕೊಂಡಿದ್ದ ಜಿ.ಟಿ.ದಿನೇಶ್‌ಕುಮಾರ್, 50:50 ಅನುಪಾತದಡಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆಸಿದ್ದಾರೆಂಬ ಆರೋಪ ಕೇಳಿಬಂದಾಗ ಸರ್ಕಾರ ಅವರನ್ನು ಯಾವುದೇ ಸ್ಥಳ ತೋರಿಸದೆ ವರ್ಗಾವಣೆ ಮಾಡಿತ್ತು. ನಂತರ ಹಾವೇರಿ ವಿವಿಯ ಕುಲಸಚಿವ ಹುದ್ದೆಯನ್ನು ನೀಡಿದ್ದು, ಭಾರೀ ಚರ್ಚೆಗೆ ಗ್ರಾಸವಾಗಿತ್ತು. ಆಗ ಸರ್ಕಾರ ಆ ಆದೇಶವನ್ನೇ ರದ್ದು ಮಾಡಿತ್ತು.

ಇತ್ತೀಚೆಗೆ ಮುಡಾದ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತು ಮಾಜಿ ಆಯುಕ್ತ ದಿನೇಶ್ ಕುಮಾರ್ ವಿರುದ್ಧ ತನಿಖೆ ನಡೆಸಲು ಅನುಮತಿ ನೀಡುವಂತೆ ಲೋಕಾಯುಕ್ತ ಪೊಲೀಸರು ಸರ್ಕಾರದ ಅನುಮತಿ ಕೋರಿದ್ದರಿಂದ ದಿನೇಶ್‌ಕುಮಾರ್ ವಿರುದ್ಧ ಮಾತ್ರ ತನಿಖೆಗೆ ಅನುಮತಿ ನೀಡಲಾಗಿದೆ. ಇದರ ಬೆನ್ನಲ್ಲೇ ಇಡಿ ಅಧಿಕಾರಿಗಳೇ ದಿನೇಶ್ ಕುಮಾರ್ ಅವರನ್ನು ವಶಕ್ಕೆ ಪಡೆದಿರುವುದರಿಂದ ಹಲವರಿಗೆ ಕಳವಳ ಶುರುವಾಗಿದೆ. ದಿನೇಶ್ ಕುಮಾರ್ ಅಕ್ರಮ ಹಣ ವಹಿವಾಟು ನಡೆಸಿದ್ದಾರೆ ಎಂದಾದರೆ ಅವರೊಂದಿಗೆ ಭಾಗಿಯಾಗಿರುವವರನ್ನೂ ಇಡಿ ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇರುವುದರಿಂದ ಮುಡಾ ಅಕ್ರಮ ನಿವೇಶನ ಮಂಜೂರಾತಿ ಪ್ರಕರಣ ಮತ್ತೆ ಕಾವೇರಲಿದೆ. ಜೊತೆಗೆ ರಾಜಕೀಯ ಮೇಲಾಟಕ್ಕೂ ಕಾರಣವಾಗಲಿದೆ.

ಅಂಗನವಾಡಿ ಕಾರ್ಯಕರ್ತರಿಗೂ ಬಡ್ತಿ ಭಾಗ್ಯ

ಬೆಂಗಳೂರು, ಸೆ.16(ಕೆಎಂಶಿ)–ಅಂಗನವಾಡಿ ಕಾರ್ಯಕರ್ತೆಯರಿಗೆ ಬಡ್ತಿ ನೀಡುವುದಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಘೋಷಿಸಿದ್ದಾರೆ. 400 ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಪರ್‌ವೈಸರ್, ಈಗಾಗಲೇ ಸೂಪರ್‌ವೈಸರ್ ಹುದ್ದೆಯಲ್ಲಿರುವವರನ್ನು ಸಹಾಯಕ ಸಿಡಿಪಿಓ ಹುದ್ದೆಗೆ ಬಡ್ತಿ ನೀಡುವುದಾಗಿ ತಿಳಿಸಿದ್ದಾರೆ. ಪೋಷಣಾ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೀವು ಮಾಡುವ ಕಾರ್ಯಕ್ರಮ ಗಳಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ನಿಮಗೆ ಬಡ್ತಿ ದೊರಕಿಸಲು ಹಣಕಾಸು ಇಲಾಖೆಗೆ ಈಗಾಗಲೇ ಕಡತ ರವಾನಿಸಲಾಗಿದೆ. ಇಲಾಖೆಯಿಂದ ಅನುಮೋದನೆಗೊಂಡ ತಕ್ಷಣವೇ ನಿಮಗೆ ಬಡ್ತಿ ದೊರೆಯಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಇಲಾಖೆಗೆ ಬಂದಿರುವ ಹೆಚ್ಚಿನ ಅನುದಾನವನ್ನು ಸಮರ್ಪಕವಾಗಿ ಬಳಸುವ ಜೊತೆಗೆ ನಿಮ್ಮ ಕಾರ್ಯಗಳಿಗೂ ಗೌರವ ಸಲ್ಲಿಸುತ್ತೇನೆ. ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಪಾತ್ರ ಬಹಳ ದೊಡ್ಡದಿದೆ. ನಿಮ್ಮ ಜವಾಬ್ದಾರಿಗಳನ್ನು ಇನ್ನಷ್ಟು ಹೆಚ್ಚಿಸಿಕೊಂಡು ಅಪೌಷ್ಟಿಕತೆ ಮಕ್ಕಳನ್ನು ಪೌಷ್ಟಿಕ ಮಕ್ಕಳಾಗಿ ಸಬಲಗೊಳಿಸುವಲ್ಲಿ ಮತ್ತಷ್ಟು ಜವಾಬ್ದಾರಿ ತೆಗೆದುಕೊಳ್ಳಿ. ನೀವು ತಾಯಿ ಸ್ಥಾನದಲ್ಲಿ ನಿಂತು ಕೆಲಸ ಮಾಡುತ್ತಿದ್ದೀರಿ. ನಿಮಗೆ ಹಣ ನೀಡುತ್ತಿದ್ದೇವೆ ಎಂಬ ಗರ್ವ ಇಲಾಖೆಗಾಗಲೀ, ಸರ್ಕಾರಕ್ಕಾಗಲೀ ಇಲ್ಲ, ನಿಮ್ಮ ಶ್ರಮಕ್ಕೆ ಪ್ರತಿಫಲ ದೊರೆತೇ ದೊರೆಯುತ್ತದೆ ಎಂದರು.



ಲಕ್ಷ್ಮೀ ಹೆಬ್ಬಾಳ್ಕರ್

ಗೌರವಧನ ನೀಡದ ಸರ್ಕಾರ: ಜಾತಿಗಣತಿ ಸಮೀಕ್ಷೆಗೆ ಆಶಾ ಕಾರ್ಯಕರ್ತೆಯರು ಬಹಿಷ್ಕಾರ

ಬೆಂಗಳೂರು: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸುತ್ತಿರುವ ಶೈಕ್ಷಣಿಕ ಹಾಗೂ ಸಾಮಾ ಜಿಕ ಸಮೀಕ್ಷೆ–2025ರಲ್ಲಿ ಭಾಗವಹಿಸದಿರಲು ಆಶಾ ಕಾರ್ಯಕರ್ತೆಯರು ನಿರ್ಧಾರ ಕೈಗೊಂಡಿದ್ದಾರೆ. ಗ್ಯಾರಂಟಿ ಯೋಜನೆ ಸೇರಿದಂತೆ ಈ ಹಿಂದೆ ನಡೆಸಿದ ಸಮೀಕ್ಷೆಗಳ ಹಣವನ್ನು ರಾಜ್ಯ ಸರ್ಕಾರ ಇನ್ನೂ ಪಾವತಿ ಮಾಡಿಲ್ಲ. ಹೀಗಾಗಿ ಸಮೀಕ್ಷೆ ಕಾರ್ಯದಲ್ಲಿ ಭಾಗವಹಿಸದಿರಲು ಆಶಾ ಕಾರ್ಯಕರ್ತೆಯರು ನಿರ್ಧಾರ ಕೈಗೊಂಡಿ ದ್ದಾರೆಂದು ತಿಳಿದುಬಂದಿದೆ. ಸಮೀಕ್ಷೆ ವೇಳೆ ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಸಮೀಕ್ಷೆಯ ನಮೂನೆಯನ್ನು ವಿತರಿಸುವುದು ಸೇರಿ ಇತರೆ ಪೂರಕ ಕಾರ್ಯ ನಿರ್ವಹಿಸಬೇಕು. ಸಮೀಕ್ಷೆ ನಮೂನೆ ವಿತರಿಸುವ ಜೊತೆಗೆ ಸಮೀಕ್ಷೆಯಲ್ಲಿರುವ 60 ಪ್ರಶ್ನೆಗಳಿಗೆ ಮಾಹಿತಿ ನೀಡಲು ಮುಂಚಿತವಾಗಿ ತಯಾರಿರುವಂತೆ ನೋಡಿಕೊಳ್ಳಬೇಕು. ವಿವರಗಳನ್ನು ಮೊಬೈಲ್ ಅಪ್ಲಿಕೇಶನ್ ನಲ್ಲಿ ಅಪ್ಲೋಡ್ ಸೇರಿ ಇನ್ನಿತರೆ ಕಾರ್ಯ ಮಾಡಬೇಕು. ಇದಕ್ಕಾಗಿ 2000 ರೂ. ಗೌರವಧನ ನಿಗದಿಗೊಳಿಸ ಲಾಗಿದೆ. ಆದರೆ, ಸರ್ಕಾರದಿಂದ ಅಧಿಕೃತ ಆದೇಶ ಬಂದಿಲ್ಲ. ಈ ಹಿಂದೆ ನಡೆಸಿದ ಸಮೀಕ್ಷೆಗಳ ಹಣ ಇನ್ನೂ ಪಾವತಿಸಿಲ್ಲ. ಹೀಗಾಗಿ ಸಮೀಕ್ಷೆ ಕಾರ್ಯದಲ್ಲಿ ಭಾಗವಹಿಸದಿರಲು ಆಶಾ ಕಾರ್ಯಕರ್ತೆಯರು ನಿರ್ಧಾರ ಕೈಗೊಂಡಿದ್ದಾರೆಂದು ತಿಳಿದುಬಂದಿದೆ.

ಎಸ್‌ಟಿಗೆ ಸೇರಿಸುವುದು ಬರೀ ನಾಟಕ

ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ಹಸ್ತಾಂತರ ಮಾಡುವ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಸಿಎಂ ಸ್ಥಾನದಲ್ಲೇ ಮುಂದುವರೆಯಲು ಸಿದ್ದ ರಾಮಯ್ಯ ಹಲವು ರಾಜಕೀಯ ಷಡ್ಯಂತ್ರ ರೂಪಿಸಿದ್ದಾರೆ. ಕುರುಬ ಸಮುದಾಯದ ಬೆಂಬಲ ಪಡೆದು ಅವರಿಂದ ಸಿಎಂ ಸ್ಥಾನ ವನ್ನು ಡಿ.ಕೆ.ಶಿವಕುಮಾರ್‌ಗೆ ಹಸ್ತಾಂತರಿಸದಂತೆ ಹೋರಾಟಕ್ಕೆ ಛೂ ಬಿಡುವುದು ಸಿದ್ದರಾಮಯ್ಯ ಅವರ ಒಳ ಮರ್ಮ ಎಂದರು. ಈ ಹಿನ್ನೆಲೆಯಲ್ಲಿ ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರ್ಪಡೆ ಮಾಡುವ ವಿಚಾರ ಮುನ್ನಲೆಗೆ ತಂದಿದ್ದಾರೆ. ಕುರುಬರ ಬಗ್ಗೆ ಪ್ರೀತಿ, ವಾತ್ಸಲ್ಯ ತೋರದ ಸಿದ್ದರಾಮಯ್ಯ ಈ ಸಮುದಾಯವನ್ನು ತಮ್ಮ ರಾಜಕೀಯ ದಾಳವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವ ಸಂಬಂಧ ಕುಲಶಾಸ್ತ್ರ ಅಧ್ಯಯನ ಮಾಡಲಾಗಿತ್ತು. ತರುವಾಯ ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಅವರು ಕುಲಶಾಸ್ತ್ರ ಅಧ್ಯಯನದ ವರದಿಯನ್ನು ರಿಜಿಸ್ಟರ್ ಜನರಲ್ ಆಫ್ ಇಂಡಿಯಾಗೆ ಕಳುಹಿಸಬೇಕಿತ್ತು. ಆದರೆ ಅದನ್ನು ಕೇಂದ್ರ ಸರ್ಕಾರ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗೆ ಕಳುಹಿಸಿ ಮೌನ ವಹಿಸಿದರು ಎಂದು ಹೇಳಿದರು.

ಕುರುಬ ನಾಯಕರ ತುಳಿದರು: ಸಿದ್ದರಾಮಯ್ಯ ನಿಜವಾಗಿಯೂ ಮನಸ್ಸು ಮಾಡಿದರೆ ಕುರುಬರನ್ನು ಎಂದೋ ಎಸ್‌ಟಿಗೆ ಸೇರಿಸಬಹುದಿತ್ತು ಆದರೆ ಕುರುಬ ನಾಯಕರನ್ನು ವ್ಯವಸ್ಥಿತವಾಗಿ ತುಳಿದರು. ಕುರುಬ ಸಮಾಜದ ಒಬ್ಬನೇ ಒಬ್ಬ ವ್ಯಕ್ತಿ ಬೆಳೆಯಲು ಬಿಡಲಿಲ್ಲ. ನಿಮ್ಮ ಪರವಾಗಿ ನಾನಿದ್ದೇನೆ ಎಂದು ಬರೀ ಬೊಗಳೆ ಬಿಡುತ್ತಾ ಓಡಾಡುತ್ತಿದ್ದಾರೆ ಎಂದು ಟೀಕಿಸಿದರು.

ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವ ಪ್ರಯತ್ನ ಮಾಡುತ್ತಿರುವೆ ಎಂದು ಈ ವಿಚಾರವನ್ನು ಮುನ್ನಲೆಗೆ ತಂದಿದ್ದಾರೆ. ಸಿದ್ದರಾಮಯ್ಯ ಅವರಿಗೆ ಕುರುಬರ ಬಗ್ಗೆ ನಿಜವಾದ ಬದ್ಧತೆ ಇದ್ದಿದ್ದರೆ ರಿಜಿಸ್ಟರ್ ಜನರಲ್ ಆಫ್ ಇಂಡಿಯಾಗೆ ಕಳುಹಿಸುತ್ತಿದ್ದರು. ಆದರೆ ಸಿದ್ದರಾಮಯ್ಯ ಅವರಿಗೆ ಇದು ಬೇಕಿಲ್ಲ. ಸಮಸ್ಯೆಗಳು ಜೀವಂತವಾಗಿದ್ದರೆ ಅದರ ಮೂಲಕ ತಾವು ರಾಜಕಾರಣ ಮಾಡಬಹುದು ಎಂಬ ತಂತ್ರ ರೂಪಿಸಿದ್ದಾರೆ ಎಂದು ಆಪಾದಿಸಿದರು.

ಕಷ್ಟಕಾಲ ಬಂದಿದೆ: ಸಿದ್ದರಾಮಯ್ಯ ಅವರಿಗೆ ಈಗ ಕಷ್ಟಕಾಲ ಎದುರಾಗಿದೆ. ಆದ ಕಾರಣ ಕುರುಬರನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ನಾಟಕವಾಡುತ್ತಿದ್ದಾರೆ. ಅಧಿಕಾರದಲ್ಲಿದ್ದಾಗ ಕುರುಬರನ್ನು ಒದೆಯುವ ಸಿದ್ದರಾಮಯ್ಯ ಅವರು, ಕಷ್ಟಕಾಲದಲ್ಲಿ ನೆನಪಿಸಿಕೊಂಡು ನಾನು ನಿಮ್ಮ ಜೊತೆಗಿದ್ದೇನೆ ಎಂದು ನಂಬಿಸುತ್ತಾರೆ ಎಂದರು.

ದೇವರಾಜ ಅರಸ್ ಅವರು ಹಾವನೂರ್ ಕಮಿಷನ್ ಜಾರಿ ಮಾಡಿ ಹಿಂದುಳಿದ ವರ್ಗದ ಧೀಮಂತ ನಾಯಕರಾದರು. ಹೆಚ್.ಡಿ. ದೇವೇಗೌಡರು ನಾಯಕ ಸಮುದಾಯವನ್ನು ಎಸ್‌ಟಿಗೆ ಸೇರಿಸಿ, ಇದು ಕೇಂದ್ರ ಸರ್ಕಾರದಲ್ಲಿ ಅನುಮೋದನೆ ಪಡೆಯಲು ಅಂದಿನ ಪ್ರಧಾನಿ ಚಂದ್ರಶೇಖರ್ ಮೇಲೆ ಒತ್ತಡ ತಂದರು. ಸಿದ್ದರಾಮಯ್ಯ ಅವರು ಹಿಂದುಳಿದವರ ಪರವಾಗಿ ಇಂತಹ ಒಂದೇ ಒಂದು ಸಣ್ಣ ಕೆಲಸವನ್ನು ಮಾಡಲಿಲ್ಲ. ಹಿಂದುಳಿದ ವರ್ಗಕ್ಕೆ ಕಿಂಚಿತ್ತೂ ಸಹಾಯ ಮಾಡಿಲ್ಲ ಎಂದು ಟೀಕಿಸಿದರು.

ಬಾನು ಮುಷ್ತಾಕ್ ದಸರಾ ಉದ್ಘಾಟನೆ ಸ್ವಾಗತಾರ್ಹ: ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರಿಂದ ಮೈಸೂರು ದಸರಾ ಉದ್ಘಾಟನೆ ಮಾಡುವುದನ್ನು ವಿರೋಧಿಸಿ ಕೆಲವರು ಸಲ್ಲಿಸಿದ್ದ ಪಿಐಎಲ್‌ನ್ನು ಹೈಕೋರ್ಟ್ ವಜಾ ಮಾಡಿದ್ದು ಸ್ವಾಗತಾರ್ಹ ಸಂಗತಿ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ಉಳ್ಳವರಿಂದ ಮೀಸಲಾತಿ ತೆಗೆಯುವ ಕಾಯ್ದೆ ಜಾರಿ ಅಗತ್ಯ

ಉಳ್ಳವರು ಅಥವಾ ಆರ್ಥಿಕವಾಗಿ ಸಬಲರಾಗಿರುವವರು ಅರ್ಹರಿಗೆ ಮೀಸಲಾತಿ ಬಿಟ್ಟು ಕೊಡಬೇಕು ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಸಲಹೆ ನೀಡಿದ್ದಾರೆ. ಖರ್ಗೆ ಮಗನಿಗೂ ಮೀಸಲಾತಿ, ಊರಿನಲ್ಲಿ ತಮಟೆ ಹೊಡೆಯುವನಿಗೂ ಮೀಸಲಾತಿ. ವಿಶ್ವನಾಥ್ ಮಗನಿಗೂ ಮೀಸಲಾತಿ, ಕುರಿ ಕಾಯುವ ಮಗನಿಗೂ ಮೀಸಲಾತಿ. ಸಿದ್ದರಾಮಯ್ಯ ಮಗನಿಗೂ ಮೀಸಲಾತಿ, ಆದರೆ ಬಡ ಕುರುಬನಿಗೆ ಮೀಸಲಾತಿ ಇಲ್ಲದಂತಾಗಿದೆ. ಹಾಗೂ ಉಳ್ಳವರಿಂದ ಮೀಸಲಾತಿ ತೆಗೆದು ಹಾಕುವ ಕಾಯ್ದೆ ಜಾರಿಗೆ ತರಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು. ಜಾತಿ ಗಣತಿ ಬಗ್ಗೆ ಕಾಂತರಾಜು ಆಯೋಗ ವರದಿ ನೀಡಿದೆ. ಆದರೆ ಅದನ್ನು ಜಾರಿ ಮಾಡಲು ಧೈರ್ಯ ತೋರದ ಸಿದ್ದರಾಮಯ್ಯ ಅವರು ಆ ವರದಿಯನ್ನು ಹತ್ತು ವರ್ಷದಿಂದ ಕಾಲ ಕೆಳಗೆ ಇಟ್ಟುಕೊಂಡಿದ್ದಾರೆ. ಸಿದ್ದರಾಮಯ್ಯ ಹಿಂದುಳಿದ ವಿರೋಧಿ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೇ ಎಂದು ವಿಶ್ವನಾಥ್ ಪ್ರಶ್ನಿಸಿದರು.


ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಆಯ್ಕೆ ಅನೂರ್ಜಿತ

ಮತಗಳ ಮರುಎಣಿಕೆಗೆ ಹೈಕೋರ್ಟ್ ಆದೇಶ

ಬೆಂಗಳೂರು: ಕೋಲಾರ ಜಿಲ್ಲೆಯ ಮಾಲೂರು ಕ್ಷೇತ್ರವನ್ನು ಪ್ರತಿನಿಧಿಸುವ ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಆಯ್ಕೆಯನ್ನು ಕರ್ನಾಟಕ ಹೈಕೋರ್ಟ್ ಮಂಗಳವಾರ ಅನೂರ್ಜಿತಗೊಳಿಸಿದೆ. ಅಲ್ಲದೆ, 2023ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಚಲಾವಣೆಯಾದ ಮತಗಳ ಮರುಎಣಿಕೆಗೆ ಆದೇಶಿಸಿದೆ.

ನಂಜೇಗೌಡ ವಿರುದ್ಧ ಸೋತಿದ್ದ ಬಿಜೆಪಿಯ ಕೆ.ಎಸ್.ಮಂಜುನಾಥ್‌ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ದೇವದಾಸ್ ನೇತೃತ್ವದ ಪೀಠ ಈ ತೀರ್ಪು ನೀಡಿದೆ.

ಮತ ಎಣಿಕೆ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ. ಸುಮಾರು 2 ವರ್ಷಗಳ ವಿಚಾರಣೆ ನಂತರ, ನ್ಯಾಯಾಲಯವು ಮರುಎಣಿಕೆ ಮಾಡುವಂತೆ ಆದೇಶಿಸಿ, ನಂಜೇಗೌಡ ಅವರ ಆಯ್ಕೆಯನ್ನು ಅಮಾನ್ಯ ಎಂದು ಘೋಷಿಸಿತು. ಆದಾಗ್ಯೂ, ನಂಜೇಗೌಡ ಅವರ ಪರ ವಕೀಲರ ಮನವಿ ಮೇರೆಗೆ, ಶಾಸಕ ಸ್ಥಾನವನ್ನು ಅಸಿಂಧುಗೊಳಿಸಿದ್ದ ತನ್ನದೇ ಆದೇಶಕ್ಕೆ 30 ದಿನಗಳ ಕಾಲ ಹೈಕೋರ್ಟ್ ತಡೆ ನೀಡಿದೆ. ಈ ಮಧ್ಯಂತರ ಪರಿಹಾರವು ಕಾಂಗ್ರೆಸ್ ಶಾಸಕರಿಗೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಅವಕಾಶ ನೀಡುತ್ತದೆ. ಆ ಅವಧಿಯೊಳಗೆ ಸುಪ್ರೀಂಕೋರ್ಟ್‌ನಿಂದ ಯಾವುದೇ ನಿರ್ದೇಶನ ಬಾರದಿದ್ದರೆ, ಶಾಸಕ ಸ್ಥಾನ ಅನೂರ್ಜಿತಗೊಳ್ಳಲಿದೆ. ಮರು ಮತ ಎಣಿಕೆ ನಡೆಯಲಿದೆ.



ನಂಜೇಗೌಡ

> "ಹೈಕೋರ್ಟ್ ನೀಡಿರುವ ತೀರ್ಪನ್ನು ನಾನು ಸ್ವಾಗತ ಮಾಡುತ್ತೇನೆ. ಮತಎಣಿಕಾ ಪ್ರಕ್ರಿಯೆಯಲ್ಲಿ ಲೋಪವಾಗಿದೆ ಎಂದು ಸಾಬೀತಾಗಿದೆ. ಮುಂದಿನ 4 ವಾರಗಳಲ್ಲಿ ಮರು ಮತ ಎಣಿಕೆ ಖಂಡಿತವಾಗಿ ನಡೆ ಯುತ್ತದೆ. ಆಗ 300ಕ್ಕೂ ಅಧಿಕ ಮತಗಳಿಂದ ನಾನು ಶಾಸಕನಾಗಿ ಆಯ್ಕೆಯಾಗುವ ವಿಶ್ವಾಸವಿದೆ.
> –ಕೆ.ಎಸ್.ಮಂಜುನಾಥ್‌ಗೌಡ

ಮತ್ತೆ ವೀರಶೈವ ಧರ್ಮಯುದ್ಧ

- ಸಮುದಾಯದ ಬಿಜೆಪಿ ನಾಯಕರ ಆರೋಪ
- ಈ ಹಿಂದಿನ ಅಧಿಕಾರಾವಧಿಯಲ್ಲಿ ಒಡೆಯಲು ಯತ್ನಿಸಿ ಅಧಿಕಾರ ಕಳೆದುಕೊಂಡರು
- ಜಾತಿ ಕಾಲಂನಲ್ಲಿ ಸೇರಿಸಲಾಗಿರುವ ಹೆಸರುಗಳ ನೋಡಿದರೆ ಜಾತಿಗಳ ಒಡೆಯುವ ಹುನ್ನಾರ
- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಸೋಮಣ್ಣ ಇತರರ ಆಕ್ರೋಶ



ಬೆಂಗಳೂರಲ್ಲಿ ಮಂಗಳವಾರ ನಡೆದ ಬಿಜೆಪಿ ಸಭೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು. ಬಿ.ಎಸ್.ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ವಿ.ಸೋಮಣ್ಣ ಇದ್ದರು.

ಬೆಂಗಳೂರು, ಸೆ.16(ಕೆಎಂಶಿ)– ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಹೆಸರಿನಲ್ಲಿ ವೀರಶೈವ ಸಮಾಜ ವಿಭಜಿಸುವ ಕೆಲಸಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಮ್ಮೆ ಮುಂದಾಗಿದ್ದಾರೆ ಎಂದು ಸಮುದಾಯದ ಬಿಜೆಪಿ ಮುಖಂಡರು ಕಿಡಿಕಾರಿದ್ದಾರೆ.

ಮುಖ್ಯಮಂತ್ರಿ ತಮ್ಮ ರಾಜಕೀಯ ಉದ್ದೇಶಕ್ಕಾಗಿ ನಡೆಸುತ್ತಿರುವ ಜಾತಿಗಣತಿಯನ್ನೇ ವಿರೋಧಿಸಿರುವ ಸಮುದಾಯ, ನಮ್ಮಲ್ಲಿ ಯಾವುದೇ ವಿಭಜನೆ ಇಲ್ಲ, ಒಗ್ಗಟ್ಟಿನಿಂದಿದ್ದೇವೆ ಎಂದಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನಾಯಕತ್ವದಲ್ಲಿ ನಡೆದ ಮುಖಂಡರ ಸಭೆಯಲ್ಲಿ ಕೆಲವು ಪ್ರಮುಖ ನಿರ್ಣಯಗಳನ್ನು ಕೈಗೊಂಡಿರುವುದಲ್ಲದೆ, ಸಮಾಜದ ಮಠಾಧೀಶರು ಹಾಗೂ ವೀರಶೈವ ಮಹಾಸಭಾದ ಜೊತೆ ಚರ್ಚಿಸುವ ತೀರ್ಮಾನ ಕೈಗೊಂಡಿದ್ದಾರೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಸಮೀಕ್ಷೆ ನೆಪದಲ್ಲಿ ಜಾತಿ ಗಣತಿ ನಡೆಸುವ ಷಡ್ಯಂತ್ರ, ಕುತಂತ್ರ ಇದಾಗಿದೆ ಎಂದರು.

ಜನಗಣತಿ ನಿಯಮದಡಿ ಇಲ್ಲದ ವಿಷಯಗಳನ್ನು ಸೇರಿಸಿ ಗಣತಿ ನಡೆಸುತ್ತಿರುವುದು ಸರಿಯಲ್ಲ. ಕುರುಬ ಕ್ರಿಶ್ಚಿಯನ್, ದಲಿತ ಕ್ರಿಶ್ಚಿಯನ್, ನಾಸ್ತಿಕರು ಎಂಬ ಜಾತಿಗಳನ್ನು ಹುಟ್ಟುಹಾಕಿ ಸಮೀಕ್ಷೆ ನಡೆಸಲಾಗುತ್ತಿದೆ.

ಜಾತಿ ಕಾಲಂನಲ್ಲಿ ನಾಸ್ತಿಕರು ಎಂಬುದನ್ನು ಸೇರಿಸಿರುವುದೇ ತೀವ್ರ ಗೊಂದಲ ಮಯವಾಗಿದೆ. ಇಂತಹ ಜಾತಿ ಹುಟ್ಟಿದ್ದೆಲ್ಲಿ ಎಂದು ಬಿಜೆಪಿ ನಾಯಕರು ಪ್ರಶ್ನಿಸಿದ್ದಾರೆ.

ಜಾತಿಗಣತಿ ಹೆಸರಿನಲ್ಲಿ ಎಲ್ಲಾ ಸಮಾಜವನ್ನು ಒಡೆಯಲು ಸಿದ್ದರಾಮಯ್ಯ ಮುಂದಾಗಿದ್ದಾರೆ. ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಜಾತಿ ವೈಷಮ್ಯ ಹುಟ್ಟುಹಾಕಲು ಹುನ್ನಾರ ನಡೆಸಿದ್ದಾರೆ.

ಸಮಾಜವಾದದ ಹಿನ್ನೆಲೆಯಿಂದ ಬಂದಂತಹ ಸಿದ್ದರಾಮಯ್ಯ ಈ ಕೂಡಲೇ ಇಂತಹ ಸಮೀಕ್ಷೆ ಕೈಬಿಡದಿದ್ದರೆ ರಾಜಕೀಯ ಅಧಃಪತನದತ್ತ ಸಾಗುವುದು ಖಂಡಿತ ಎಂದರು. ಸಂವಿಧಾನದ ವಿಧಿಯಡಿ ಅವಕಾಶ ಇಲ್ಲದೇ ಇದ್ದರೂ ರಾಜ್ಯ ಸರ್ಕಾರ ಜಾತಿಗಣತಿ ನಡೆಸುತ್ತಿದೆ, ಇದರ ಹಿಂದೆ ಕುತಂತ್ರ ಷಡ್ಯಂತ್ರವೂ ಇದೆ. ಸಮೀಕ್ಷೆಯ ಕಾಲಂಗಳನ್ನು ಗಮನಿಸಿದರೆ ಹಿಂದೂ, ಇಸ್ಲಾಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ, ನಾಸ್ತಿಕರು ಜೊತೆಗೆ ಇತರೆ ಎಂಬುದೂ ಕಾನೂನುಬಾಹಿರ.


ಸಿದ್ದರಾಮಯ್ಯ ತಮ್ಮ ಮನಃಸ್ಥಿತಿಯನ್ನು ಮುಂದಿಟ್ಟುಕೊಂಡು ಜಾತಿಗಣತಿ ನಡೆಸಿ ಜಾತಿ–ಜಾತಿಗಳನ್ನು ವಿಭಜಿಸುವ ಕೆಲಸಕ್ಕೆ ಕೈಹಾಕಿದ್ದಾರೆ. ಈ ಸಮೀಕ್ಷೆ ಮೂಲಕ ವೀರಶೈವ ಸಮಾಜ ಒಡೆಯುವ ಕುತಂತ್ರ ಇದಾಗಿದೆ. 2014ರಲ್ಲಿ ಸಮಾಜ ಒಡೆಯುವ ಪ್ರಯತ್ನ ನಡೆಸಿ ಜನತೆ ಯಿಂದ ತಿರಸ್ಕರಿಸಲ್ಪಟ್ಟಿದ್ದರು. ಅಂದು ನಮ್ಮ ಸಮಾಜ ಒಗ್ಗಟ್ಟಾಗಿ ನಿಂತಿತ್ತು. ಇದೀಗ ಮತ್ತೆ ಅಂತಹ ಕೆಲಸಕ್ಕೆ ಸಿದ್ದರಾಮಯ್ಯ ಹಿಂಬಾಗಿಲಿನಿಂದ ಕೈಹಾಕಿದ್ದಾರೆ, ನಾವೆಲ್ಲರೂ ಒಂದಾಗಿದ್ದೇವೆ. ಇದನ್ನು ನಮ್ಮ ಮಠಾಧೀಶರು ಹಾಗೂ ಸಮಾಜಕ್ಕೂ ಮನವರಿಕೆ ಮಾಡಿಕೊಡುತ್ತೇವೆ ಎಂದರು.

ಸಮಾಜದ ಗೊಂದಲ ಸರಿಪಡಿಸಲು ಮತ್ತು ಒಗ್ಗೂಡಿಸಲು, ಸಮಾಜವನ್ನು ಸಮರ್ಪಕ ದಿಕ್ಕಿನಲ್ಲಿ ಒಯ್ಯುವಲ್ಲಿ ಕಾರ್ಯಪ್ರವೃತ್ತರಾಗಲು ತೀರ್ಮಾನ ಮಾಡಿದ್ದೇವೆ. ಕೆಲವು ಹಿರಿಯರು ವೀರಶೈವ ಮಹಾಸಭಾದ ಪ್ರಮುಖರ ಜೊತೆ ಅಲ್ಲದೆ, ಪಂಚ ಪೀಠಾಧೀಶ್ವರರು, ವಿರಕ್ತ ಮಠದ ಸ್ವಾಮೀಜಿಗಳ ಜೊತೆ ಚರ್ಚಿಸಿ, ಒಳಪಂಗಡ ಮರೆತು ಒಟ್ಟಾಗಿ, ಒಂದಾಗಿ ಸಮಾಜ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಮುಂದೆ ಸಾಗಲು ನಿರ್ಧರಿಸಿದ್ದೇವೆ ಎಂದರು.

ಸಭೆಯಲ್ಲಿ ಮಾಜಿ ಸಿಎಂಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಅಲ್ಲದೆ ರಾಜ್ಯಸಭಾ ಮಾಜಿ ಸದಸ್ಯ ಪ್ರಭಾಕರ ಕೋರೆ, ಕೇಂದ್ರದ ಮಾಜಿ ಸಚಿವ ಸಿದ್ದೇಶ್ವರ್, ಪ್ರಮುಖರಾದ ವಿಜಯ್ ಸಂಕೇಶ್ವರ್ ಸೇರಿದಂತೆ ಶಾಸಕರು, ಮುಖಂಡರು ಇದ್ದರು.

ಮೈಸೂರು ದಸರಾ ಮಹೋತ್ಸವ-2025

ಸಂವಿಧಾನದ ಮಹತ್ವ, ರೈತರ ತ್ಯಾಗ, ವೀರಯೋಧರ ಬಲಿದಾನ, ಮಹಿಳಾ ಸಬಲೀಕರಣ ಕಣ್ಣಿಗೆ ಕಟ್ಟಿದ ನೃತ್ಯ ರೂಪಕಗಳು



ಮಳವಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಡಾ.ಬಿ.ಆರ್.ಅಂಬೇಡ್ಕರ್ ಜೀವನ ಚರಿತ್ರೆ ಮತ್ತು ಸಂವಿಧಾನದ ಮಹತ್ವವನ್ನು ಸಾರಿದರು. ಮತ್ತೊಂದು ಚಿತ್ರದಲ್ಲಿ ಮದ್ದೂರಿನ ಭಾರತಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಶಿವತಾಂಡವ ನೃತ್ಯ ಪ್ರದರ್ಶಿಸಿದರು.

ಮೈಸೂರು, ಸೆ.16(ವಿವಿಹೆಚ್)– ಕನ್ನಡ ಪ್ರೇಮ, ಜಾನಪದ ಸೊಬಗು, ಭಾರತೀಯ ಸಂವಿಧಾನದ ಮಹತ್ವ, ರೈತರ ನಿಸ್ವಾರ್ಥ ಸೇವೆ, ನಮ್ಮ ವೀರಯೋಧರ ಬಲಿದಾನ, ಮಹಿಳಾ ಸಬಲೀಕರಣ, ರಾಷ್ಟ್ರೀಯ ಭಾವೈಕ್ಯತೆ ಬಿತ್ತುವ ನೃತ್ಯ ರೂಪಕಗಳು ಯುವ ಸಂಭ್ರಮ ವೇದಿಕೆಯಲ್ಲಿ ಕಲಾವರಣಕ್ಕೆ ವೇದಿಕೆಯಾಗಿತ್ತು.

ಮೈಸೂರು ದಸರಾ ಮಹೋತ್ಸವದ ಯುವ ಸಂಭ್ರಮದಲ್ಲಿ ರಾಜ್ಯದ ವಿವಿಧ ಕಡೆಗಳಿಂದ ಬಂದ 59 ಕಾಲೇಜು ತಂಡಗಳು ಸಾದರಪಡಿಸಿದ ನೃತ್ಯ ರೂಪಕಗಳಿಗೆ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಕಿಕ್ಕಿರಿದು ತುಂಬಿದ್ದ ಯುವ ಸಮೂಹ ಕುಣಿದು ಕುಪ್ಪಳಿಸಿ ಜೋಷ್ ತುಂಬಿದರು. ದಸರಾದ ಯುವ ಸಂಭ್ರಮ ವೇದಿಕೆ ಜೈ ಜವಾನ್ ಜೈ ಕಿಸಾನ್, ಜೈ ಭೀಮ್ ಘೋಷಣೆಗಳಿಗೆ ಸಾಕ್ಷಿಯಾಯಿತು.

ಬೆಂಗಳೂರು ಕಾಮಾಕ್ಷಿಪಾಳ್ಯದ ರಾಮನ್ ಡಿಗ್ರಿ ಕಾಲೇಜು ತಂಡದಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಸಾಧನೆಯನ್ನು, ನಾವು ಜಾತಿ, ಧರ್ಮ ಮೀರಿ ಬೆಳೆದಾಗ, ಪ್ರಬುದ್ಧರಾಗಬಹುದು. ಇದಕ್ಕೆ ಹೋರಾಟದ ಹಾದಿ ಹಿಡಿಯಬೇಕು ಎಂಬುದನ್ನು ಮನಮುಟ್ಟುವಂತೆ ತಿಳಿಸಿದರು. ನೆರೆದಿದ್ದ ಸಮೂಹವೆಲ್ಲಾ ನಾಯಕ ನೀನು ಭೀಮ ರಾವ್ ಹಾಡಿಗೆ ಧನಿಯಾದರು.

ದಟ್ಟಗಳ್ಳಿಯ ಶ್ರೀ ಲಕ್ಷ್ಮೀಹಯಗ್ರೀವ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಪೌರಾಣಿಕತೆಯ ಪ್ರಸಂಗವನ್ನು ನೃತ್ಯದ ಮೂಲಕ ಉಣಬಡಿಸಿದರು. ನಂಜನ ಗೂಡಿನ ಜೆಎಸ್‌ಎಸ್ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ದೇವ ಶ್ರೀ ಗಣೇಶ ಹಾಡಿನಲ್ಲಿ ಗಣಪತಿ ಹಬ್ಬದ ಸಂಭ್ರಮ ಸಾರಿದರು. ಹೊಳೆನರಸೀಪುರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ತಂಡ ಕನ್ನಡ ನಟರ ಪರಿಚಯಿಸಿ, ಸಿನಿಮಾಧಾರಿತ ನೃತ್ಯ ಪ್ರದರ್ಶಿಸಿದರು.

ದೇಶದಲ್ಲೇ ಸ್ವಚ್ಛತೆಯಲ್ಲಿ ಮೈಸೂರಿಗೆ 3ನೇ ಸ್ಥಾನ ಬರಲು ಕಾರಣೀಭೂತರಾದ ಸ್ವಚ್ಛತಾ ಕಾರ್ಮಿಕರನ್ನು 'ಯುವ ಸಂಭ್ರಮದ ಏಳನೇ ದಿನವನ್ನು ಕ್ಲೀನ್ ಈವೆಂಟ್' ಎಂದು ಘೋಷಿಸಿ, ಕಾರ್ಮಿಕರನ್ನು ಸನ್ಮಾನಿಸುವ ಮೂಲಕ ಸ್ವಚ್ಛತಾ ಕಾರ್ಮಿಕರ ಶ್ರಮವನ್ನು ಯುವ ಸಮೂಹದ ಎದೆಗೆ ತಲುಪಿಸಿದರು.

ಬೆಂಗಳೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಕನ್ನಡ ಸಾಹಿತ್ಯವನ್ನು ಕಟ್ಟಿಕೊಟ್ಟರು. ಕೊಡಗಿನ ಕನ್ನಡ ಭಾರತಿ ಪ್ರಥಮ ದರ್ಜೆ ಕಾಲೇಜು ಕುವರಿಯರು ದಸರಾ ಬೊಂಬೆ ನಿನ್ನನ್ನು ನೋಡಲು ಹಾಡಿಗೆ ನರ್ತಿಸಿದರು. ಇವರ ಬ್ಯಾಂಗಲ್ ಬಂಗಾರಿ ಹಾಡಿಗೆ ಕಿಕ್ಕಿರಿದು ತುಂಬಿದ್ದ ಸಮೂಹ ಹೆಜ್ಜೆಹಾಕಿ ಸಂಭ್ರಮಿಸಿದರು.

ವಿಷ್ಣುವರ್ಧನ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ಸಿಕ್ಕ ಡಾನ್ಸ್, ಮೈಸೂರಿನ ಕೈಗಾರಿಕಾ ತರಬೇತಿ ಸಂಸ್ಥೆ, ಜೆಎಸ್‌ಎಸ್ ಸಹನಾ ವಿಶೇಷ ಶಿಕ್ಷಣ ಶಾಲೆ ವಿದ್ಯಾರ್ಥಿಗಳಿಂದ ಪೌರಾಣಿಕ ನೃತ್ಯ ಪ್ರದರ್ಶಿಸಲಾಯಿತು. ಮೈಸೂರಿನ ವಿಶ್ವಮಾನವ ಪಿಯು ಕಾಲೇಜು ವಿದ್ಯಾರ್ಥಿಗಳಿಂದ ದೇಶಭಕ್ತಿ ಅನಾವರಣ ಆದರೆ, ಹಾಸನದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ತಂಡದವರು ಸಿನಿಮಾ ಹಾಡುಗಳಿಗೆ ಹೆಜ್ಜೆ ಹಾಕಿದರು.


ಜೆಎಸ್‌ಎಸ್ ಸಹನಾ ವಿಶೇಷ ಶಿಕ್ಷಣ ಶಾಲೆ ಮಕ್ಕಳಿಂದ ಪೌರಾಣಿಕ ನೃತ್ಯ ಪ್ರದರ್ಶನ

ಚಾಮರಾಜನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಗಡಿನಾಡಿನ ಜಾನಪದ ಪರಂಪರೆಯ ಚಿಕ್ಕಲ್ಲೂರು ಮಂಟೇಸ್ವಾಮಿ, ಮಹದೇಶ್ವರ ಮತ್ತು ಬಿಳಿಗಿರಿರಂಗನಾಥ ಸ್ವಾಮಿಯನ್ನು ಸೋಲಿಗರ ಗೀಗಿ ಪದಕ್ಕೆ ನರ್ತಿಸುವ ಮೂಲಕ ರಂಜಿಸಿದರು. ಮೈಸೂರಿನ ಎಂಸಿ ರಸ್ತೆಯ ಸೆಂಟ್ ಜಾನ್ಸ್ ಕಾಂಪೋಸಿಟ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಯೋಧರ ಕೆಚ್ಚೆದೆಯ ಹೋರಾಟವನ್ನು ನೃತ್ಯದಲ್ಲಿ ತಂದು ಸೈನಿಕರ ತ್ಯಾಗ ಬಲಿದಾನವನ್ನು ಹಚ್ಚಿದರು. ವಿಶ್ವಮಾನವ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಕೂಡ ದೇಶಾಭಿಮಾನದ ಕಿಚ್ಚು ಹೊತ್ತಿಸಿದರು.

ನಶಾ ಮುಕ್ತ ಭಾರತ ನೃತ್ಯಕ್ಕೆ ತಲೆಬಾಗಿದ ಯುವ ಸಮೂಹ: ಮೈಸೂರು ಜಿಲ್ಲೆ ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ಹಳ್ಳಿಯಿಂದ ಉನ್ನತ ಶಿಕ್ಷಣಕ್ಕಾಗಿ ನಗರ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಪಡೆಯುವಾಗ ದುರ್ವ್ಯಸನಗಳಿಗೆ ಬಲಿಯಾಗಿ, ವಿದ್ಯಾರ್ಥಿಗಳು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಾರೆ. ಮಾದಕ ವಸ್ತು ಬಳಕೆಯಿಂದ ಉಜ್ವಲ ಭವಿಷ್ಯ ನಾಶವಾಗುತ್ತದೆ ಎಂಬುದನ್ನು ನೃತ್ಯದ ಮೂಲಕ ಪ್ರದರ್ಶಿಸಿದರು. ಈ ತಂಡದ ನೃತ್ಯ ಪ್ರದರ್ಶನಕ್ಕೆ ಮನಸೋತ ವೀಕ್ಷಕರು ಎದ್ದುನಿಂತು ಗೌರವ ಸಲ್ಲಿಸಿದರು.

ವಿಶೇಷಚೇತನರ ಕನ್ನಡಾಭಿಮಾನ: ಮಂಡ್ಯದ ಪ್ರೇರಣಾ ವಿಶೇಷಚೇತನರ ಟ್ರಸ್ಟ್‌ನ ವಿಶೇಷಚೇತನ ಮಕ್ಕಳು ಈ ಕನ್ನಡ ಮಣ್ಣನ್ನು ಮರಿಬೇಡ ಎನ್ನುತ್ತ ಕನ್ನಡ ನಾಡು ನುಡಿಯ ಕಂಪನ್ನು ಚೆಲ್ಲಿದರು. ವಿಶೇಷಚೇತನರ ನೃತ್ಯಕ್ಕೆ ಯುವ ಸಮೂಹ ಶಿಳ್ಳೆ, ಚೀರಾಟದ ಮೂಲಕ ಪ್ರೋತ್ಸಾಹ ನೀಡಿದರು.

ಗಂಗೋತ್ರಿಯ ಜ್ಞಾನದೀಪ ಪ್ರಥಮ ದರ್ಜೆ ಕಾಲೇಜಿನ ತಂಡವೂ ಹಿರಣ್ಯಕಶ್ಯಪನ ಜೀವನ ಚರಿತ್ರೆಯನ್ನು, ಭಕ್ತ ಪ್ರಹ್ಲಾದ ಸಿನಿಮಾದ ತುಣುಕು ಮತ್ತು ಸಂಭಾಷಣೆಗಳ ನೃತ್ಯ ರೂಪಕಗೊಳಿಸಿ ಮಹಾವಿಷ್ಣುವಿನ ನರ ಸಿಂಹಾವತಾರದ ದರ್ಶನ ಮಾಡಿಸಿದರು.


ಮೈಸೂರಿನ ವಿಶ್ವಮಾನವ ಪಿಯು ಕಾಲೇಜು ವಿದ್ಯಾರ್ಥಿಗಳಿಂದ ದೇಶಭಕ್ತಿ ಅನಾವರಣ


ಕಣ್ಮನ ಸೆಳೆದ ವಿದ್ಯಾರ್ಥಿಯೊಬ್ಬನ ನೃತ್ಯರೂಪಕ

ದಸರಾ ಚಲನಚಿತ್ರೋತ್ಸವ
(ಐನಾಕ್ಸ್ ಮಲ್ಟಿಪ್ಲೆಕ್ಸ್)

ಸ್ಕ್ರೀನ್ 2: ಬೆ.10– ಬಘೀರ, ಮ.1– ಛೂ ಮಂತರ್, ಸಂ.4– ಎ ಸಂ.7– ಮಾದೇವ

ಸ್ಕ್ರೀನ್ 3 : ಬೆ.10.15– ಫೈಜೂ ಮತ್ತು ಹುಂಜ, ಮ.1.15– ನುಡಿಮುತ್ತು ಸಂ.4.15– ನಿಂಬಿಯಾ ಬನಾದ ಮ್ಯಾಗ, ರಾ.7.15– ಶಾಂತಿ ನಿಕೇತನ್

ಸ್ಕ್ರೀನ್ 4 : ಬೆ.10.30– ದ 47, ಮ.1.30– ಆಡಿಟಿ, ಮ.3.45– ಕಾಲಾಂತರ & ಹಬ್ಬದ ಹಸಿವು (ಕಿರುಚಿತ್ರ), ಸಂ.4.30– ದ ಪ್ರಾಮಿಸ್ಡ್ ಲ್ಯಾಂಡ್, ರಾ.7.30– ಲೆ ಪ್ರಿನ್ಸ್

ಶ್ವಾನ, ಮುದ್ದು ಪ್ರಾಣಿಗಳ ಪ್ರದರ್ಶನ–2025

ಮೈಸೂರು, ಸೆ.16–ಮೈಸೂರು ದಸರಾ ಮಹೋತ್ಸವ–2025 ಶ್ವಾನ, ಮುದ್ದು ಪ್ರಾಣಿಗಳ ಪ್ರದರ್ಶನವನ್ನು ಸೆ.28ರಂದು ಬೆಳಗ್ಗೆ 9ಕ್ಕೆ ಜೆ.ಕೆ. ಮೈದಾನ ರೈಲ್ವೆ ಸ್ಟೇಷನ್ ಹತ್ತಿರ ಆಯೋಜಿಸಲಾಗಿದೆ.

ಪ್ರದರ್ಶನದಲ್ಲಿ ಭಾಗವಹಿಸುವ ಪ್ರಾಣಿಗಳಿಗೆ ನೋಂದಣಿ ಕಡ್ಡಾಯ. ಸ್ಪರ್ಧೆ ನಡೆಯುವ ಸ್ಥಳದಲ್ಲಿ ನೋಂದಾಯಿಸಲು ಅವಕಾಶವಿರುವುದಿಲ್ಲ (No Spot Registration), ಪ್ರದರ್ಶನದಲ್ಲಿ ಭಾಗವಹಿಸಲು ಯಾವುದೇ ಕೆನೆಲ್ ಕ್ಲಬ್‌ನ ನೋಂದಣಿ ಪತ್ರದ ಅಗತ್ಯವಿಲ್ಲ. ಎಲ್ಲಾ ಶ್ವಾನ, ಮುದ್ದು ಪ್ರಾಣಿಗಳಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ, ಪ್ರದರ್ಶನಕ್ಕೆ ನೋಂದಾಯಿಸಿದ ಪ್ರಾಣಿಗಳೊಂದಿಗೆ ಸೆ.28ರಂದು ಬೆಳಿಗ್ಗೆ 9 ಗಂಟೆಗೆ ಜೆ.ಕೆ. ಮೈದಾನ, ರೈಲ್ವೆ ಸ್ಟೇಷನ್ ಎದುರು ಇಲ್ಲಿ ಹಾಜರಿರಬೇಕು, ಪ್ರದರ್ಶನದಲ್ಲಿ ಭಾಗವಹಿಸುವ ಶ್ವಾನ, ಮುದ್ದು ಪ್ರಾಣಿಗಳ ರಕ್ಷಣೆ (Safety) ಮಾಲೀಕರ ಜವಾಬ್ದಾರಿ, ಶ್ವಾನ, ಮುದ್ದು ಪ್ರಾಣಿಗಳಿಗೆ ಬೇಕಾದ ಆಹಾರ, ಬೆಲ್ಟ್, ಚೈನು ಇತ್ಯಾದಿ ಸಾಮಗ್ರಿಗಳನ್ನು ಮಾಲೀಕರೇ ತರಬೇಕು, ಬಹುಮಾನಕ್ಕಾಗಿ ಆಯ್ಕೆ ಮಾಡುವಾಗ ತೀರ್ಪುಗಾರರ ತೀರ್ಮಾನವೇ ಅಂತಿಮ, ಭಾಗವಹಿಸುವ ಎಲ್ಲಾ ಪ್ರಾಣಿಗಳಿಗೂ



ಸರ್ಟಿಫಿಕೇಟ್ ನೀಡಲಾಗುವುದು ಮತ್ತು ವಿಜೇತ ಶ್ವಾನಗಳಿಗೆ ಬಹುಮಾನ ವಿತರಿಸಲಾಗುವುದು, ಪ್ರಾಣಿಗಳಿಗೆ ಸ್ವಚ್ಛ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿರುತ್ತದೆ, ಪ್ರಾಥಮಿಕ ಚಿಕಿತ್ಸಾ ಸೌಲಭ್ಯಗಳ ವ್ಯವಸ್ಥೆ ಮಾಡಲಾಗಿರುತ್ತದೆ, ಯಾವುದೇ ರೋಗಗ್ರಸ್ಥ ಪ್ರಾಣಿಗಳಿಗೆ, ಶ್ವಾನಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ, ವನ್ಯಮೃಗ ಕಾಯಿದೆಯಡಿ ಒಳಪಡುವ ಪ್ರಾಣಿ ಪಕ್ಷಿಗಳನ್ನು ಪ್ರದರ್ಶನದ ಮೈದಾನದಲ್ಲಿ ನಿರ್ಬಂಧಿಸಿದೆ.

ನೋಂದಣಿ ಮಾಡಿಕೊಳ್ಳಲು ಮೈಸೂರು ನಗರದ ಪಶು ಆಸ್ಪತ್ರೆಗಳನ್ನು, ರೈತ ದಸರಾ ಉಪ ಸಮಿತಿಯ ಭೀಮಪ್ಪ ಕ.ಲಾಳಿ, ರೈತ ದಸರಾ ಉಪಸಮಿತಿಯ ಕಾರ್ಯಾಧ್ಯಕ್ಷ ಕೆ.ಹೆಚ್. ರವಿ, ರೈತ ದಸರಾ ಉಪ ಸಮಿತಿಯ ಕಾರ್ಯದರ್ಶಿ ಡಾ. ನಾಗರಾಜು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ಕುಸ್ತಿ ಪಟುಗಳು, ಅಭಿಮಾನಿಗಳಿಗೆ ಸಂತಸದ ಸುದ್ದಿ
ಕುಸ್ತಿ ಅಖಾಡಕ್ಕೆ ನವರೂಪ; ಸುರಕ್ಷಿತ ಸೂರಡಿ ಕುಳಿತು ಸಾಹಸ ಕ್ರೀಡೆ ವೀಕ್ಷಿಸುವ ಸದವಕಾಶ



ಮೈಸೂರು, ಸೆ.16(ಎಂಕೆ)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ದಸರಾ ಕುಸ್ತಿ ಪಂದ್ಯಗಳು ಆಯೋಜನೆಗೊಳ್ಳುವ ದೊಡ್ಡಕೆರೆ ಮೈದಾನ, ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದ ಕುಸ್ತಿ ಅಖಾಡದಲ್ಲಿ ಅಭಿವೃದ್ಧಿ ಪರ್ವ ಆರಂಭವಾಗಿದ್ದು, ಇಡೀ ಕುಸ್ತಿ ಅಖಾಡದ ಸ್ವರೂಪವೇ ಬದಲಾಗುತ್ತಿದೆ...!

ಪ್ರತೀ ವರ್ಷ ಸುರಿಯುವ ಮಳೆ, ಸುಡುವ ಬಿಸಿಲಿನಲ್ಲಿ ಕುಳಿತು ಕುಸ್ತಿ ಪಂದ್ಯಗಳ ವೀಕ್ಷಣೆ ಮಾಡುತ್ತಿದ್ದ ಕುಸ್ತಿ ಅಭಿಮಾನಿಗಳ ಕಷ್ಟ ದೂರವಾಗಿದ್ದು, ವೀಕ್ಷಕರ ಗ್ಯಾಲರಿಗೆ ಚಾವಣಿ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿಗಳಾಗಬೇಕು ಎನ್ನುವ ಬಹುದಿನಗಳ ಬೇಡಿಕೆ ಕಡೆಗೂ ಸಾಕಾರಗೊಂಡಿದೆ. ಈ ವಾರಾಂತ್ಯವೇ ಕಾಮಗಾರಿ ಪೂರ್ಣಗೊಂಡು ಹೊಸ ರೂಪದಲ್ಲಿ ಕುಸ್ತಿ ಅಖಾಡ ಅಣಿಯಾಗಲಿದೆ.

ಮೈಸೂರು ಪೈಲ್ವಾನರ ಮನವಿ ಸಾಕಾರಗೊಂಡಿದೆ...

ದಸರಾ ಸೇರಿದಂತೆ ಇನ್ನಿತರೆ ಸಂಘ–ಸಂಸ್ಥೆಗಳಿಂದ ಕುಸ್ತಿ ನಡೆಯುವ ಸಂದರ್ಭಗಳಲ್ಲಿ ಗ್ಯಾಲರಿಯಲ್ಲಿ ಕುಳಿತು ವೀಕ್ಷಣೆ ಮಾಡಲು ಕಷ್ಟ, ಮಳೆ, ಗಾಳಿ, ಬಿಸಿಲಿನಿಂದ ತೊಂದರೆಯಾಗುತ್ತಿದೆ. ಮಳೆ ಬಂದರೆ ಅಖಾಡದ ಸುತ್ತಲೂ ಕೊಳಚೆ ಪರಿಸ್ಥಿತಿ ಉಂಟಾಗುತ್ತದೆ ಎಂದು ಮೈಸೂರಿನ ಹಲವು ಪೈಲ್ವಾನರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಚಾವಣಿ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿಗೆ ಮನವಿ ಮಾಡಿದ್ದರು. ಕೂಡಲೇ ಸ್ಪಂದಿಸಿದ್ದ ಮುಖ್ಯಮಂತ್ರಿಗಳು, ನೀಡಿದ ಸೂಚನೆ ಮೇರೆಗೆ ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳ ಪರಿಶೀಲನೆ ಮಾಡಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆದು ನಿರ್ಮಿತಿ ಕೇಂದ್ರದ ವತಿಯಿಂದ 5 ಕೋಟಿ ರೂ.ವೆಚ್ಚದಲ್ಲಿ ಕುಸ್ತಿ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ಕಡೆಗೂ ಮೈಸೂರು ಪೈಲ್ವಾನರ ಮನವಿ ಸಾಕಾರಗೊಂಡಿದೆ.

- **ಅಯೂಬ್ ಖಾನ್,** ಅಧ್ಯಕ್ಷರು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ದಸರಾ ವಸ್ತುಪ್ರದರ್ಶನ ಆವರಣದಲ್ಲಾಗುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಜೊತೆಗೆ ಕುಸ್ತಿ ಅಖಾಡದ ಅಭಿವೃದ್ಧಿಯೂ ಚುರುಕಾಗಿ ನಡೆಯುತ್ತಿದ್ದು, ಗ್ಯಾಲರಿಗೆ ಸುಣ್ಣ–ಬಣ್ಣ ಬಳಿಯುವುದರ ಜೊತೆಗೆ ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಚಾವಣಿ ನಿರ್ಮಾಣ, ಇಂಟರ್ ಲಾಕ್, ಅಖಾಡ ಎದುರು ವಾಹನಗಳ ಪಾರ್ಕಿಂಗ್‌ಗೆ ಟೈಲ್ಸ್‌ಗಳ ಅಳವಡಿಕೆ, ಕುಸ್ತಿ ಅಖಾಡ ಸುತ್ತಲೂ ಟೈಲ್ಸ್ ಅಳವಡಿಕೆ ಜೊತೆಗೆ ತೀರ್ಪುಗಾರರು ಹಾಗೂ ಅತಿಥಿಗಳು ಕುಳಿತುಕೊಳ್ಳಲು ವೇದಿಕೆ, ಪ್ರತ್ಯೇಕ ಎರಡು ಶೌಚಾಲಯ, ಪೈಲ್ವಾನರ ಸ್ನಾನಕ್ಕೆ ವ್ಯವಸ್ಥೆ ಹಾಗೂ ಉದ್ಘಾಟನಾ ವೇದಿಕೆ ದುರಸ್ತಿ ಕಾಮಗಾರಿಗಳು ನಡೆಯುತ್ತಿವೆ.

ಅಭಿವೃದ್ಧಿ ಆಗಬೇಕಿತ್ತು...

ಮೈಸೂರು ದಸರಾ ಸಂದರ್ಭದಲ್ಲಿ ಅರಮನೆ ಆವರಣದಲ್ಲಿ ನಡೆಯುತ್ತಿದ್ದ ಕುಸ್ತಿ ಪಂದ್ಯಗಳು ಶ್ರೀಕಂಠದತ್ತ ಒಡೆಯರ್ ಹುಟ್ಟಿದಾಗ ಆಯೋಜಿಸಿದ್ದ ಕುಸ್ತಿ ಪಂದ್ಯಾವಳಿಯಲ್ಲಿ ಗಲಾಟೆ ಆಗಿ ಆ ವರ್ಷ ಕುಸ್ತಿ ಪಂದ್ಯಾವಳಿಯನ್ನೇ ರದ್ದು ಮಾಡಲಾಗಿತ್ತು. 1954 ರಿಂದ ಜಯಚಾಮರಾಜ ಅಖಾಡದಲ್ಲಿ ದಸರಾ ಕುಸ್ತಿ ಪಂದ್ಯಗಳನ್ನು ಆಯೋಜಿಸಲಾಗುತ್ತಿತ್ತು. ನಂತರದ ದಿನಗಳಲ್ಲಿ ದೊಡ್ಡಕೆರೆ ಮೈದಾನದಲ್ಲಿ ಅಖಾಡ ಅಭಿವೃದ್ಧಿಪಡಿಸಲಾಗಿದ್ದು, ಮೂಲಸೌಕರ್ಯಗಳ ವ್ಯವಸ್ಥೆ ಸರಿಯಾಗಿ ಇರಲಿಲ್ಲ. ಕಡೆಗೂ ಚಾವಣಿ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವುದು ಸ್ವಾಗತಾರ್ಹ.

- **ಯಜಮಾನ್ ಪೈ.ಮಹದೇವ್,** ಹಿರಿಯ ಪೈಲ್ವಾನರು

ದೊಡ್ಡಕೆರೆ ಮೈದಾನದ ಆವರಣದಲ್ಲಿರುವ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ 2008ರ ದಸರಾ ವೇಳೆ ಕುಸ್ತಿ ಅಖಾಡ ನಿರ್ಮಾಣ ಕಾಮಗಾರಿ ಆರಂಭಿಸಿ, 2010ರಲ್ಲಿ ಉದ್ಘಾಟನೆ ಮಾಡಲಾಗಿತ್ತು. ನಂತರ 2011 ರಲ್ಲಿ 50 ಲಕ್ಷ ರೂ.ವೆಚ್ಚದಲ್ಲಿ ಪ್ರೇಕ್ಷಕರ ಗ್ಯಾಲರಿ ನಿರ್ಮಾಣ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಲಾಗಿತ್ತು. ಅಂದಿನಿಂದ ಇಲ್ಲಿಯವರೆಗೆ ಪ್ರತೀ ವರ್ಷವೂ ದಸರಾ ವೇಳೆ ಕುಸ್ತಿ ಅಭಿಮಾನಿಗಳು ಮಳೆ, ಗಾಳಿ, ಬಿಸಿಲಿನ ನಡುವೆ ಪಂದ್ಯಗಳನ್ನು ವೀಕ್ಷಣೆ ಮಾಡುತ್ತಿದ್ದು, ಪ್ರೇಕ್ಷಕರ ಗ್ಯಾಲರಿಗೆ ಚಾವಣಿ ನಿರ್ಮಾಣ ಮಾಡಬೇಕು ಎಂಬ ಬೇಡಿಕೆ 15 ವರ್ಷಗಳ ನಂತರ ಈಡೇರಿದೆ.

ಹೊಸ ರೂಪದಲ್ಲಿ ಕುಸ್ತಿ ಅಖಾಡ: ಇಷ್ಟು ಕುಸ್ತಿ ಅಖಾಡ ಬಿಟ್ಟರೆ ಉಳಿದೆಲ್ಲಾ ತೆರೆದ ಜಾಗದಂತಿದ್ದ ಕುಸ್ತಿ ಕ್ರೀಡಾಂಗಣ ಹೊಸ ರೂಪ ಪಡೆಯುತ್ತಿದೆ. ಶೌಚಾಲಯವಿಲ್ಲದೆ ಪರದಾಡುತ್ತಿದ್ದ ಕುಸ್ತಿ ಪಟುಗಳು ಹಾಗೂ ಪ್ರೇಕ್ಷಕರ ಅನುಕೂಲಕ್ಕಾಗಿ ಪ್ರತ್ಯೇಕವಾಗಿ ಎರಡು ಶೌಚಾಲಯ ನಿರ್ಮಾಣ ಮಾಡಲಾಗುತ್ತಿದ್ದು, ಸುತ್ತಲೂ ನೆರಳಿನಿಂದ ಕೂಡಿರುವ ಗ್ಯಾಲರಿಯಲ್ಲಿ ಕುಳಿತು ಪಂದ್ಯಗಳನ್ನು ವೀಕ್ಷಣೆ ಮಾಡುವ ಅನುಕೂಲ ಸದ್ಯದಲ್ಲಿಯೇ ಅಭಿಮಾನಿಗಳಿಗೆ ದೊರೆಯಲಿದೆ.

ವಾರಾಂತ್ಯಕ್ಕೆ ಕಾಮಗಾರಿ ಮುಕ್ತಾಯ: ಆ.29 ರಂದು ಸ್ಥಳ ಪರಿಶೀಲನೆ ನಡೆಸಿ, ಕುಸ್ತಿ ಅಖಾಡದ ಅಭಿವೃದ್ಧಿ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವರು ಸೂಚನೆ ನೀಡಿದ ಎರಡು ದಿನಗಳಲ್ಲಿಯೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆಯನ್ನು ಪಡೆದ ಕೂಡಲೇ ಕಾಮಗಾರಿ ಆರಂಭಿಸಲಾಗಿದೆ. ಕಳೆದ 10–12 ದಿನಗಳಿಂದ ಕಾಮಗಾರಿ ನಡೆಸಲಾಗುತ್ತಿದ್ದು, ಈ ವಾರಾಂತ್ಯಕ್ಕೆ ಮುಕ್ತಾಯಗೊಳ್ಳಲಿದೆ ಎಂದು ನಿರ್ಮಿತಿ ಕೇಂದ್ರ ಎಇಇ ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಾಮಗಾರಿ ಹಂಚಿಕೆ: ಕಡಿಮೆ ಸಮಯದಲ್ಲಿ ಕುಸ್ತಿ ಅಖಾಡ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ನೀಡಲಾಗಿದ್ದು, ಇಂಜಿನಿಯರ್‌ಗಳ ಸಮ್ಮುಖದಲ್ಲಿ ಚುರುಕಾಗಿ ಕಾಮಗಾರಿ ನಡೆಸುತ್ತಿದ್ದೇವೆ. ದಸರಾ ಉದ್ಘಾಟನೆ ವೇಳೆ ಕುಸ್ತಿ ಅಖಾಡ ಸಂಪೂರ್ಣವಾಗಿ ಸಿದ್ಧವಾಗಲಿದೆ ಎಂದು ಗುತ್ತಿಗೆದಾರರಾದ ರಾಕೇಶ್, ಕೈಸರ್ ಅಹಮದ್, ವೆಂಕಟೇಶ್, ಮನೋಜ್ ಮತ್ತು ಜಯರಾಮ್ ತಿಳಿಸಿದರು.

ಸಾಂಪ್ರದಾಯಿಕ ಶೈಲಿ ಆನೆ ಶಿರ ಶಿಲ್ಪದ ಕಾರಂಜಿ ಸ್ವಚ್ಛತಾ ಕಾರ್ಯ ಆರಂಭ

ಯುದ್ಧ ಕಾಲೇ ಶಸ್ತ್ರಾಭ್ಯಾಸ ಎಂಬಂತೆ ದಸರಾ ಸಮಯದಲ್ಲಿ ತರಾತುರಿಯಲ್ಲಿ ಕಾಮಗಾರಿ


ಮೈಸೂರಿನ ಅಬ್ದುಲ್ ಕಲಾಂ ಆಜಾದ್ ವೃತ್ತದ ಸಾಂಪ್ರದಾಯಿಕ ಶಿಲ್ಪದ ಕಾರಂಜಿ ಸ್ವಚ್ಛಗೊಳಿಸುವ ಕಾರ್ಯ ಆರಂಭವಾಗಿದೆ.

ಮೈಸೂರು ಮಿತ್ರ ಫಲಶ್ರುತಿ

ಮೈಸೂರು, ಸೆ.16(ಬಿಎಲ್‌ಯು)– ಮೈಸೂರಿನ ಸಾಂಪ್ರದಾಯಿಕ ಶೈಲಿ ಆನೆ ಶಿರ ಶಿಲ್ಪದ ಕಾರಂಜಿ ಹಾಗೂ ವೃತ್ತವನ್ನು ಸ್ವಚ್ಛಗೊಳಿಸುವ ಕಾರ್ಯ ಆರಂಭವಾಗಿದೆ.

ಯುದ್ಧ ಕಾಲೇ ಶಸ್ತ್ರಾಭ್ಯಾಸ ಎಂಬಂತೆ ಮೈಸೂರು ದಸರಾಗೆ ದಿನಗಣನೆ ಆರಂಭವಾಗಿರುವ ಸಂದರ್ಭದಲ್ಲಿ ಈಗ ತರಾತುರಿಯಲ್ಲಿ ಕಾರಂಜಿ ಮತ್ತು ವೃತ್ತಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ

ನಗರದ ಹೈವೆ ವೃತ್ತ ಅಥವಾ ಅಬ್ದುಲ್ ಕಲಾಂ ಆಜಾದ್ ವೃತ್ತದಲ್ಲಿರುವ ಕಾರಂಜಿಯನ್ನು ಸೂಕ್ತ ನಿರ್ವಹಣೆ ಮಾಡದೆ ಪಾಳು ಬಿದ್ದಿದೆ ಎಂದು 'ಮೈಸೂರು ಮಿತ್ರ' ಸೆಪ್ಟೆಂಬರ್ 6ರ ಸಂಚಿಕೆಯಲ್ಲಿ ಸುದ್ದಿ ಪ್ರಕಟವಾಗಿತ್ತು.

ಮೈಸೂರಿನ ಸಾಂಪ್ರದಾಯಿಕ ಶೈಲಿ ಆನೆ ಶಿರ ಶಿಲ್ಪ ಸೌಂದರ್ಯಕ್ಕೆ ಧಕ್ಕೆ ಆಗಿರುವುದರ ಬಗ್ಗೆ, ನಗರ ಪಾಲಿಕೆಯ ದಿವ್ಯ ನಿರ್ಲಕ್ಷ್ಯವನ್ನು ಅನಾವರಣಗೊಳಿಸಲಾಗಿತ್ತು ಈಗ ಆನೆ ಶಿರ ಶಿಲ್ಪದ ಕಾರಂಜಿ ಹಾಗೂ ವೃತ್ತವನ್ನು ಸ್ವಚ್ಛಗೊಳಿಸುವ ಕಾರ್ಯ ಆರಂಭಿಸಲಾಗಿದೆ. ವೃತ್ತ ಹಾಗೂ ಕಾರಂಜಿ ಮೇಲೆ ಬೆಳೆದಿದ್ದ ಗಿಡಗಳನ್ನು ತೆರವು ಮಾಡಲಾಗುತ್ತಿದೆ.

ಮೈಸೂರು ದಸರಾ ಚಾಲನೆಗೊಳ್ಳಲು ದಿನಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ನಗರದ ಹಲವು ವೃತ್ತ ಹಾಗೂ ಕಾರಂಜಿಗಳನ್ನು ಸ್ವಚ್ಛಗೊಳಿಸುವ ಕಾರ್ಯ ಆರಂಭವಾಗಿದೆ.

ಕೊಡಗು ಜಿಲ್ಲೆಯ ಮಳೆ ಹಾನಿ ಬಗ್ಗೆ ನಿಖರ ಮಾಹಿತಿ ಒದಗಿಸಿ

ಅಧಿಕಾರಿಗಳಿಗೆ ಉಸ್ತುವಾರಿ ಸಚಿವ ಭೋಸರಾಜ್ ಸೂಚನೆ



ಮಳೆಹಾನಿ ಪರಿಹಾರ ಸಂಬಂಧ ಸಭೆ ನಡೆಸಿದ ಉಸ್ತುವಾರಿ ಸಚಿವ ಬೋಸರಾಜು.

ಮಡಿಕೇರಿ,ಸೆ.16– ಕಳೆದ ನಾಲ್ಕು ತಿಂಗಳುಗಳಿಂದ ಸುರಿದ ಮಳೆಯಿಂದ ಉಂಟಾದ ಹಾನಿ ಬಗ್ಗೆ ಲೋಕೋಪಯೋಗಿ, ಪಂಚಾಯತ್ ರಾಜ್, ಕೃಷಿ, ತೋಟಗಾರಿಕೆ, ಶಾಲಾ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಸ್ಥಳೀಯ ಸಂಸ್ಥೆ ಸೇರಿದಂತೆ ವಿವಿಧ ಇಲಾಖೆಗಳಿಂದ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಮಾಹಿತಿ ಪಡೆದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಳೆಹಾನಿ ಪರಿಹಾರ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ನಾಲ್ಕು ತಿಂಗಳಲ್ಲಿ ಸುರಿದ ಧಾರಾಕಾರ ಮಳೆಯಿಂದ ರಸ್ತೆ, ಸೇತುವೆ, ಶಾಲಾ ಹಾಗೂ ಅಂಗನವಾಡಿ ಕಟ್ಟಡಗಳು, ಹಾಗೆಯೇ ಕೃಷಿ ಹಾಗೂ ತೋಟಗಾರಿಕೆ ಬೆಳೆ ಹಾನಿ ಆಗಿದ್ದು, ಈ ಬಗ್ಗೆ ನಿಖರ ಅಂಕಿ ಅಂಶ ನೀಡುವಂತೆ ನಿರ್ದೇಶನ ನೀಡಿದರು.

ಸಭೆಯ ಆರಂಭದಲ್ಲಿ ಮಾಹಿತಿ ನೀಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು, ಈ ಬಾರಿ ಜೂನ್ ತಿಂಗಳಲ್ಲಿ ಹೆಚ್ಚಿನ ಮಳೆಯಾಗಿದ್ದು, 2025ರ ಜನವರಿ 01 ರಿಂದ ಸೆಪ್ಟೆಂಬರ್, 14 ರವರೆಗೆ 2,331 ಮಿ.ಮೀ. ವಾಡಿಕೆ ಮಳೆಗೆ, 2,799 ಮಿ.ಮೀ. ಮಳೆಯಾಗಿದೆ ಎಂದು ಮಾಹಿತಿ ನೀಡಿದರು.

ಈ ಬಾರಿ ಮರ ಬಿದ್ದು ಇಬ್ಬರು, ಮನೆ ಗೋಡೆ ಕುಸಿದು ಒಬ್ಬರು ಮೃತ ಪಟ್ಟಿದ್ದಾರೆ. ಹಾಗೆಯೇ 23 ಜಾನುವಾರುಗಳು ಮೃತ ಪಟ್ಟಿದ್ದು, ಪರಿಹಾರ ವಿತರಿಸಲಾಗಿದೆ ಎಂದು ಹೇಳಿದರು.

ಕಳೆದ ಬಾರಿಯಂತೆ ಈ ಬಾರಿಯೂ ಸಹ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ವಿಪತ್ತನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆ ಎಂದರು. ಕೃಷಿ ಹಾಗೂ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಭತ್ತ, ಅಡಿಕೆ, ಸಂಬಂಧಿಸಿ ದಂತೆ ಬೆಳೆ ಹಾನಿ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ. ಕೃಷಿ, ತೋಟಗಾರಿಕೆ, ಕಂದಾಯ ಹಾಗೆಯೇ ಕಾಫಿ ಮಂಡಳಿಯವರು ಬೆಳೆ ಹಾನಿ ಸಂಬಂಧ ಜಂಟಿ ಸಮೀಕ್ಷೆ ಕೈಗೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ವಿವರಿಸಿದರು.

ಪ್ರಸ್ತುತ ಪ್ರಾಕೃತಿಕ ವಿಕೋಪ ನಿಧಿಯಡಿ ಜಿಲ್ಲಾಧಿಕಾರಿ ಅವರ ಪಿಡಿ ಖಾತೆಯಲ್ಲಿ ರೂ.3505.14 ಲಕ್ಷ ಹಣವಿದೆ ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದರು.

ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಹಾನಿ ಸಂಬಂಧ 4.52 ಕೋಟಿ ರೂ. ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ ಹಾಗೆಯೇ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದರು.

ಗರ್ವಾಲೆ ಗ್ರಾಮದ ಅಂಗನವಾಡಿಗೆ ಮರ ಬಿದ್ದು ಹಾನಿಯಾಗಿತ್ತು. ಉಳಿದಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ವ್ಯಾಪ್ತಿಯ ಕಂಬಗಳು, ವಿದ್ಯುತ್ ಪರಿವರ್ತಕಗಳು ಹಾನಿಯಾಗಿದ್ದು, ಈ ಬಗ್ಗೆ ಮಾಹಿತಿ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರಾದ ಡಾ.ಮಂತರ್ ಗೌಡ ಅವರು ಬೆಳೆ ಹಾನಿ ಸಂಬಂಧ ನಿಖರ ಮಾಹಿತಿ ಒದಗಿಸಬೇಕು. ರೈತರಿಗೆ ಅನ್ಯಾಯವಾಗದಂತೆ ಗಮನಹರಿಸಬೇಕು ಎಂದರು.

ರೈತರಲ್ಲಿ ವಿಶ್ವಾಸ ಮೂಡಿಸಿ ಬೆಳೆ ಸಮೀಕ್ಷೆ ಕೈಗೊಳ್ಳಬೇಕು. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಸಮೀಕ್ಷೆ ಕೈಗೊಳ್ಳಬೇಕು ಎಂದು ಹೇಳಿದರು.

ಜಿಪಂ. ಸಿಇಒ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಆರ್. ಐಶ್ವರ್ಯ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಧರ್ಮಜ ಉತ್ತಪ್ಪ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಇತರರಿದ್ದರು.

ಅ.17ರಂದು ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ

ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಉಸ್ತುವಾರಿ ಸಚಿವ ಭೋಸರಾಜು ಸೂಚನೆ



ಕಾವೇರಿ ತೀರ್ಥೋದ್ಭವ ಸಂಬಂಧ ಸಭೆ ನಡೆಸಿದ ಉಸ್ತುವಾರಿ ಸಚಿವ ಬೋಸರಾಜು.

ಮಡಿಕೇರಿ, ಸೆ16– ಅಕ್ಟೋಬರ್, 17 ರಂದು ತಲಕಾವೇರಿಯಲ್ಲಿ ಜರುಗುವ ಪವಿತ್ರ ಕಾವೇರಿ ತೀರ್ಥೋದ್ಭವ ಸಂಬಂಧ ಎಲ್ಲಾ ರೀತಿಯ ಪೂರ್ವ ತಯಾರಿ ಮಾಡಿಕೊಳ್ಳುವಂತೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್. ಭೋಸರಾಜು ಸೂಚಿಸಿದ್ದಾರೆ.

ಭಾಗಮಂಡಲ 'ಶ್ರೀ ಭಗಂಡೇಶ್ವರ ದೇವಾಲಯದ ಹಳೆ ಮುಡಿಶೆಡ್ ಕಟ್ಟಡದ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸಚಿವರು ಮಾತನಾಡಿದರು. ಪವಿತ್ರ ತೀರ್ಥೋದ್ಭವ ಸಂಬಂಧ ತಲಕಾವೇರಿಯಲ್ಲಿ ಭಕ್ತಾದಿಗಳಿಗೆ ಯಾವುದೇ ರೀತಿ ಕಿರಿಕಿರಿ ಉಂಟಾಗದಂತೆ ಅಧಿಕಾ ರಿಗಳು ಗಮನಹರಿಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಈ ಬಾರಿ ಅಕ್ಟೋಬರ್, 17 ರಂದು ಮಧ್ಯಾಹ್ನ 1.44 ಗಂಟೆಗೆ ಸಲ್ಲುವ ಮಕರ ಲಗ್ನದಲ್ಲಿ ಪವಿತ್ರ ತೀರ್ಥೋದ್ಭವ ಸಂಭವಿಸುವುದರಿಂದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಸಾಧ್ಯತೆ ಇದ್ದು, ಆದ್ದರಿಂದ ಅಗತ್ಯ ಕ್ರಮ ವಹಿಸುವಂತೆ ಸಚಿವರು ಸೂಚಿಸಿದರು. ಪೊಲೀಸ್ ಇಲಾಖೆ ಪವಿತ್ರ ತೀರ್ಥೋದ್ಭವ ಸಂಬಂಧ ಅಗತ್ಯ ಬಂದೋಬಸ್ತ್ ಮಾಡಬೇಕು. ಸಾರಿಗೆ ಇಲಾಖೆ ಅಧಿಕಾರಿ ಗಳು ಅಗತ್ಯ ಬಸ್ ಸೌಲಭ್ಯ ಒದಗಿಸುವುದು, ಕಾವೇರಿ ನೀರಾವರಿ ನಿಗಮ, ಸೆಸ್ಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿವಿಧ ಇಲಾಖೆ ಅಧಿಕಾರಿಗಳು ತಮ್ಮ ತಮ್ಮ ಹಂತದಲ್ಲಿ ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಸಚಿವರು ಸೂಚಿಸಿದರು.

ಸೆಪ್ಟೆಂಬರ್, 26 ರಿಂದ ವಿವಿಧ ಪೂಜಾ ಕಾರ್ಯಕ್ರಮಗಳು ಆರಂಭವಾಗಲಿದೆ. ಸಮಸ್ಯೆಗಳು ಇದ್ದಲ್ಲಿ ಜಿಲ್ಲಾಧಿಕಾರಿ ಅವರ ಗಮನಕ್ಕೆ ತರಬೇಕು. ಜೊತೆಗೆ ಶಾಸಕರ ಗಮನಕ್ಕೂ ತಂದಲ್ಲಿ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲಾಗುವುದು ಎಂದು ತಿಳಿಸಿದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ ಅವರು ಮಾತನಾಡಿ ಭಕ್ತಾದಿ ಗಳಿಗೆ ಯಾವುದೇ ರೀತಿಯ ತೊಂದ ರೆಯಾಗದಂತೆ ಗಮನಹರಿಸುವಂತೆ ಸೂಚಿಸಿದರು.

ಈ ವೇಳೆ ಶಾಸಕರು, ಸಮಾಜದ ಮುಖಂಡರು ಮತ್ತು ಕಾವೇರಿ ತೀರ್ಥೋ ದ್ಭವ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದು, ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಬಸ್ ಡಿಕ್ಕಿ: ಸಹಾಯಕ ಧರ್ಮಗುರು ಸಾವು



ಮಡಿಕೇರಿ,ಸೆ.16– ರಸ್ತೆಯಲ್ಲಿ ತೆರಳುತ್ತಿದ್ದ ಯುವಕ ನೋರ್ವನಿಗೆ ಕೆಎಸ್‌ಆರ್‌ಟಿಸಿ ಬಸ್‌ವೊಂದು ಡಿಕ್ಕಿಯಾದ ಪರಿಣಾಮ ಯುವಕ ಸಾವನ್ನಪ್ಪಿದ ಘಟನೆ ಗೋಣಿಕೊಪ್ಪಲು ಬಳಿಯ ಹಾತೂರಿನಲ್ಲಿ ನಡೆದಿದೆ. ಮಡಿಕೇರಿ ಬಳಿಯ ಹಾಕತ್ತೂರು ನಿವಾಸಿ ಮೊಹಮ್ಮದ್ ಮಿಜ್‌ಲಾಜ್(27) ಎಂಬುವರೇ ಸಾವನ್ನಪ್ಪಿದ ದುರ್ದೈವಿಯಾಗಿದ್ದಾರೆ.

ಮೃತ ಮೊಹಮ್ಮದ್ ಮಿಜ್‌ಲಾಜ್ ಹಾತೂರು ಮಸೀದಿಯಲ್ಲಿ ಸಹಾಯಕ ಗುರುಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸೋಮವಾರ ಮಧ್ಯಾಹ್ನ ಪ್ರಾರ್ಥನೆಗೆಂದು ಮಸೀದಿಗೆ ನಡೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಕೊಳ್ಳೆಗಾಲದಿಂದ ವಿರಾಜಪೇಟೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ವೊಂದು ಹಿಂದಿನಿಂದ ಡಿಕ್ಕಿಹೊಡೆದ ಪರಿಣಾಮ ತಲೆ ಗಂಭೀರವಾಗಿ ಗಾಯಗೊಂಡಿದ್ದು, ತಕ್ಷಣ ಸ್ಥಳೀಯರು ಗಾಯಾಳುವನ್ನು ವಿರಾಜಪೇಟೆ ಆಸ್ಪತ್ರೆಗೆ ಕರೆದೊಯ್ದು ಬಳಿಕ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದಾರೆ. ಮಡಿಕೇರಿಯ ಜಿಲ್ಲಾಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಖಲೀಲ್ ಬಾಷಾ ಮಾತನಾಡಿ, ಮೃತ ಯುವಕ ಮಿಜ್‌ಲಾಜ್ ಕುಟುಂಬ ಬಡವರಾಗಿದ್ದು, ತನ್ನ ದುಡಿಮೆಯಿಂದಲೇ ಕುಟುಂಬವನ್ನು ಸಲಹುತ್ತಿದ್ದ ಇದೀಗ ಬಡ ಕುಟುಂಬ ಆಧಾರ ಸ್ತಂಭವನ್ನು ಕಳೆದುಕೊಂಡಿದ್ದು, ಸರಕಾರ ಮೃತ ಯುವಕನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದರು. ಮೃತರ ಅಂತ್ಯ ಸಂಸ್ಕಾರಕ್ಕೆ ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ವತಿಯಿಂದ 25 ಸಾವಿರ ರೂ.ಗಳನ್ನು ನೀಡಲಾಯಿತು.

ನಿವೇಶನಕ್ಕೆ ಆಗ್ರಹಿಸಿ ಚೆಟ್ಟಳ್ಳಿಯಲ್ಲಿ ಪ್ರತಿಭಟನೆ



ನಿವೇಶನ ಹೋರಾಟ ಸಮಿತಿ ಚೆಟ್ಟಳ್ಳಿಯಲ್ಲಿ ಪ್ರತಿಭಟನೆ ನಡೆಸಿತು.

ಮಡಿಕೇರಿ,ಸೆ.16– ನಿವೇಶನ ರಹಿತ ಬಡವರು ಹಾಗೂ ಕೂಲಿ ಕಾರ್ಮಿಕರಿಗೆ ನಿವೇಶನ ನೀಡುವಂತೆ ಆಗ್ರಹಿಸಿ ನಿವೇಶನ ಹೋರಾಟ ಸಮಿತಿ ಚೆಟ್ಟಳ್ಳಿಯಲ್ಲಿ ಪ್ರತಿಭಟನೆ ನಡೆಸಿತು. ಚೆಟ್ಟಳ್ಳಿ ಗ್ರಾ.ಪಂ ಎದುರು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿದ ಸಮಿತಿಯ ಪ್ರಮುಖರು ಹಾಗೂ ನಿವೇಶನ ರಹಿತರು ಹೋರಾಟವನ್ನು ತೀವ್ರಗೊಳಿಸುವ ಎಚ್ಚರಿಕೆ ನೀಡಿದರು.

ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಆರ್. ಭರತ್ ಚೆಟ್ಟಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಸ್ವಂತವಾಗಿ ವಾಸಿಸಲು ಮನೆಯಿಲ್ಲದ ಸುಮಾರು 100ಕ್ಕಿಂತಲೂ ಹೆಚ್ಚು ಕುಟುಂಬಗಳು ತೋಟದ ಲೈನ್‌ಮನೆಗಳಲ್ಲಿ, ಅಪಾಯಕಾರಿ ಪ್ರದೇಶಗಳಲ್ಲಿ ಬದುಕು ಸಾಗಿಸುತ್ತಿದ್ದಾರೆ. ಸಂವಿಧಾನದ ಆಶಯಗಳು ಸಮರ್ಪಕವಾಗಿ ಜಾರಿಯಾಗದೆ ಇರುವುದರಿಂದ ಚೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಆದಿವಾಸಿ, ದಲಿತ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಹಾಗೂ ಅನೇಕ ಸಣ್ಣ ಸಮುದಾಯಗಳು ನೈಜ ಸ್ವಾತಂತ್ರ್ಯವನ್ನು ಅನುಭವಿಸಲಾಗದ ಪರಿಸ್ಥಿತಿಯಲ್ಲಿವೆ. ಸರಕಾರಿ ಭೂಮಿ ಒತ್ತುವರಿಯಾಗಿ ಉಳ್ಳವರ ಪಾಲಾಗುತ್ತಿದೆ. ಕಳೆದ ಹತ್ತಾರು ವರ್ಷಗಳಿಂದ ನಿವೇಶನದ ಬೇಡಿಕೆ ಇಟ್ಟು ಗ್ರಾ.ಪಂ ಎದುರು ಹಲವು ಬಾರಿ ಹೋರಾಟ ರೂಪಿಸಿದ್ದರೂ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸ್ಪಂದನೆ ನೀಡದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಆರೋಪಿಸಿದರು.

ಸರಕಾರ ಬಡವರ ಬಗ್ಗೆ ಕಾಳಜಿ ತೋರಿ ಲೈನ್ ಮನೆ, ಬಾಡಿಗೆ ಮನೆ, ಸಂಬಂಧಿಕರ ಆಶ್ರಯದಲ್ಲಿ ಹಾಗೂ ಅಪಾಯಕಾರಿ ಜಾಗದಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ನಿವೇಶನ ನೀಡಿ ಮನೆ ನಿರ್ಮಿಸಿ ಕೊಡಬೇಕು. ಒತ್ತುವರಿ ಮಾಡಿಕೊಂಡಿರುವ ಸರಕಾರಿ ಜಾಗವನ್ನು ತೆರವುಗೊಳಿಸಿ ನಿವೇಶನ ರಹಿತರಿಗೆ ಹಂಚಿಕೆ ಮಾಡಬೇಕು, ಕಸವಿಲೇವಾರಿ ಸಂದರ್ಭ ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು, ಸರಕಾರಿ ಭೂಮಿಯನ್ನು ಉಳ್ಳವರಿಗೆ ಗುತ್ತಿಗೆ ನೀಡುವ ಸರಕಾರಿ ಆದೇಶವನ್ನು ಹಿಂಪಡೆಯಬೇಕು ಎಂದು ಪಿ.ಆರ್.ಭರತ್ ಒತ್ತಾಯಿಸಿದರು.

ಬೇಡಿಕೆಗೆ ಸ್ಪಂದಿಸದೇ ಇದ್ದಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು. ಮನವಿ ಪತ್ರವನ್ನು ಗ್ರಾ.ಪಂ ಅಧ್ಯಕ್ಷರು, ಅಭಿವೃದ್ಧಿ ಅಧಿಕಾರಿಗಳ ಮೂಲಕ ಜಿಲ್ಲಾಧಿಕಾರಿ ಹಾಗೂ ಸರಕಾರಕ್ಕೆ ಸಲ್ಲಿಸಿದರು.

ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್‌ನ ಜಿಲ್ಲಾಧ್ಯಕ್ಷ ರಮೇಶ್ ಮತ್ತು ಇತರರು ಪಾಲ್ಗೊಂಡಿದ್ದರು.

ಸೆ.24ರಂದು ವೈವಿಧ್ಯಮಯ ಕಾಫಿ ತಯಾರಿಕೆ ಸ್ಪರ್ಧೆ



ಮಡಿಕೇರಿ,ಸೆ.16– ಮಡಿಕೇರಿ ದಸರಾ ಸಾಂಸ್ಕೃತಿಕ ಸಮಿತಿ ವತಿಯಿಂದ ಸೆ.24ರಂದು ಬುಧವಾರ ಆಯೋಜಿತ 2ನೇ ವರ್ಷದ ಕಾಫಿ ದಸರಾ ಸಂದರ್ಭ ಕಾಫಿಯಿಂದ ತಯಾರಿಸಲ್ಪಡುವ ವೈವಿಧ್ಯಮಯ ಖಾದ್ಯಗಳ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕುಡೆಕಲ್ ಸಂತೋಷ ಮತ್ತು ಕಾಫಿ ದಸರಾ ಸಮಿತಿ ಸಂಚಾಲಕ ಅನಿಲ್ ಹೆಚ್.ಟಿ. ತಿಳಿಸಿದ್ದಾರೆ.

ಕಾಫಿಯ ಮಹತ್ವ ತಿಳಿಸಲು ಮಾಹಿತಿ ಯುಕ್ತ ಸ್ಪರ್ಧೆಯನ್ನು ಸೆ.24 ರಂದು ಬೆಳಗ್ಗೆ 10 ಗಂಟೆಯಿಂದ 12 ಗಂಟೆಯವರೆಗೆ ಮಡಿಕೇರಿಯ ಗಾಂಧಿ ಮೈದಾನದಲ್ಲಿ ಆಯೋಜಿಸಲಾಗಿದೆ. ಕಾಫಿ ಫ್ಲೇವರ್ ಕೇಕ್ ವಿಭಾಗ, ಕಾಫಿ ಫ್ಲೇವರ್ ಕಪ್ ಕೇಕ್ ವಿಭಾಗ, ಕಾಫಿ ಫ್ಲೇವರ್ ಬ್ರೌನಿ ವಿಭಾಗ, ಕಾಫಿ ಫ್ಲೇವರ್ ಬಿಸ್ಕತ್ ವಿಭಾಗ, ಕಾಫಿ ಫ್ಲೇವರ್ ಪುಡ್ಡಿಂಗ್ ವಿಭಾಗ, ವಿಭಿನ್ನ ರುಚಿಯಿರುವ ಕಾಫಿ ಪಾನೀಯ ವಿಭಾಗ ಮತ್ತು ಕಾಫಿ ಫ್ಲೇವರ್ ಚಾಕಲೇಟ್ ವಿಭಾಗ ಒಳಗೊಂಡಂತೆ 7 ವಿಭಾಗಗಳಲ್ಲಿ ಸ್ಪರ್ಧೆಗಳು ಆಯೋಜಿತವಾಗಿದೆ. ಸೆ.22ರ ಒಳಗಾಗಿ ಸ್ಪರ್ಧಿಗಳು ತಮ್ಮ ಹೆಸರು ನೋಂದಾಯಿಸಲು ಮೇಪಾಡಂಡ ಸವಿತಾ ಕೀರ್ತನ್ 9448309814 ಅವರನ್ನು ಸಂಪರ್ಕಿಸಲು ಸಮಿತಿ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಮನವಿ ಮಾಡಿದೆ.

ಪ್ರಕಾಶ್ ನಿಧನ



ಮಡಿಕೇರಿ,ಸೆ.16– ಮಡಿಕೇರಿ ಜನತಾ ಬಜಾರ್‌ನ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಪಕ್ಷ ಪ್ರಮುಖರಾದ ಕೆದಂಬಾಡಿ ಎಸ್.ಪ್ರಕಾಶ್(76) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೆ.17 ರಂದು ಮಡಿಕೇರಿಯಲ್ಲಿ ನಡೆಯಲಿದೆ.

ನಾರಾಯಣಗುರುಗಳ ಮಾನವೀಯ ಮೌಲ್ಯಗಳು ಇಂದಿಗೂ ಪ್ರಸ್ತುತ

ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಅಭಿಮತ



ಬ್ರಹ್ಮಶ್ರೀ ನಾರಾಯಣಗುರು ಜಯಂತಿ' ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಚಾಮರಾಜನಗರ, ಸೆ.16– ತಳಸಮುದಾಯದ ಜನರನ್ನು ಅಸಮಾನತೆಯಿಂದ ಸಮಾನತೆಯೆಡೆಗೆ ಕೊಂಡೊಯ್ದು ಬ್ರಹ್ಮಶ್ರೀ ನಾರಾಯಣಗುರುಗಳ ಮಾನವೀಯ ಮೌಲ್ಯಾದರ್ಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಾದ ಮಧು ಬಂಗಾರಪ್ಪ ಅವರು ತಿಳಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಬ್ರಹ್ಮಶ್ರೀ ನಾರಾಯಣಗುರು ಜಯಂತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಾತಿಯ ಅಸಮಾನತೆ ತಾಂಡವಾಡುತ್ತಿದ್ದ ಅಂದಿನ ಸಮಾಜದಲ್ಲಿ ತಳಸಮುದಾಯಕ್ಕೆ ಸಮಾನತೆ ಹಾದಿ ತೋರಿದವರು ನಾರಾಯಣಗುರುಗಳು. ನಾರಾಯಣರ ತತ್ವಸಿದ್ಧಾಂತ, ಮಾನವೀಯ ಮೌಲ್ಯಗಳಿಂದ ಪ್ರೇರಿತರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾರಾಯಣ ಗುರುಗಳ ಜಯಂತಿ ಕಾರ್ಯಕ್ರಮವನ್ನು ರಾಜ್ಯಮಟ್ಟದಲ್ಲಿ ಆಚರಿಸಲು ಅನುವು ಮಾಡಿಕೊಟ್ಟಿದ್ದಾರೆ. ರಾಜ್ಯಸರ್ಕಾರವು ಎಲ್ಲಾ ಸಮುದಾಯಗಳ ದನಿಯಾಗಿದೆ. ಸರ್ಕಾರವು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಕನ್ನಡ ಶಾಲೆಗಳನ್ನು ಉಳಿಸಲು ಅನುದಾನಿತ ಶಿಕ್ಷಣ ಸಂಸ್ಥೆಗಳನ್ನಾಗಿ ಪರಿವರ್ತಿಸಲಾಗುವುದು ಎಂದು ತಿಳಿಸಿದರು.

ನಾರಾಯಣಗುರುಗಳ ವಿಚಾರಧಾರೆಗಳನ್ನು ಶಾಲಾಮಕ್ಕಳ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದೆ. ಪ್ರಸ್ತುತ ಯಾವುದೇ ಸಮುದಾಯದ ಅಭಿವೃದ್ಧಿಗೆ ಶಿಕ್ಷಣವೇ ಶಕ್ತಿಯಾಗಿರುವುದರಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಮುಂದಾಗಬೇಕಿದೆ. ಪಕ್ಕದ ಕೇರಳ ರಾಜ್ಯವು ಸಾಕ್ಷರತೆಯಲ್ಲಿ ಶೇ. 99ರಷ್ಟು ಪ್ರಗತಿ ಸಾಧಿಸಲು ನಾರಾಯಣಗುರುಗಳ ಮಾದರಿ ಪರಿಶ್ರಮವೇ ಕಾರಣವಾಗಿದೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿರುವಂತೆ ದೇವಸ್ಥಾನಗಳ ಗಂಟೆ ಸದ್ದಿಗಿಂತ ಶಾಲೆಗಳಲ್ಲಿ ಗಂಟೆ ಸದ್ದು ಕೇಳಬೇಕು. ಶಾಲೆಗಳು, ಗ್ರಂಥಾಲಯಗಳು ಹೆಚ್ಚಾಗಬೇಕು. ಮಕ್ಕಳು, ಜನರು, ಸಮುದಾಯ ಸುಶಿಕ್ಷಿತರಾಗಬೇಕು ಎಂದು ಸಚಿವರಾದ ಮಧು ಬಂಗಾರಪ್ಪ ಅವರು ಸಲಹೆ ಮಾಡಿದರು.

ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ ಮಾತನಾಡಿದರು.

ಸಾಹಿತಿಗಳಾದ ಸೋಮಶೇಖರ ಬಿಸಲ್ವಾಡಿ ಮುಖ್ಯಭಾಷಣ ಮಾಡಿದರು.

ಶಿವಮೊಗ್ಗ ತೀರ್ಥಹಳ್ಳಿ ತಾಲೂಕು ಗರ್ತಿಕೆರೆಯ ನಿಟ್ಟೂರಿನ ನಾರಾಯಣ ಗುರು ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ರೇಣುಕಾನಂದ ಸ್ವಾಮೀಜಿ ಅವರು ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಚುಡಾ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ನಗರಸಭೆಯ ಅಧ್ಯಕ್ಷರಾದ ಸುರೇಶ್, ಉಪಾಧ್ಯಕ್ಷರಾದ ಮಮತ, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ರಾಜು, ಸಮುದಾಯದ ಮುಖಂಡರಾದ ಚಿನ್ನೇಗೌಡ, ಪೋತರಾಜು, ಸಮಾಜದ ಜಿಲ್ಲಾ ಹಾಗೂ ತಾಲೂಕು ಅಧ್ಯಕ್ಷರು, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಪ್ರವಾಸಿಮಂದಿರದಿಂದ ಜಿಲ್ಲಾಡಳಿತ ಭವನದವರೆಗೆ ಬ್ರಹ್ಮಶ್ರೀ ನಾರಾಯಣ ಗುರುಗಳ ಭಾವಚಿತ್ರ ಮೆರವಣಿಗೆ ನಡೆಯಿತು.

ಶೀಘ್ರದಲ್ಲೇ 18,500 ಶಿಕ್ಷಕರ ನೇಮಕಕ್ಕೆ ಕ್ರಮ

ಚಾಮರಾಜನಗರ: ರಾಜ್ಯದಲ್ಲಿ ಮತ್ತೆ 18,500 ಶಿಕ್ಷಕರ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸರ್ಕಾರಿ ಹಾಗೂ ಅನುದಾನಿತ ಎರಡು ಶಾಲೆಗಳನ್ನು ಸೇರಿ ಶೀಘ್ರದಲ್ಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಮಾಹಿತಿ ನೀಡಿದರು.

ಹಿಂದಿನ ಬಿಜೆಪಿ ಸರ್ಕಾರ ಕೇವಲ 5428 ಶಿಕ್ಷಕರ ನೇಮಕ ಮಾಡಿಕೊಂಡಿತ್ತು. ಆದರೆ, ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 13,500 ಶಿಕ್ಷಕರ ನೇಮಕ ಮಾಡಿದ್ದೇವೆ. ಈಗ ಮತ್ತೆ 18,500 ಶಿಕ್ಷಕರ ನೇಮಕಾತಿಗೆ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದರು.

800 ಕರ್ನಾಟಕ ಪಬ್ಲಿಕ್ ಶಾಲೆ ಆರಂಭ: ಹೊಸದಾಗಿ 800 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ ಎಂದು ಅವರು ಇದೇ ವೇಳೆ ತಿಳಿಸಿದರು.


ರಾಜ್ಯದಲ್ಲಿರುವ ಶಾಲಾ ಕೊಠಡಿಗಳ ಶಿಥಿಲಾವಸ್ಥೆ ವಿಚಾರವಾಗಿ ಮಾತನಾಡಿ, ಇದು ಕಳೆದ ಎರಡು ವರ್ಷದಿಂದ ಸೃಷ್ಟಿಯಾಗಿರುವ ಸಮಸ್ಯೆಯಲ್ಲ. ರಾಜ್ಯದಲ್ಲಿ 46 ಸಾವಿರ ಶಾಲೆಗಳಿದ್ದು, ಕೊಠಡಿಗಳು ಶಿಥಿಲಾವಸ್ಥೆಯಾಗಿರುವುದು ನಿಜ. ಹಿಂದೆ ಇದ್ದ ಸರ್ಕಾರ ಕೊಠಡಿ ಕಟ್ಟಿಲ್ಲ, ನೇಮಕಾತಿ ಕೂಡ ಮಾಡಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ ವಿವೇಕ ಯೋಜನೆಯಡಿ 8,200 ಕೊಠಡಿ ಪೂರ್ಣ ಮಾಡಿದ್ದೇವೆ. ಮತ್ತೆ 3000 ಸಾವಿರ ಕೊಠಡಿ ನಿರ್ಮಾಣಕ್ಕೆ ತೀರ್ಮಾನ ಮಾಡಿದ್ದೇವೆ. ಶೀಘ್ರದಲ್ಲೇ ಕಾಮಗಾರಿ ಪ್ರಾರಂಭ ಮಾಡುತ್ತೇವೆ ಎಂದರು.

ಕನ್ನಡ ಶಾಲೆ ಉಳಿಸೋದು ನಮ್ಮ ಕೆಲಸ: ರಾಜ್ಯದಲ್ಲಿ ಕನ್ನಡ ಶಾಲೆಗಳನ್ನು ಉಳಿಸುವುದು ನಮ್ಮ ಕೆಲಸವಾಗಿದೆ. ಬಂಗಾರಪ್ಪ ಅವರು ಇದ್ದಾಗ ಕನ್ನಡ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿದ್ದರು. ಗಡಿ ಭಾಗದಿಂದ ಹಿಡಿದು ರಾಜ್ಯಾದ್ಯಂತ ಕನ್ನಡ ಶಾಲೆಗಳನ್ನು ಉಳಿಸುವ ಕೆಲಸ ಮಾಡುತ್ತಿದ್ದೇವೆ ಎಂದರು.

ನಾವು ಕೇವಲ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭಿಸಿಲ್ಲ. ಕನ್ನಡ ಮತ್ತು ಇಂಗ್ಲೀಷ್ ಎರಡೂ ಮಾಧ್ಯಮಗಳನ್ನು ಆರಂಭಿಸಿದ್ದೇವೆ. ಪಠ್ಯಪುಸ್ತಕ ಕನ್ನಡ, ಇಂಗ್ಲಿಷ್ ಎರಡರಲ್ಲೂ ಮುದ್ರಣವಾಗಬೇಕು. ಎಲ್ಲರೂ ಕಲಿಯಬೇಕು ಇದು ಸರ್ಕಾರದ ಉದ್ದೇಶವಾಗಿದೆ ಎಂದು.

ವಿದ್ಯಾರ್ಥಿಗೆ ಮನ ಬಂದಂತೆ ಥಳಿಸಿದ ಶಿಕ್ಷಕಿ

ಮೂರ್ಛೆ ತಪ್ಪಿ ಆಸ್ಪತ್ರೆ ಸೇರಿದ ಬಾಲಕ



ಶಿಕ್ಷಕಿ ಥಳಿಸಿದ ಪರಿಣಾಮ ಬಾಸುಂಡೆಯಿಂದ ಗಾಯಗೊಂಡಿರುವ ಬಾಲಕ

ಯಳಂದೂರು, ಸೆ.16– ಶಿಕ್ಷಕಿಯೊಬ್ಬರು ವಿದ್ಯಾರ್ಥಿಗೆ ಮನ ಬಂದಂತೆ ಥಳಿಸಿದ ಪರಿಣಾಮ ಮೈಯೆಲ್ಲಾ ಬಾಸುಂಡೆ ಬಂದು ಪ್ರಜ್ಞೆ ತಪ್ಪಿಬಿದ್ದು ಆಸ್ಪತ್ರೆಗೆ ದಾಖಲಾಗಿದ್ದಾನೆ. ಈ ಘಟನೆ ಇಂದು ಪಟ್ಟಣದಲ್ಲಿ ಸಂಭವಿಸಿದ್ದು, ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪಟ್ಟಣದ ಚಾಮಲಾಪುರದ ನಿವಾಸಿಯ ಪುತ್ರ 10 ವರ್ಷದ ಬಾಲಕ ಅಸ್ವಸ್ಥಗೊಂಡಿದ್ದು, ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಪಟ್ಟಣದ ಕೆ.ಕೆ.ರಸ್ತೆಯಲ್ಲಿರುವ ಎಸ್‌ಡಿವಿಎಸ್ ವಿದ್ಯಾಸಂಸ್ಥೆಯಲ್ಲಿ 5ನೇ ತರಗತಿ ಓದುತ್ತಿರುವ ಬಾಲಕ ತೀವ್ರವಾಗಿ ಗಾಯಗೊಂಡಿದ್ದಾನೆ. ಇಂದು ತರಗತಿಯಲ್ಲಿ ಪಾಠ ಮಾಡುತ್ತಿದ್ದ ಉಮ್ಮತ್ತೂರಿನ ಶಿಕ್ಷಕಿ ಭಾನುಮತಿ ಅವರು ಬೋರ್ಡ್ ಮೇಲೆ ನೋಟ್ಸ್ ಬರೆದಿದ್ದು, ಅದನ್ನು ಬರೆದುಕೊಳ್ಳುವಂತೆ ಎಲ್ಲರಿಗೂ ಹೇಳಿದ್ದರು. ಈ ವೇಳೆ ಗುರುಪ್ರಸಾದ್ ಮೂತ್ರ ವಿಸರ್ಜನೆಗೆ ಹೋಗಬೇಕು ಎಂದು ಕೇಳಿದನಂತೆ. ಆಗ ಶಿಕ್ಷಕಿ ಭಾನುಮತಿ ನಾನು ಕೊಟ್ಟಿರುವ ಬರೆಯುವ ಕೆಲಸ ಮುಗಿಸಿ ಆಮೇಲೆ ಹೋಗು ಎಂದಿದ್ದರೆನ್ನಲಾಗಿದೆ.

ಆದರೂ ಬಾಲಕ ಪದೇ ಪದೆ ಮೂತ್ರ ವಿಸರ್ಜನೆಗೆಂದು ಕೇಳಿದಾಗ, ಶಿಕ್ಷಕಿ ನೀನೇನು ಬರೆದಿರುವೆ ತೋರಿಸು ಎಂದು ಕೇಳಿದ್ದಾರೆ. ಆದರೆ ವಿದ್ಯಾರ್ಥಿ ನೋಟ್ ಬುಕ್‌ನಲ್ಲಿ ಏನನ್ನೂ ಬರೆದಿರಲಿಲ್ಲ. ಯಾಕೆ ಏನೂ ಬರೆದಿಲ್ಲ ಎಂದು ಕೇಳಿ, ಕುಪಿತಗೊಂಡ ಶಿಕ್ಷಕಿ, ಕೋಲಿನಿಂದ ಮನ ಬಂದಂತೆ ಥಳಿಸಿದ್ದರಿಂದ ವಿದ್ಯಾರ್ಥಿ ವಿಲವಿಲ ಒದ್ದಾಡಿ ಪ್ರಜ್ಞೆ ತಪ್ಪಿ ಬಿದ್ದನೆನ್ನಲಾಗಿದೆ.

ಶಿಕ್ಷಕಿ ವಿದ್ಯಾರ್ಥಿಗೆ ಥಳಿಸಿದ ಪರಿಣಾಮ ಪ್ರಜ್ಞೆ ತಪ್ಪಿ ಬಿದ್ದ ವಿಷಯ ತಿಳಿದ ಮುಖ್ಯ ಶಿಕ್ಷಕರು ಮತ್ತು ಶಾಲೆಯ ಇತರ ಶಿಕ್ಷಕರು, ವಿದ್ಯಾರ್ಥಿ ಮುಖಕ್ಕೆ ನೀರು ಚಿಮುಕಿಸಿ ಎಚ್ಚರಗೊಳಿಸಿ ಸಮಾಧಾನಪಡಿಸಿ ನಂತರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿದ್ದಾರೆ. ಮನೆಗೆ ಬಂದ ಬಾಲಕ ಮಂಕಾಗಿ ಮಲಗಿರುವುದನ್ನು ಮನೆಯವರು ಪ್ರಶ್ನಿಸಿದಾಗ, ಶಿಕ್ಷಕಿ ಥಳಿಸಿದ ವಿಚಾರ ಬಯಲಿಗೆ ಬಂದಿದೆ.

ಮನೆಯವರು ಹುಡುಗನ ಬಟ್ಟೆ ಬಿಚ್ಚಿಸಿ ನೋಡಿದಾಗ ತೊಡೆ ಹಾಗೂ ಮೈಯೆಲ್ಲಾ ಬಾಸುಂಡೆ ಗುರುತುಗಳಿದ್ದು, ತಕ್ಷಣ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಿದ್ದಾರೆ. ಜೊತೆಗೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ರೈತರ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ಪ್ರತಿಭಟನೆ



ಗುಂಡ್ಲುಪೇಟೆ ಪಟ್ಟಣದ ತಾಲೂಕು ಕಚೇರಿ ಎದುರು ಸಾಮೂಹಿಕ ನಾಯಕತ್ವದ ರೈತ ಸಂಘಟನೆಯ ವತಿಯಿಂದ ಪ್ರತಿಭಟನೆ ನಡೆಸಿದರು.

ಗುಂಡ್ಲುಪೇಟೆ, ಸೆ.16– ರೈತರ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ದೊರಕಿಸುವಂತೆ ಒತ್ತಾಯಿಸಿ ಸಾಮೂಹಿಕ ನಾಯಕತ್ವದ ರೈತ ಸಂಘಟನೆ ವತಿಯಿಂದ ಮಂಗಳವಾರ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಸಾಮೂಹಿಕ ನಾಯಕತ್ವದ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ಮೈಸೂರು ರಸ್ತೆಯಿಂದ ಟ್ರ್ಯಾಕ್ಟರ್ ಹಾಗೂ ಬೈಕ್ ರ್‍ಯಾಲಿ ಮೂಲಕ ಆಗಮಿಸಿದ ರೈತ ಕಾರ್ಯಕರ್ತರು ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಹೊನ್ನೂರು ಪ್ರಕಾಶ್ ಮಾತನಾಡಿ, ಪ್ರತಿ ವರ್ಷ ಕಾವೇರಿ ಕೊಳ್ಳದಿಂದ 70 ರಿಂದ 80 ಟಿಎಂಸಿ ನೀರು ಸಮುದ್ರಕ್ಕೆ ಸೇರುತ್ತಿದ್ದರೂ ಈ ನೀರನ್ನು ಸದ್ಬಳಕೆ ಮಾಡಿಕೊಳ್ಳಲು ಯೋಜನೆ ರೂಪಿಸಿಲ್ಲ. ಕಟಾವು ಮುಗಿದರೂ ಸೂರ್ಯಕಾಂತಿ ಖರೀದಿ ಕೇಂದ್ರ ತೆರೆದಿಲ್ಲ. ಗ್ರಾಮೀಣ ರಸ್ತೆಗಳು ಹಾಳಾಗಿದ್ದು ಸಂಚಾರಕ್ಕೆ ತೊಂದರೆಯಾಗುತ್ತಿದ್ದರೂ ಅದನ್ನು ರಿಪೇರಿ ಮಾಡಿಸುತ್ತಿಲ್ಲ. ಕಾಡಂಚಿನ ಗ್ರಾಮಗಳಲ್ಲಿ ಪ್ರತಿ ದಿನವೂ ಒಂದಲ್ಲಾ ಒಂದು ಕಡೆ ವನ್ಯಜೀವಿಗಳಿಂದ ತೊಂದರೆಗಳಾಗುತ್ತಿದೆ. ಆದರೆ ಅರಣ್ಯ ಇಲಾಖೆ ಕಾಡಂಚಿನ ರೈತರ ಸಮಸ್ಯೆಗಳಿಗೆ ಪರಿಹಾರ ಕೊಡುವ ಬದಲು ಜನರನ್ನು ಬೆದರಿಸುವ ಕೆಲಸಮಾಡುತ್ತಿದೆ. ಬೊಮ್ಮಲಾಪುರ ಗ್ರಾಮದಲ್ಲಿ ಹಲವಾರು ತಿಂಗಳಿನಿಂದ ಹುಲಿ ಕಾಣಿಸಿಕೊಳ್ಳುತ್ತಿದ್ದರೂ ಅರಣ್ಯ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದರು.

ಈ ಬಗ್ಗೆ ಪ್ರಶ್ನಿಸಿದ ರೈತರ ವಿರುದ್ದ ಸುಳ್ಳು ದೂರು ನೀಡಿ ಪ್ರಕರಣ ದಾಖಲಿಸಿದ್ದಾರೆ. ಕ್ಷೇತ್ರದ ಶಾಸಕರು ಅಧಿಕಾರಿಗಳ ಮೇಲೆ ನಿಯಂತ್ರಣ ಕಳೆದುಕೊಂಡಿದ್ದಾರೆ. ಇದರಿಂದ ಅಧಿಕಾರಿಗಳು ಯಾವುದೇ ಕೆಲಸಗಳನ್ನು ಮಾಡದೆ ಸಾರ್ವಜನಿಕರ ಮೇಲೆ ದರ್ಪ ತೋರಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿಗಳಲ್ಲಿ ಭ್ರಷ್ಟಾಚಾರ ಮಿತಿಮೀರಿಹೋಗಿದ್ದು ಲಂಚಕೊಡದೆ ಸಾರ್ವಜನಿಕರ ಯಾವುದೇ ಕೆಲಸಕಾರ್ಯಗಳೂ ಆಗುತ್ತಿಲ್ಲ, ಶಿವಪುರ ಗ್ರಾಮಪಂಚಾಯಿತಿ ಎದುರು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಅಧಿಕಾರಿಗಳು ತಾವು ಲಂಚ ಪಡೆದಿದ್ದ ಹಣವನ್ನು ವಾಪಸ್ ಮಾಡಿದ್ದರೂ ಅವರ ವಿರುದ್ದ ಕ್ರಮಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಎಂ.ಎಸ್.ತನ್ಮಯ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾ ಧಿಕಾರಿ ಷಣ್ಮುಗ, ತಾಲೂಕು ಆರೋಗ್ಯಾಧಿಕಾರಿ ಡಾ. ಅಲೀಂ ಪಾಷಾ, ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಮಾದೇಶ್, ಸೆಸ್ಕ್ ಎಇಇ ಕೆ.ಎಂ. ಸಿದ್ದಲಿಂಗಪ್ಪ, ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಎಪಿಎಂಸಿ ಕಾರ್ಯದರ್ಶಿ ಶ್ರೀಧರ್ ಹಾಗೂ ಇತರ ಇಲಾಖೆಗಳ ಅಧಿಕಾರಿಗಳಿಗೆ ಆಯಾ ಇಲಾಖೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಪಟ್ಟಿ ನೀಡಿದರು. ಮುಂದಿನ ಒಂದು ತಿಂಗಳ ಒಳಗಾಗಿ ಸಂಬಂಧಿಸಿದ ಇಲಾಖೆಗಳು ತಮಗೆ ಬಂದಿರುವ ದೂರುಗಳ ಬಗ್ಗೆ ಕ್ರಮಕೈ ಗೊಳ್ಳಬೇಕು. ಇಲ್ಲದಿದ್ದರೆ ಉಗ್ರಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ನಾನಾ ಗ್ರಾಮ ಘಟಕಗಳ ಪದಾಧಿಕಾರಿಗಳು ಹಾಗೂ ಮಹಿಳಾ ಸಂಘಟನೆಗಳ ಸದಸ್ಯರು ಇದ್ದರು.

ಮೈಸೂರು ಮಿತ್ರ

ದಸರಾ ಫಲಪುಷ್ಪ ಪ್ರದರ್ಶನ: ಗಾಜಿನ ಮನೆಯಲ್ಲಿ ಹೂವಲ್ಲಿ ಮೂಡಲಿದೆ 'ಕನ್ಯಾಕುಮಾರಿ ಗಾಂಧಿ ಮಂಟಪ'

● ದಂಡಿ ಮಾರ್ಚ್, ಚರಕ ಸುತ್ತುವ ಮಹಾತ್ಮಗಾಂಧಿ ಆಕೃತಿ, ಗಾಂಧಿ ತತ್ವಗಳ ಪ್ರದರ್ಶನ ● ಫಲಪುಷ್ಪ ಪ್ರದರ್ಶನದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಕೊಕ್ ● ಫುಡ್‌ಕೋರ್ಟ್‌ನಲ್ಲಿ 30 ಮಳಿಗೆ



ಕುಪ್ಪಣ್ಣ ಪಾರ್ಕ್‌ನಲ್ಲಿರುವ ಗಾಜಿನ ಮನೆಯಲ್ಲಿ ಗಾಂಧಿ ಮಂಟಪದ ಆಕೃತಿ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಸುರಕ್ಷತೆಗಾಗಿ ಅಮ್ಯೂಸ್‌ಮೆಂಟ್ ರದ್ದು

ನವರಾತ್ರಿ ವೇಳೆ ಫಲಪುಷ್ಪ ಪ್ರದರ್ಶನಕ್ಕೆ ಪ್ರವಾಸಿಗರು ಕಿಕ್ಕಿರಿದು ಸೇರಲಿದ್ದು, ಸುರಕ್ಷತೆಯ ದೃಷ್ಟಿಯಿಂದ ಈ ಬಾರಿ ಕುಪ್ಪಣ್ಣ ಪಾರ್ಕ್‌ನಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಅವಕಾಶ ನೀಡಿಲ್ಲ.



ಗಾಂಧಿ ಮಂಟಪದ ನೀಲನಕ್ಷೆ

ಗಾಂಧಿ ತತ್ವ ಪ್ರತಿಪಾದನೆ

ಜಂಬೂಸವಾರಿ ದಿನವೇ ಮಹಾತ್ಮಗಾಂಧೀಜಿ ಜಯಂತಿಯೂ ಆಗಿದೆ. ಈ ಹಿನ್ನೆಲೆಯಲ್ಲಿ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಅವರ ತತ್ವ ಪ್ರತಿಪಾದನೆಗೆ ಕ್ರಮ ಕೈಗೊಳ್ಳಲಾಗಿದೆ. ಗಾಜಿನ ಮನೆಯಲ್ಲಿ ಕನ್ಯಾಕುಮಾರಿಯಲ್ಲಿರುವ ಗಾಂಧಿ ಮಂಟಪ, ದಂಡಿ ಮಾರ್ಚ್, ಚರಕದಲ್ಲಿ ನೂಲು ತೆಗೆಯುತ್ತಿರುವ ಮಹಾತ್ಮ ಗಾಂಧೀಜಿ ಆಕೃತಿಗಳನ್ನು ನಿರ್ಮಿಸಲಾಗುತ್ತಿದೆ.

- **ಮಂಜುನಾಥ್ ಅಂಗಡಿ,** ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ

ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ

ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯಲಿರುವ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸೆ.22ರಿಂದ ಅ.2ರವರೆಗೆ ಪ್ರತಿದಿನ ಬೆಳಗ್ಗೆ 9ರಿಂದ ರಾತ್ರಿ 9.30ರವರೆಗೆ ಫಲಪುಷ್ಪ ಪ್ರದರ್ಶನ ವೀಕ್ಷಿಸಬಹುದಾಗಿದೆ. ವಯಸ್ಕರಿಗೆ 50 ರೂ. ಮಕ್ಕಳಿಗೆ 25 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಅಗತ್ಯ ಭದ್ರತೆ ಒದಗಿಸಲಾಗಿದೆ. ಸ್ಥಳದಲ್ಲಿ ಒಂದು ಆಂಬುಲೆನ್ಸ್, ಆರೋಗ್ಯ ಸಿಬ್ಬಂದಿ, ವ್ಹೀಲ್‌ಚೇರ್ ಸೇರಿದಂತೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ.

- **ಹಜೀಬಾ ನಿಶಾತ್,** ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು

ಫಲಪುಷ್ಪ ಪ್ರದರ್ಶನಕ್ಕೆ 1.31 ಕೋಟಿ ರೂ. ಟೆಂಡರ್

ಇ-ಪ್ರಕ್ಯೂರ್‌ಮೆಂಟ್ ಮೂಲಕ ಫಲಪುಷ್ಪ ಪ್ರದರ್ಶನ ಪ್ರವೇಶ ಶುಲ್ಕ ಸಂಗ್ರಹಿಸುವ ಟೆಂಡರ್ 1.31 ಕೋಟಿ ರೂಗೆ ಆಲೀಫ್ ಟ್ರೇಡರ್ಸ್ ಸಂಸ್ಥೆ ಪಡೆದಿದೆ ಆಹಾರ ಮಳಿಗೆಯ ಟೆಂಡರ್ 41.30 ಲಕ್ಷ ರೂಗಳಿಗೆ ಸಂಸ್ಥೆಯೊಂದು ಪಡೆದಿದೆ.

ಮೈಸೂರು, ಸೆ.16(ಎಂಟಿವೈ)- ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿರುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಲಕ್ಷಾಂತರ ಹೂವುಗಳಿಂದ 'ಕನ್ಯಾಕುಮಾರಿಯ ಗಾಂಧಿಮಂಟಪ'ದ ಆಕೃತಿ ತಲೆ ಎತ್ತಲಿದ್ದು, ದಂಡಿ ಮಾರ್ಚ್ ಸೇರಿದಂತೆ ಮಹಾತ್ಮಗಾಂಧೀಜಿ ತತ್ವ ಸಿದ್ಧಾಂತಗಳ ಸಂದೇಶ ಅನಾವರಣಗೊಳ್ಳಲಿದೆ.

ಮೈಸೂರಿನ ಜಯಚಾಮರಾಜ ಒಡೆಯರ್ (ಹಾರ್ಡಿಂಗ್) ವೃತ್ತದ ಬಳಿಯ ಕುಪ್ಪಣ್ಣ ಪಾರ್ಕ್‌ನಲ್ಲಿ ಸೆ.22ರಿಂದ ಅ.2ರವರೆಗೆ ತೋಟಗಾರಿಕಾ ಇಲಾಖೆ ಹಾಗೂ ಜಿಲ್ಲಾ ತೋಟಗಾರಿಕಾ ಸಂಘದ ಆಶ್ರಯದಲ್ಲಿ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದ್ದು, ಈಗಾಗಲೇ ತೋಟಗಾರಿಕಾ ಇಲಾಖೆಗೆ ಸೇರಿದ ವಿವಿಧ ಸಸ್ಯಕ್ಷೇತ್ರದ 80 ಸಾವಿರಕ್ಕೂ ಹೆಚ್ಚು ಪಾಟ್‌ಗಳಲ್ಲಿ 45ಕ್ಕೂ ಹೆಚ್ಚು ಬಗೆಯ ಹೂವಿನ ಗಿಡಗಳನ್ನು ಬೆಳೆಸಲಾಗಿದೆ. ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರ ಜನ್ಮ ದಿನದಂದೇ ಈ ಬಾರಿ ಜಂಬೂಸವಾರಿ ನೆರವೇರುತ್ತಿರುವುದರಿಂದ ಫಲಪುಷ್ಪ ಮೇಳದಲ್ಲಿ ಗಾಂಧಿ ತತ್ವ ಮೇಳೈಸಲಿದೆ.

ಗಾಜಿನ ಮನೆಯೊಳಗೆ ಗಾಂಧಿ ಮಂಟಪ: ಈ ಬಾರಿಯ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಮಹಾತ್ಮ ಗಾಂಧೀಜಿ ಅವರ ತತ್ವ ಸಂದೇಶಕ್ಕೆ ಮನ್ನಣೆ ನೀಡಲಾಗಿದ್ದು, ಅದಕ್ಕಾಗಿ ಕುಪ್ಪಣ್ಣ ಪಾರ್ಕ್‌ನಲ್ಲಿರುವ ಗಾಜಿನ ಮನೆಯಲ್ಲೆ ಗಾಂಧಿ ಮಂಟಪ ನಿರ್ಮಿಸಲು ಉದ್ದೇಶಿಸಲಾಗಿದೆ. ಕನ್ಯಾಕುಮಾರಿಯಲ್ಲಿರುವ ಗಾಂಧಿ ಮಂಟಪದ ಆಕೃತಿ 4 ಲಕ್ಷ ಹೂವಿನಿಂದ ತಲೆ ಎತ್ತಲಿದೆ. ಅದರ ಹಿನ್ನೆಲೆಯಲ್ಲಿ ದಂಡಿ ಮಾರ್ಚ್ ಮೂಡಿಬರಲಿದೆ. ಅಲ್ಲದೆ ಮುಂಭಾಗದಲ್ಲಿ ಚರಕದಿಂದ ನೂಲು ತೆಗೆಯುತ್ತಿರುವ ಮಹಾತ್ಮಗಾಂಧೀಜಿ ಅವರ ಆಕೃತಿಯೂ ನೋಡುಗರ ಕಣ್ಮನ ಸೆಳೆಯುತ್ತದೆ. ಸುತ್ತಲೂ ಗಾಂಧೀಜಿ ಅವರ ತತ್ವ ಸಂದೇಶವುಳ್ಳ ಫಲಕಗಳನ್ನು ಪ್ರದರ್ಶಿಸಲಾಗುತ್ತದೆ. ಗಾಂಧಿ ಮಂಟಪಕ್ಕೆ ಮೆರುಗು ನೀಡಲು ಕಟ್ ಫ್ಲವರ್‌ನಲ್ಲಿ ಲ್ಯಾಂಡ್‌ಸ್ಕೇಪಿಂಗ್ ಮಾಡಿ, ವಿವಿಧ ಬಗೆಯ 4 ಸಾವಿರ ಹೂವಿನ ಫ್ಲೋರಲ್ ಅರೇಂಜ್‌ಮೆಂಟ್ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಕುಪ್ಪಣ್ಣ ಪಾರ್ಕ್‌ನಲ್ಲೂ ವಿವಿಧ ಆಕೃತಿ: ಗಾಜಿನ ಮನೆಯಲ್ಲಿನ ಗಾಂಧಿಮಂಟಪ ಮನಸೂರೆಗೊಂಡರೆ ಫಲಪುಷ್ಪ ಪ್ರದರ್ಶನದ ಅಂಗವಾಗಿ ಕುಪ್ಪಣ್ಣ ಪಾರ್ಕ್‌ನಲ್ಲಿ ವಿವಿಧ ಆಕೃತಿಗಳು ಫಲಪುಷ್ಪ ಪ್ರದರ್ಶನಕ್ಕೆ ಮೆರುಗು ನೀಡಲಿವೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಐದು ಗ್ಯಾರಂಟಿ ಯೋಜನೆಯ ಸಂದೇಶ ಸಾರುವ ಆಕೃತಿ, ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರ್‌ನಲ್ಲಿ ಭೂ ಸೇನೆ, ವಾಯುಸೇನೆ, ನೌಕಾದಳದ ಅಧಿಕಾರಿಗಳ ಆಕೃತಿ, ಅದರ ಮುಂದೆ ಆರ್ಮಿ ಟ್ರಕ್, ಯುದ್ಧ ನೌಕೆ, ಜೆಟ್ ಆಕೃತಿಗಳು ಮೂಡಿಬರಲಿವೆ. ಇದರೊಂದಿಗೆ ಸೇವ್ ಅರ್ಥ್, ಆರ್ಮಿ ಟ್ರಕ್, ನವದುರ್ಗೆ ಪರಿಕಲ್ಪನೆಯಲ್ಲಿ ಆಕೃತಿ, ಅರಮನೆ ಮಂಡಳಿ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ 137ನೇ ವರ್ಷದ ಅಂಗವಾಗಿ ಸಿರಿಧಾನ್ಯಗಳಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಚಿತ್ರ, ಅಂಬಾರಿ ಹೊತ್ತ ಅರ್ಜುನನ ಆಕೃತಿ, ಸೆಲ್ಫಿ ಪಾಯಿಂಟ್ ಹಾಗೂ ಇನ್ನಿತರ ಆಕೃತಿಗಳು ಸಸ್ಯಲೋಕದಲ್ಲಿ ಪ್ರವಾಸಿಗರಿಗೆ ಮುದ ನೀಡಲಿದೆ.

ಕಿಡ್ಸ್ ಪಾರ್ಕ್: ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಪ್ರವಾಸಿಗರೊಂದಿಗೆ ಬರುವ ಚಿಕ್ಕ ಮಕ್ಕಳ ಮನರಂಜನೆಗೆ ಕುಪ್ಪಣ್ಣ ಪಾರ್ಕ್‌ನಲ್ಲಿ ಈ ಬಾರಿ ಕಿಡ್ಸ್ ಪಾರ್ಕ್ ನಿರ್ಮಿಸಿ, ಅದರಲ್ಲಿ ಕಾರ್ಟೂನ್ ಮಾದರಿಯ ಆಕೃತಿ ಇಡಲು ಉದ್ದೇಶಿಸಲಾಗಿದೆ.

ವಿದ್ಯಾರ್ಥಿಗಳಿಗೆ ಮಧ್ಯಾಹ್ನದವರೆಗೆ ಉಚಿತ ಪ್ರವೇಶ: ದಸರಾ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಶಾಲಾ ಸಮವಸ್ತ್ರದೊಂದಿಗೆ ಬರುವ ಶಾಲಾ ವಿದ್ಯಾರ್ಥಿಗಳಿಗೆ ಪ್ರತಿದಿನ ಮಧ್ಯಾಹ್ನ 12 ಗಂಟೆವರೆಗೂ ಉಚಿತ ಪ್ರವೇಶ ನೀಡಲಾಗುತ್ತದೆ. 12 ಗಂಟೆ ನಂತರ ಬಂದ ವಿದ್ಯಾರ್ಥಿಗಳು ಟಿಕೆಟ್ ಪಡೆದು ಫಲಪುಷ್ಪ ಪ್ರದರ್ಶನ ವೀಕ್ಷಿಸಬಹುದಾಗಿದೆ.

ಫುಡ್ ಕೋರ್ಟ್: ಕುಪ್ಪಣ್ಣ ಪಾರ್ಕ್‌ನಲ್ಲಿ ಈ ಬಾರಿ ಫಲಪುಷ್ಪ ಪ್ರದರ್ಶನದಲ್ಲಿ 22,500 ಚದರ ಅಡಿ ಸ್ಥಳದಲ್ಲಿ ಫುಡ್ ಕೋರ್ಟ್ ನಿರ್ಮಿಸಲಾಗುತ್ತಿದೆ. 30 ಆಹಾರ ಮಳಿಗೆಗಳು ಫಲಪುಷ್ಪ ಪ್ರದರ್ಶನದಲ್ಲಿ ತಲೆ ಎತ್ತಲಿದ್ದು, ರುಚಿಕರವಾದ ತಿಂಡಿ-ತಿನಿಸು, ಪಾನೀಯ ಸವಿಯುವ ಅವಕಾಶವಿದೆ. ಮಳಿಗೆ ಮಾಲೀಕರಿಗೆ ಸ್ವಚ್ಛತೆ, ಶುಚಿತ್ವ ಕಾಪಾಡಿಕೊಳ್ಳುವಂತೆ ಷರತ್ತು ವಿಧಿಸಲಾಗಿದೆ.

ಎಸ್‌ಬಿಐ ಸಿಬ್ಬಂದಿಗೆ ಗನ್ ತೋರಿಸಿ 8 ಕೋಟಿ ನಗದು, 50 ಕೆಜಿ ಚಿನ್ನಾಭರಣ ದರೋಡೆ



ವಿಜಯಪುರ, ಸೆ.16- ನೆರೆಯ ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಯ ಚಡಚಣ ಪಟ್ಟಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಮಂಗಳವಾರ ಸಂಜೆ 7 ಗಂಟೆಗೆ ಏಳೆಂಟು ಮುಸುಕುಧಾರಿ ದರೋಡೆಕೋರರು ಪಿಸ್ತೂಲ್ ಮತ್ತು ಮಾರಕಾಸ್ತ್ರಗಳನ್ನು ತೋರಿಸಿ, ಬ್ಯಾಂಕಿನ ಸಿಬ್ಬಂದಿಯ ಕೈಕಾಲು ಕಟ್ಟಿ ಹಾಕಿ ದರೋಡೆ ಮಾಡಿದ್ದಾರೆ.

ಅಂದಾಜು 8 ಕೋಟಿ ನಗದು, 50 ಕೆಜಿ ಚಿನ್ನಾಭರಣವನ್ನು ದೋಚಿಕೊಂಡು ಪರಾರಿಯಾಗಿದ್ದಾರೆ ಎಂದು ಬ್ಯಾಂಕಿನ ಸಿಬ್ಬಂದಿ, ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ಆದರೆ, ಖಚಿತ ಮಾಹಿತಿ ಇನ್ನೂ ಲಭಿಸಿಲ್ಲ.

ಚಡಚಣ ಪಟ್ಟಣದ ಪಂಢರಪುರ ಮುಖ್ಯರಸ್ತೆಯಲ್ಲಿರುವ ಜನನಿಬಿಡ ಪ್ರದೇಶದಲ್ಲಿರುವ ಎಸ್‌ಬಿಐ ಶಾಖೆಯ ಸಿಬ್ಬಂದಿ ಕೆಲಸ ಮುಗಿಸಿಕೊಂಡು ಮನೆಗೆ ತೆರಳಲು ಅಣಿಯಾಗುತ್ತಿದ್ದ ವೇಳೆ ಮಿಲಿಟರಿ ಬಣ್ಣದ ಬಟ್ಟೆ ಧರಿಸಿದ್ದ ದರೋಡೆಕೋರರು ಬ್ಯಾಂಕಿನ ಮುಖ್ಯ ದ್ವಾರದ ಮೂಲಕ ಪ್ರವೇಶಿಸಿದ್ದಾರೆ.

ನಾಡ ಪಿಸ್ತೂಲ್ ಹಾಗೂ ಮಾರಕಾಸ್ತ್ರಗಳನ್ನು ತೋರಿಸಿ, ಬ್ಯಾಂಕ್ ವ್ಯವಸ್ಥಾಪಕ ಮತ್ತು ಸಿಬ್ಬಂದಿಗೆ ಜೀವ ಬೆದರಿಕೆ ಹಾಕಿ, ದರೋಡೆ ಮಾಡಿದ್ದಾರೆ. ದರೋಡೆಕೋರರು ಘಟನೆ ಬಳಿಕ ಕದ್ದ ಚಿನ್ನಾಭರಣವನ್ನು ವಾಹನಗಳಲ್ಲಿ ಹೇರಿಕೊಂಡು ಮಹಾರಾಷ್ಟ್ರದತ್ತ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಹಾಗೂ ಅಧಿಕಾರಿಗಳು ಭೇಟಿ ನೀಡಿದ್ದು, ಸಿಸಿಟಿವಿ ಕ್ಯಾಮೆರಾವನ್ನು ಪರಿಶೀಲನೆ ನಡೆಸಿದ್ದಾರೆ. ಬ್ಯಾಂಕ್ ಸಿಬ್ಬಂದಿಯಿಂದ ಮಾಹಿತಿ ಕಲೆ ಹಾಕುತ್ತಿದ್ದಾರೆ. ದರೋಡೆ ವಿಷಯ ತಿಳಿಯುತ್ತಿದ್ದಂತೆ ಸಾವಿರಾರು ಜನ ಬ್ಯಾಂಕ್ ಎದುರು ಜಮಾಯಿಸಿದ್ದಾರೆ.

ಲಂಚ ಸ್ವೀಕಾರ ಆರೋಪ: ಮೂವರು ವೈದ್ಯರ ಅಮಾನತಿಗೆ ಆದೇಶ



ಮಂಡ್ಯ, ಸೆ.16-ಲಂಚ ಸ್ವೀಕರಿಸಿದ ಆರೋಪದ ಮೇರೆಗೆ ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮೂಳೆ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರು ಸೇರಿದಂತೆ ಮೂವರು ವೈದ್ಯರನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಅಮಾನತುಗೊಳಿಸಿ ಆದೇಶ ಹೊರಡಿಸಿದೆ.

ಬೆಂಗಳೂರಿನ ಅಟಲ್ ಬಿಹಾರಿ ವಾಜಪೇಯಿ, ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶರೀರ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಚೈತ್ರ ಎಂ.ಎಸ್, ಮಂಡ್ಯದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮೂಳೆ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಮಂಜಪ್ಪ ಸಿ.ಎನ್, ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆ ಸಮುದಾಯ ವೈದ್ಯಕೀಯ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಅಶೋಕ್ ಸೆಲ್ಕೆ ಅವರನ್ನು ಅಮಾನತುಗೊಳಿಸಲಾಗಿದೆ.

ಡಾ. ಚೈತ್ರ, ಡಾ. ಮಂಜಪ್ಪ, ಡಾ. ಅಶೋಕ್ ಶೆಲ್ಕೆ ಛತ್ತೀಸ್‌ಗಡ ರವತ್‌ಪುರ ಸರ್ಕಾರ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ರಿಸರ್ಚ್ ಸಂಸ್ಥೆಗೆ ಅನುಕೂಲಕರವಾದ ತಪಾಸಣಾ ವರದಿಯನ್ನು ನೀಡುವುದಕ್ಕಾಗಿ ಲಂಚ ಪಡೆದಿದ್ದಾರೆ. ಇವರನ್ನು ಸಿಬಿಐ ಅಧಿಕಾರಿಗಳು ತಮ್ಮ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಎಲ್ಲ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಮೊಹಮ್ಮದ್ ಮೊಹಸೀನ್ ಮೂವರು ವೈದ್ಯರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಸಮೀಕ್ಷಾ ಕಾರ್ಯ ಒಂದು ವಾರ ಮುಂದೂಡಲು ಶಿಕ್ಷಕರ ಸಂಘ ಮನವಿ



ಸಮೀಕ್ಷಾ ಕಾರ್ಯ ಒಂದು ವಾರ ಮುಂದೂಡುವಂತೆ ಜಿಲ್ಲಾ ಶಿಕ್ಷಕ ಸಂಘದ ಪದಾಧಿಕಾರಿಗಳು ಎಡಿಸಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮೈಸೂರು, ಸೆ.16(ಎಸ್‌ಪಿಎನ್)- ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರಣಕ್ಕೆ ಜಿಲ್ಲೆಯ ಕೆಲ ಶಿಕ್ಷಕರನ್ನು ನಿಯೋಜಿಸಿದ್ದು, ಈ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ದಸರಾ ಮತ್ತು ನವರಾತ್ರಿ ಹಬ್ಬಗಳಿರುವುದರಿಂದ ಒಂದು ವಾರ ಸಮೀಕ್ಷೆ ಕಾರ್ಯ ಮುಂದೂಡಲು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮೈಸೂರು ಘಟಕದ ಪದಾಧಿಕಾರಿಗಳು ಮೈಸೂರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಜಾತಿಗಣತಿಗೆ ನಿಯೋಜಿಸಿರುವ ಗರ್ಭಿಣಿ ಹಾಗೂ ಬಾಣಂತಿ ಶಿಕ್ಷಕಿಯರಿಗೆ ಅಂಗವಿಕಲ ಶಿಕ್ಷಕ, ಶಿಕ್ಷಕಿಯರಿಗೆ, ತೀವ್ರತರ ಕಾಯಿಲೆಯಿಂದ ಬಳಲುತ್ತಿರುವ ಶಿಕ್ಷಕ, ಶಿಕ್ಷಕಿಯರಿಗೆ ವಯೋನಿವೃತ್ತಿ ಅಂಚಿನಲ್ಲಿರುವ ಶಿಕ್ಷಕರಿಗೆ ಸಮೀಕ್ಷೆಯಿಂದ ಕೈಬಿಡಬೇಕು. ಜಾತಿ ಗಣತಿಯಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರಿಗೆ ಗೌರವಧನ ಹಾಗೂ ಗಳಿಕೆ ರಜೆಯನ್ನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಸಂಘದ ಜಿಲ್ಲಾಧ್ಯಕ್ಷ ಸೋಮೇಗೌಡ, ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಹಾಗೂ ಇತರೆ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ ಜನ್ಮ ದಿನ; ದೈವಾರಾಧನೆ



ಮೈಸೂರು, ಸೆ.16(ಎಸ್‌ಪಿಎನ್)- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನ್ಮದಿನದಂದು ದೇವರಾಜ ಮೊಹಲ್ಲಾದಲ್ಲಿರುವ ಅಮೃತೇಶ್ವರ ದೇವಸ್ಥಾನದಲ್ಲಿ ಲೋಕ ಕಲ್ಯಾಣಕ್ಕಾಗಿ ಹಾಗೂ ಮೋದಿಯವರ ಆರೋಗ್ಯ, ಆಯಸ್ಸು ವೃದ್ಧಿಗಾಗಿ ಬುಧವಾರ ಬೆಳಗ್ಗೆ 6.30ಕ್ಕೆ ಮಹಾಯಾಗ, ಅಭಿಷೇಕ, ಹೋಮ ಹವನಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ನೇತೃತ್ವದಲ್ಲಿ ನಡೆಯಲಿದ್ದು, 8.30ಕ್ಕೆ ನಡೆಯುವ ಪೂರ್ಣಾಹುತಿ ಧಾರ್ಮಿಕ ಪೂಜೆಯಲ್ಲಿ ಸಂಸದರು ಉಪಸ್ಥಿತರಿರುತ್ತಾರೆ.

ಕುಸ್ತಿ ಗೆದ್ದ ಮಕ್ಕಳಿಗೆ ಬಹುಮಾನ...



ಮೈಸೂರು ತಾಲೂಕಿನ ಲಲಿತಾದ್ರಿಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ 2025-26ನೇ ಸಾಲಿನ 14 ವರ್ಷದೊಳಗಿನ ಬಾಲಕರು ಹಾಗೂ 17 ವರ್ಷದೊಳಗಿನ ಬಾಲಕಿಯರ ತಾಲೂಕು ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ತಾಲೂಕು ದೈಹಿಕ ಶಿಕ್ಷಣ ಪರೀಕ್ಷಕ ಮೂರ್ತಿ ನಾಯಕ್, ಶಾಲೆಯ ಮುಖ್ಯ ಶಿಕ್ಷಕಿ ಕಮಲಾಕ್ಷಿ, ತೀರ್ಪುಗಾರರಾದ ಶಶಿಧರ್ ಮೆಲ್ಲಹಳ್ಳಿ, ಅನಿಲ್‌ಕುಮಾರ್, ರಾಣಿ, ಜ್ಯೋತಿ, ಬೃಂದಾ, ನಳಿನಿ, ಕೃಷ್ಣವೇಣಿ, ಲಲಿತಾದ್ರಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಮಂಜುನಾಥ್, ನಾಗರಾಜ್, ಕುಮಾರ್ ಆರಾಧ್ಯ, ಪ್ರತಿಭಾ, ಸೌಮ್ಯ ಆಶಾ, ಎಸ್‌ಡಿಎಂಸಿ ಸದಸ್ಯ ನಿಂಗರಾಜು, ಗ್ರಾಮದ ಮುಖಂಡರಾದ ರವಿ, ಬಸವಣ್ಣ, ಪಲ್ಲವಿ, ರಾಜೇಶ್ವರಿ, ರೂಪ, ನಾಗವೇಣಿ, ಮಣಿ, ನವೀನ್ ಮತ್ತಿತರರಿದ್ದರು.

'ಸಂವಿಧಾನ-ಒಂದು ಜೀವಂತ ದಸ್ತಾವೇಜು' ಕುರಿತು ವಿಚಾರ ಸಂಕಿರಣ

ಯಾವುದೇ ಅಸಮಾನತೆ ತೊಡೆಯಲು ಮಕ್ಕಳಿಗೆ ಮನೆಗಳಲ್ಲಿಯೇ ಸಂವಿಧಾನ ಪಾಠ ಅಗತ್ಯ

ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್



ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಶಾಲೆ ಸಭಾಂಗಣದಲ್ಲಿ ಮಂಗಳವಾರ ಸಂವಿಧಾನ ಕುರಿತ ವಿಚಾರ ಸಂಕಿರಣದಲ್ಲಿ ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್ ಮಾತನಾಡಿದರು.

ಸಂವಿಧಾನ ಜಾರಿಯಂದು ಕವಿತೆ ರಚಿಸಿದ ಕುವೆಂಪು...

ಸ್ಪಂದನೆ ಮತ್ತು ಚಲನಶೀಲತೆ ನಮ್ಮ ಸಂವಿಧಾನದಲ್ಲಿದೆ. 1950ರ ಜ.26ರಂದು ನಮ್ಮ ಸಂವಿಧಾನ ಜಾರಿಗೆ ಬಂತು. ಆ ದಿನ ದೆಹಲಿಯ ಆಕಾಶವಾಣಿಯಿಂದ ಈ ಸುದ್ದಿ ಬಿತ್ತರಿಸಲಾಯಿತು. ಆಗ ಸೂಕ್ಷ್ಮ ಸಂವೇದನೆಯ ಕನ್ನಡ ನಾಡಿನ ಹೆಮ್ಮೆಯ ಕವಿ ಕುವೆಂಪು ಅವರು ಸ್ಫೂರ್ತಿಗೊಂಡು ಕವಿತೆ ರಚಿಸುತ್ತಾರೆ. ಅದೇ 'ಶ್ರೀಸಾಮಾನ್ಯನಿಗೆ ದೀಕ್ಷಾ ಗೀತೆ'. ಇದೊಂದು ಚಾರಿತ್ರಿಕ ಅಂಶ. ಆ ಕವಿತೆಯಲ್ಲಿ ಅವರು ಹೇಳುವ ಸಾಲುಗಳು ಮುಖ್ಯ 'ಇದು ಸರ್ವರ ಕಾಲ' ಎಂದು ಅವರು ಉಲ್ಲೇಖಿಸಿದ್ದಾರೆ. ಸಂವಿಧಾನ ಜೀವಂತ ದಾಖಲೆ ಎಂಬುದಕ್ಕೆ ಕವಿಯ ಮನಸ್ಸು ಈ ರೀತಿಯಲ್ಲಿ ಸ್ಪಂದಿಸಿರುವುದೂ ಒಂದು ನಿದರ್ಶನ.

-ಡಾ.ಎಸ್.ನರೇಂದ್ರಕುಮಾರ್

ಮೈಸೂರು,ಸೆ.16(ಪಿಎಂ)- ಸಂವಿಧಾನ ಜಾರಿಗೊಂಡ ಬಳಿಕ ದೇಶದಲ್ಲಿ ಸಮಾನತೆ ಮತ್ತು ಮಾನವೀಯತೆ ಸಂಸ್ಕೃತಿ ಜೀವಂತಗೊಂಡಿತು. ಮನೆಗಳಲ್ಲಿಯೇ ಮಕ್ಕಳಿಗೆ ಸಂವಿಧಾನದ ಪಾಠ ಹೇಳಿಕೊಟ್ಟರೆ ಯಾವುದೇ ಅಸಮಾನತೆ ತೊಡೆದು ಹಾಕಲು ಸಾಧ್ಯವಾಗಲಿದೆ ಎಂದು ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರೂ ಆದ ಅಂಬೇಡ್ಕರ್ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ.ಎಸ್.ನರೇಂದ್ರಕುಮಾರ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಶಾಲೆ ಸಭಾಂಗಣದಲ್ಲಿ ವಿಮಾ ನಿಗಮ ನೌಕರರ ಸಂಘ ಮೈಸೂರು ವಿಭಾಗದ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಮತ್ತು ಅಖಿಲ ಭಾರತ ವಿಮಾ ನೌಕರರ ಸಂಘದ ಅಮೃತ ಮಹೋತ್ಸವ ವರ್ಷಾಚರಣೆ ಪ್ರಯುಕ್ತ 'ಸಂವಿಧಾನ-ಒಂದು ಜೀವಂತ ದಸ್ತಾವೇಜು' ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಸಂವಿಧಾನದ ಮೂಲಕ ದೇಶದಲ್ಲಿ ಮಾನವೀಯತೆ ಮತ್ತು ಸಮಾನತೆ ಸಂಸ್ಕೃತಿ ಸೃಷ್ಟಿಸಲು ಸಾಧ್ಯವಾಯಿತು. ಅವರೆಗೆ ಅಸಮಾನತೆ ಹಾಗೂ ಅಮಾನವೀಯ ಪರಿಕಲ್ಪನೆಗಳು ಇದ್ದವು. ಇದನ್ನು ಚರಿತ್ರೆಯ ಮೂಲಕ ಮನಗಾಣಬಹುದು. ಸಂವಿಧಾನ ಮತ್ತು ಪ್ರಜಾಪ್ರಭುತ್ವ ಕೇವಲ ಆಡಳಿತ ವಿಧಾನವಾಗಿರದೇ ಅದು ಜೀವನ ವಿಧಾನವಾಗಬೇಕೆಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದಾರೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವ ಎಂದಾಕ್ಷಣ ಕೇವಲ ಆಡಳಿತ ವ್ಯವಸ್ಥೆಯತ್ತ ಗಮನಹರಿಸುವುದೇ ಹೆಚ್ಚು ಆದರೆ ಅದು ಭಾರತೀಯರ ಜೀವನ ವಿಧಾನ ಆಗಬೇಕು. ಅಂದರೆ ನಮ್ಮ ಸಂಸ್ಕೃತಿ ಹಾಗೂ ನಡೆ ನುಡಿಯ ಭಾಗವಾಗಬೇಕು ಎಂದು ತಿಳಿಸಿದರು.


ನಾವು ಇಂದಿಗೂ ನಮ್ಮ ನಮ್ಮ ಜಾತಿ, ಸಂಪ್ರದಾಯ ಮತ್ತು ನಂಬಿಕೆಗಳನ್ನು ನಮ್ಮ ಮನೆಯೊಳಕ್ಕೆ ಸೀಮಿತವಾಗಿರಬೇಕು. ಹೊರಗಡೆ ಸಾರ್ವಜನಿಕವಾಗಿ ಅನುಸರಿಸಬಾರದು ಎಂದು ಹೇಳುವುದನ್ನು ಕೇಳುತ್ತೇವೆ. ಆದರೆ ಈ ಸಂಬಂಧ ಮರುವ್ಯಾಖ್ಯಾನ ಇಂದು ಅಗತ್ಯವಾಗಿದೆ ಏಕೆಂದರೆ ಮನೆಯಲ್ಲಿ ಅನುಸರಿಸುವ ಜಾತಿಯ ಕಟ್ಟುಪಾಡು, ಮಕ್ಕಳ ಮೇಲೆ ಪ್ರಭಾವ ಉಂಟು ಮಾಡಲಿದ್ದು, ಆ ಮೂಲಕ ಹೊರಗಡೆ ಮಕ್ಕಳು ಅಸಮಾನತೆ ಪ್ರಯೋಗಿಸುವ ಸಾಧ್ಯತೆ ತಳ್ಳಿಹಾಕಲಾಗದು. ಹಾಗಾಗಿ ಸಮಾನತೆ ಹಾಗೂ ಮಾನವೀಯತೆಯನ್ನು ಮಕ್ಕಳಲ್ಲಿ ಮೂಡಿಸಲು ಮನೆಯೊಳಗಡೆಯೇ ಸಂವಿಧಾನ ಆಶಯ ತಿಳಿಸಿಕೊಡಬೇಕು ಎಂದರು.

ಅಸಮಾನತೆ ನಡುವೆಯೂ ಸಮಾನತೆ ಮತ್ತು ಮಾನವೀಯತೆ ಸಂದೇಶ ಸಾರಿದ ಪರಂಪರೆಯೂ ಭಾರತದಲ್ಲಿದೆ. ಬುದ್ಧ, ಮಹಾವೀರ, ಬಸವಣ್ಣ ಮೊದಲಾದ ಮಹನೀಯರು ತಮ್ಮ ನಡೆ-ನುಡಿಯ ಮೂಲಕ ಸಮಾನತೆ ಸಂದೇಶ ಸಾರಿದರು. ಕಾಲಾತೀತ ಚಿಂತನೆಯಾಗಿ ಮಾನವೀಯತೆ ರೂಪಿಸಿದರು ಎಂದು ತಿಳಿಸಿದರು.

ನಿರ್ಜೀವತೆಯಿಂದ ಕೂಡಿದ ಜನಸಮುದಾಯಗಳಲ್ಲಿ ಸಂವಿಧಾನ ಚಲನಶೀಲತೆ ತಂದುಕೊಟ್ಟಿದೆ. ಅಲ್ಲದೆ, ಎಲ್ಲಾ ಬಗೆಯ ಅಸಮಾನತೆ ಕೊನೆಗಾಣಿಸಿದೆ. ಎಲ್ಲರೂ ಸಮಾನರು ಎಂಬ ಪರಿಕಲ್ಪನೆಯನ್ನು ಸಂವಿಧಾನ ಕಲ್ಪಿಸಿದೆ. ಲಿಂಗ ತಾರತಮ್ಯ ನಿರಾಕರಿಸಿದೆ. ಸಂವಿಧಾನ ಜಾರಿಗೊಳ್ಳುತ್ತಿದ್ದಂತೆ ಮಹಿಳೆಯರಿಗೆ ಮತದಾನದ ಹಕ್ಕು ದೊರೆಯಿತು. ಆಗಿನ್ನೂ ಇಂಗ್ಲೆಂಡ್ ಮತ್ತು ಅಮೆರಿಕದಂತಹ ರಾಷ್ಟ್ರಗಳಲ್ಲಿ ಸಹ ಮಹಿಳೆಯರಿಗೆ ಮತದಾನದ ಹಕ್ಕು ಕಲ್ಪಿಸಿರಲಿಲ್ಲ. ಇದು ನಮ್ಮ ಸಂವಿಧಾನದ ಜೀವಂತಿಕೆಯ ವೈಶಿಷ್ಟ್ಯ ಎನ್ನಬಹುದು. ಆದಾಗ್ಯೂ ಜಾತಿ ಕಾರಣಕ್ಕೆ ಮೇಲು-ಕೀಳು ಇಂದಿಗೂ ಮುಂದುವರೆದಿರುವುದು ಮಾತ್ರ ದುರಂತ ಎಂದು ಬೇಸರ ವ್ಯಕ್ತಪಡಿಸಿದರು. ವಿಮಾ ನಿಗಮ ನೌಕರರ ಸಂಘ ಮೈಸೂರು ವಿಭಾಗದ ಅಧ್ಯಕ್ಷ ಎಸ್.ಕೆ.ರಾಮು, ಪ್ರಧಾನ ಕಾರ್ಯದರ್ಶಿ ಎಸ್.ಎಸ್. ನಾಗೇಶ್ ಮತ್ತಿತರರು ಹಾಜರಿದ್ದರು.

ರಾಜ್ಯ ಮುಕ್ತ ವಿವಿಯಲ್ಲಿ ಜ್ಯೋತಿರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮಗಳಿಗೆ ಚಾಲನೆ

ಶಾಸ್ತ್ರಗಳಿರುವುದು ಪೋಷಣೆಗೆ, ಶೋಷಣೆಗಲ್ಲ: ಬೇಬಿ ಮಠದ ಶ್ರೀ ಕಿವಿಮಾತು



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಜ್ಯೋತಿರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವನ್ನು ಬೇಬಿ ಮಠದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಉದ್ಘಾಟಿಸಿದರು. ಇಸ್ರೋ ವಿಜ್ಞಾನಿ ಡಾ.ಎಸ್.ವಿ.ಶರ್ಮ, ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಸೆ.16(ಎಂಕೆ)- ತನ್ನ ಮೇಲೆ ನಂಬಿಕೆ, ವಿಶ್ವಾಸ ಇಲ್ಲದವರು ಯಾವುದನ್ನೂ ನಂಬುವುದಿಲ್ಲ. ಶಾಸ್ತ್ರಗಳಿರುವುದು ಪೋಷಣೆಗೆ ಹೊರತು ಶೋಷಣೆಗಲ್ಲ ಎಂದು ಶ್ರೀರಂಗಪಟ್ಟಣದ ಬೇಬಿ ಮಠ ಮತ್ತು ಚಂದ್ರವನ ಆಶ್ರಮದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಜ್ಯೋತಿಷರು ಹಾಗೂ ಜ್ಯೋತಿಷ ಬೋಧನಾ ಸಂಸ್ಥೆಗಳ ಒಕ್ಕೂಟದ ಸಹಯೋಗದೊಂದಿಗೆ ಆಯೋಜಿಸಿದ್ದ ಜ್ಯೋತಿರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪುರಾತನ ಗ್ರಂಥಗಳಲ್ಲಿ ಜ್ಯೋತಿಷ ಶಾಸ್ತ್ರದ ಉಲ್ಲೇಖವಿದ್ದು, ವೈಜ್ಞಾನಿಕತೆಯನ್ನು ಮೈಗೂಡಿಸಿಕೊಂಡಿರುವ ಜ್ಯೋತಿಷ ಶಾಸ್ತ್ರದ ಮೇಲೆ ನಂಬಿಕೆ ಅಗತ್ಯ. ಶಾಸ್ತ್ರ, ಇತಿಹಾಸ ಪುರಾಣಗಳು ಶತಮಾನ ಕಳೆದರೂ ಶಾಶ್ವತ ಎಂದರು.

ಶಿಕ್ಷಣ ಹಾಗೂ ಆರೋಗ್ಯ ವ್ಯವಸ್ಥೆ ಗಟ್ಟಿಯಾಗಿದ್ದರೆ ದೇಶ ಬಲಿಷ್ಠವಾಗಿರಲು ಸಾಧ್ಯ. ದೇಶದಲ್ಲಿ ಅಕ್ಷರದ ಬೀಜ ಹಾಗೂ ಅನ್ನದ ಬೀಜ ಬಿತ್ತುವವರಿಗೆ ರಕ್ಷಣೆ ನೀಡಬೇಕಾಗಿರುವುದು ನಮ್ಮ ಕರ್ತವ್ಯ. ಕಲಾವಿದರಿಗಾಗಿ ಮಠದ ಮೂಲಕ ಕೋರ್ಸ್ ಪ್ರಾರಂಭ ಮಾಡಿದ್ದೆವು. ಕಲಿಕೆಯ ಪ್ರಮಾಣ ಪತ್ರವು ನಮಗೆ ಅನೇಕ ಅವಕಾಶ ನೀಡುತ್ತದೆ. ಈ ನಿಟ್ಟಿನಲ್ಲಿ ಕೆಎಸ್‌ಒಯು ಪ್ರಯತ್ನ ಅಭಿನಂದನಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಇಸ್ರೋ ವಿಜ್ಞಾನಿ ಡಾ.ಎಸ್.ವಿ.ಶರ್ಮ, ಶ್ರೀರಂಗಪಟ್ಟಣದ ಶಾಸ್ವತಿ ಧಾರ್ಮಿಕ ಸಮಿತಿಯ ಡಾ.ಭಾನು ಪ್ರಕಾಶ್ ಶರ್ಮ, ಕರ್ನಾಟಕ ರಾಜ್ಯ ಜ್ಯೋತಿಷರ ಹಾಗೂ ಜ್ಯೋತಿಷ ಬೋಧನಾ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎನ್. ಅನಂತ ರಾಘವನ್, ಮುಕ್ತ ವಿವಿ ಶೈಕ್ಷಣಿಕ ಡೀನ್ ಪ್ರೊ.ಎಂ. ರಾಮನಾಥಂ ನಾಯ್ಡು, ಕುಲಸಚಿವ ಪ್ರೊ.ಎಸ್.ಕೆ. ನವೀನ್ ಕುಮಾರ್, ಹಣಕಾಸು ಅಧಿಕಾರಿ ಪ್ರೊ.ಎಸ್.ನಿರಂಜನ್ ರಾಜ್, ಅಧ್ಯಯನ ಕೇಂದ್ರದ ಡೀನ್ ಎನ್.ಆರ್. ಚಂದ್ರೇಗೌಡ ಮತ್ತಿತರರಿದ್ದರು.

ಮೈಸೂರು ಮಿತ್ರ ಬುಧವಾರ 17 ಸೆಪ್ಟೆಂಬರ್ 2025

ಕೊಡಗಹಳ್ಳಿಗೆ ಬಿಎಂಸಿ ಕೇಂದ್ರ ಮಂಜೂರು ಮಾಡಿಸುತ್ತೇನೆ

ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಭರವಸೆ

ತಿ.ನರಸೀಪುರ, ಸೆ.16– ಕೊಡಗಹಳ್ಳಿ ಹಾಲು ಉತ್ಪಾದಕರ ಸಂಘಕ್ಕೆ ಬಿಎಂಸಿ ಕೇಂದ್ರ ಮಂಜೂರು ಮಾಡಿಸಿಕೊಡುವುದಾಗಿ ಮೈಮುಲ್ ಅಧ್ಯಕ್ಷ ಆರ್. ಚೆಲುವರಾಜು ಭರವಸೆ ನೀಡಿದರು.

ತಾಲೂಕಿನ ಕೊಡಗಹಳ್ಳಿ ಡೇರಿ ಆವರಣದಲ್ಲಿ ಮಂಗಳವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದ ರೈತರು ಕೃಷಿ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಕಾರಣ ಹೆಚ್ಚು ಹಾಲು ಉತ್ಪಾದನೆಯಾಗುತ್ತಿರುವುದರಿಂದ ಬಿಎಂಸಿ ಕೇಂದ್ರ ತೆರೆಯುವಂತೆ ಹಾಗೂ ಶಿಥಿಲಗೊಂಡಿರುವ ಕಟ್ಟಡ ಕೆಡವಿ ನೂತನ ಕಟ್ಟಡ ನಿರ್ಮಿಸಲು ಅನುದಾನ ನೀಡುವಂತೆ ಸಹಕಾರ ಸಂಘದ ಸದಸ್ಯರು ಇಟ್ಟ ಮನವಿಗೆ ಸ್ಪಂದಿಸಿದ ಚೆಲುವರಾಜು ಮೈಮುಲ್ 30 ಬಿಎಂಸಿ ಕೇಂದ್ರಗಳನ್ನು ಆರಂಭಿಸಲಿದ್ದು, ಕೊಡಗಹಳ್ಳಿಗೂ ಬಿಎಂಸಿ ಕೇಂದ್ರ ಮಂಜೂರು ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಗ್ರಾಮದ ಡೇರಿ ಕಟ್ಟಡ ನಿರ್ಮಿಸಿ 35 ರಿಂದ 40 ವರ್ಷಗಳಾಗಿದ್ದು, ಕಟ್ಟಡ ಶಿಥಿಲವಾಗಿದೆ. ಹಾಗಾಗಿ ಸಂಘದ ಸದಸ್ಯರು ಚರ್ಚಿಸಿ ನೂತನ ಕಟ್ಟಡ ನಿರ್ಮಿಸಬೇಕೆ ಅಥವಾ ಇರುವ ಕಟ್ಟಡವನ್ನೇ ನವೀಕರಣ ಮಾಡಬೇಕೆ ಎಂಬ ಬಗ್ಗೆ ತೀರ್ಮಾನ ಕೈಗೊಳ್ಳುವಂತೆ ಸಲಹೆ ನೀಡಿದರು.


ಸಂಘಕ್ಕೆ ಹೆಚ್ಚು ಹಾಲು ಪೂರೈಕೆ ಮಾಡಿದ ಹಾಲು ಉತ್ಪಾದಕರನ್ನು ಸನ್ಮಾನಿಸಲಾಯಿತು.

ನೂತನ ಕಟ್ಟಡ ನಿರ್ಮಿಸಲು ಜಾಗವಿದೆಯೇ ಅಥವಾ ಈಗಿರುವ ಹಳೆ ಕಟ್ಟಡವನ್ನೇ ಒಡೆದು ಕಟ್ಟುತ್ತೀರಾ ಎಂಬ ಬಗ್ಗೆ ಮಾಹಿತಿ ಕೇಳಿದ ವೇಳೆ, ನೂತನ ಕಟ್ಟಡಕ್ಕೆ ಬೇರೆ ಜಾಗ ಸಿದ್ದವಿದೆ ಎಂದಾಗ ಕೆಎಂಎಫ್‌ನಿಂದ 4.5 ಲಕ್ಷ ಹಾಗೂ ಒಕ್ಕೂಟದಿಂದ ಎಷ್ಟು ಸಾಧ್ಯವೋ ಅಷ್ಟು ಅನುದಾನ ಕೊಡಿಸುತ್ತೇನೆ. ಕಾಂಗ್ರೆಸ್ ಮುಖಂಡರು, ಶಾಸಕರು ಮತ್ತು ಸಂಸದರ ಅನುದಾನದಲ್ಲಿ ನೀಡಬಹುದಾದ ಹಣ ಕೊಡಿಸಲಿದ್ದು, ಸಂಘದಲ್ಲಿರುವ ಹಣವನ್ನೂ ಸೇರಿಸಿ ಉತ್ತಮ ಕಟ್ಟಡ ನಿರ್ಮಿಸುವಂತೆ ಸಲಹೆ ನೀಡಿದರು.

ಲೋಕಲ್ ಸೇಲ್‌ಗೆ ಬಿಲ್ ನೀಡಿ: ಡೇರಿಯಲ್ಲಿ ಲೋಕಲ್ ಸೇಲ್ ಮಾಡುವ ಹಾಲಿನ ಪ್ರಮಾಣ ಎಷ್ಟು ಎಂಬ ಬಗ್ಗೆ ಬಿಲ್ ಹರಿಯಬೇಕು ಎಂದು ಕಾರ್ಯದರ್ಶಿಗೆ ಸೂಚಿಸಿದ ಚೆಲುವರಾಜು ಇದರಿಂದ ಉತ್ಪಾದಕರಲ್ಲಿರುವ ಸಂಶಯ ನಿವಾರಣೆಯಾಗಲಿದೆ ಎಂದರು.

ಆರಂಭದಲ್ಲಿ 12 ಸಾವಿರ, ಈಗ 10 ಲಕ್ಷ: 49 ವರ್ಷಗಳ ಹಿಂದೆ ಮೈಮುಲ್ ಆರಂಭವಾದಾಗ 12 ಸಾವಿರ ಲೀಟರ್ ಹಾಲು ಬರುತ್ತಿತ್ತು. ಆದರೆ ಇಂದು ನಿತ್ಯ 10 ಲಕ್ಷ ಲೀಟರ್ ಹಾಲು ಬರುತ್ತಿದೆ. ಮೈಸೂರಲ್ಲದೇ ಚೆನ್ನೈ, ಕೇರಳದಲ್ಲೂ ನಂದಿನಿ ಹಾಲಿನ ಮಾರುಕಟ್ಟೆ ವಿಸ್ತರಿಸಲಾಗಿದೆ. ಒಟ್ಟಾರೆ ಕರ್ನಾಟಕದಲ್ಲಿ ನಿತ್ಯ ಒಂದು ಕೋಟಿ ಲೀಟರ್ ಹಾಲು ಶೇಖರಣೆಯಾಗುತ್ತಿದ್ದು, ರೈತರು ಮತ್ತು ಗ್ರಾಹಕರಿಗೆ ನ್ಯಾಯಯುತವಾದ ಬೆಲೆಯಲ್ಲಿ ಹಾಲು ಸಿಗುತ್ತಿದೆ ಎಂದರು.

ಸಂಘದ ಸಿಇಓ ಹೆಚ್.ಶಿವಣ್ಣ ವಾರ್ಷಿಕ ವರದಿ ಮಂಡಿಸಿ, ಪ್ರಸಕ್ತ ಸಾಲಿನಲ್ಲಿ ಸಂಘವು 5,67,099 ಲಕ್ಷ ರೂ. ನಿವ್ವಳ ಲಾಭ ಗಳಿಸಿ ಷೇರುದಾರರ ಸಹಕಾರದೊಂದಿಗೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.


ಮೈಮುಲ್ ತಾಲೂಕು ವಿಸ್ತರಣಾಧಿಕಾರಿ ಆರ್.ಪ್ರಮೋದ್ ಮಾತನಾಡಿದರು. ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಕೆ.ಎಂ.ಕೆಂಪೇಗೌಡ (25,413 ಲೀ.), ಮಹದೇವು(14,801 ಲೀ.), ಅರವಿಂದ್(7595) ಅವರಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು.

ಮೈಮುಲ್ ಮಾಜಿ ನಿರ್ದೇಶಕ ಕೆ.ಬಿ. ಪ್ರಭಾಕರ್, ಸಂಘದ ಅಧ್ಯಕ್ಷ ಕೆ.ಎಂ.ಕರಗಯ್ಯ, ಉಪಾಧ್ಯಕ್ಷೆ ಪ್ರಭಾವತಿ, ನಿರ್ದೇಶಕರಾದ ಹೆಚ್.ನಾಗರಾಜು, ಬಿ.ಸುರೇಂದ್ರ, ತುಳಸಿಕೃಷ್ಣ, ಮಹದೇವು, ಕೆ.ಕೆಂಪೇಗೌಡ, ಕೆ.ಎಂ. ಶಂಕರ, ಮರಿಸ್ವಾಮಿ, ನಂಜಪ್ಪ, ರತ್ನಮ್ಮ, ಕೆ.ಜೆ. ಜವರಪ್ಪ, ಮಾರ್ಗ ವಿಸ್ತರಣಾಧಿಕಾರಿ ದಿವ್ಯಶ್ರೀ, ಹಾಲು ಪರೀಕ್ಷಕ ಕೆ.ಪ್ರಕಾಶ್, ಸಹಾಯಕ ನಾರಾಯಣಾಚಾರಿ, ಸಹಾಯಕಿ ಪವಿತ್ರ, ಚಿಕ್ಕಜವರಪ್ಪ ಸೇರಿದಂತೆ ಷೇರುದಾರರು, ಹಾಲು ಉತ್ಪಾದಕರು ಹಾಜರಿದ್ದರು.

ರೈತರು, ರಾಸುಗಳಿಗೆ ವಿಮೆ

ಒಕ್ಕೂಟದಿಂದ ರೈತರಿಗೆ ಉಚಿತವಾಗಿ ಲಕ್ಷ ರೂ.ಗಳ ಜೀವ ವಿಮೆ ಮಾಡಿಸಲಾಗುತ್ತಿದೆ. ಮೊದಲು ರೈತರಿಂದ 50ರಷ್ಟು ಹಣ ಪಡೆಯಲಾಗುತ್ತಿತ್ತು. ಆದರೆ ರೈತರು ಶೇ.50ರಷ್ಟು ಅಂದರೆ 275 ರೂ. ಕೊಡದ ಹಿನ್ನಲೆಯಲ್ಲಿ ಉಚಿತವಾಗಿ ವಿಮೆ ಮಾಡಿಸಲು ಒಕ್ಕೂಟ ನಿರ್ಧರಿಸಿದೆ. ಹಾಗೆಯೇ ರಾಸುಗಳಿಗೂ ವಿಮೆ ಮಾಡಿಸಲು ರೈತರಿಂದ ಶೇ.25ರಷ್ಟು ಹಣ ಪಡೆದು ಉಳಿದ ಶೇ.75ರಷ್ಟು ಹಣವನ್ನು ಒಕ್ಕೂಟ ಪಾವತಿ ಮಾಡುತ್ತಿದ್ದು, ರೈತರು ಕಡ್ಡಾಯವಾಗಿ ತಮ್ಮ ರಾಸುಗಳಿಗೆ ವಿಮೆ ಮಾಡಿಸಬೇಕೆಂದು ಚಲುವರಾಜು ಮನವಿ ಮಾಡಿದರು.

ಪ್ರಕೃತಿ ಗಿರಿಜನ ಮಹಿಳಾ ಒಕ್ಕೂಟಕ್ಕೆ ಪುಟ್ಟಮ್ಮ ಅಧ್ಯಕ್ಷೆ


ಪ್ರಕೃತಿ ಗಿರಿಜನ ಮಹಿಳಾ ಒಕ್ಕೂಟದ ಅಧ್ಯಕ್ಷೆಯಾಗಿ ಪುಟ್ಟಮ್ಮ ಆಯ್ಕೆಯಾದರು.

ಹೆಚ್.ಡಿ.ಕೋಟೆ, ಸೆ.16– ತಾಲೂಕಿನ ಪ್ರಕೃತಿ ಗಿರಿಜನ ಮಹಿಳಾ ಒಕ್ಕೂಟದ ಅಧ್ಯಕ್ಷರಾಗಿ ಪುಟ್ಟಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲೂಕಿನ ಕೆಂಚನಹಳ್ಳಿ ತರಬೇತಿ ಕೇಂದ್ರದಲ್ಲಿ ನಡೆದ ಒಕ್ಕೂಟದ ಸಭೆಯಲ್ಲಿ ಪುಟ್ಟಮ್ಮ ಅವರನ್ನು ಅಧ್ಯಕ್ಷೆಯಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷೆ ಪುಟ್ಟಮ್ಮ ಮಾತನಾಡಿ, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ವ್ಯಾಪ್ತಿಯ ಆದಿವಾಸಿ ಮಹಿಳೆಯರು ಸಾಮಾಜಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದುವ ಧ್ಯೇಯದೊಂದಿಗೆ ಹಾಡಿ ಮಟ್ಟದಲ್ಲಿ ಸ್ವಸಹಾಯ ಸಂಘ ರಚಿಸಿಕೊಂಡು, ಎಲ್ಲಾ ಸಂಘದ ಸದಸ್ಯರು ಸೇರಿ ತಾಲೂಕು ಮಟ್ಟದಲ್ಲಿ ಮಹಿಳಾ ಒಕ್ಕೂಟ ರಚಿಸಿಕೊಂಡಿದ್ದು, ತಿಂಗಳಿಗೊಮ್ಮೆ ಒಕ್ಕೂಟದ ಮಾಸಿಕ ಸಭೆ ಸೇರಿ ಸ್ವ–ಉದ್ಯೋಗ, ಕೃಷಿ, ಆರೋಗ್ಯ, ಶಿಕ್ಷಣ ಮತ್ತು ಹಾಡಿ ಅಭಿವೃದ್ಧಿ ವಿಚಾರಗಳನ್ನು ಚರ್ಚಿಸುವ ಮೂಲಕ ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸುತ್ತಿದ್ದೇವೆ. ಕಳೆದ 15 ವರ್ಷಗಳಿಂದ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿರುವ ಈ ಸಂಘಕ್ಕೆ ಪ್ರತಿ 2 ವರ್ಷಗಳಿಗೊಮ್ಮೆ ಅಧ್ಯಕ್ಷರನ್ನು ಆಯ್ಕೆ ಮಾಡುತ್ತಿದ್ದೇವೆ. ಅದರಂತೆ ಈ ಬಾರಿ ನಾನು ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾನೆ ಎಂದರು.

ಈ ವೇಳೆ ಒಕ್ಕೂಟದ ಮಾಜಿ ಅಧ್ಯಕ್ಷೆ ಸರಸು, ಚಿಕ್ಕಮಣಿ, ಭಾಗ್ಯಮ್ಮ, ಸದಸ್ಯರಾದ ರಾಗಿಣಿ, ರತ್ನ, ರಂಜನಿ, ಪವಿತ್ರ, ಪವಿ, ತಾಯಮ್ಮ, ಸುನಂದ, ಸುಶೀಲಾ ಹಾಗೂ ಒಕ್ಕೂಟದ ಕಾರ್ಯದರ್ಶಿ ಕು.ರಾಜೇಶ್ವರಿ, ಸ್ವಸಹಾಯ ಸಂಘದ ಮಹಿಳಾ ಪ್ರತಿನಿಧಿಗಳು ಹಾಜರಿದ್ದರು.

ಬಸ್ ನಿಲ್ದಾಣ, ಆಟೋ ಶೆಲ್ಟರ್‌ಗೆ ಗುದ್ದಲಿ ಪೂಜೆ

ನಂಜನಗೂಡು, ಸೆ.16– ನಗರದ ನಿವಾಸಿಗಳ ಬೇಡಿಕೆಯಂತೆ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ಬಡಾವಣೆಯ 8 ಕಡೆ 80 ಲಕ್ಷ ರೂ. ವೆಚ್ಚದಲ್ಲಿ ಬಸ್ ನಿಲ್ದಾಣ ಮತ್ತು ಆಟೋ ಶೆಲ್ಟರ್ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ವಿವಿಧ ಬಡಾವಣೆಗಳಲ್ಲಿ ಬಸ್ ನಿಲ್ದಾಣ ಮತ್ತು ಆಟೋ ಶೆಲ್ಟರ್ ನಿರ್ಮಾಣ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಗರದ ಜನತೆ ವಿವಿಧ ಕಡೆಗಳಲ್ಲಿ ಬಸ್ ತಂಗುದಾಣ ಮತ್ತು ಆಟೋ ಶೆಲ್ಟರ್‌ಗಳನ್ನು ನಿರ್ಮಿಸಿ ಪ್ರಯಾಣಕ್ಕೆ ಅನುಕೂಲ ಕಲ್ಪಿಸುವಂತೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿ ನಗರದ ಕಲ್ಲಹಳ್ಳಿ ಬಡಾವಣೆ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ಶ್ರೀಕಂಠೇಶ್ವರ ದೇವಾಲಯ, ಮೈಸೂರು ಊಟಿ ರಸ್ತೆಯ ಅರಣ್ಯ ಇಲಾಖೆ ಮುಂಭಾಗ ಮತ್ತು ಹುಲ್ಲಹಳ್ಳಿಗೆ ಹೋಗುವ ರಸ್ತೆಯ ಲೋಕೋಪಯೋಗಿ ಇಲಾಖೆ ಮುಂಭಾಗ ತಲಾ 13 ಲಕ್ಷ ವೆಚ್ಚದಲ್ಲಿ ಬಸ್ ನಿಲ್ದಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಅಲ್ಲದೇ ನಗರದ ದೇವರಾಜ ಅರಸು ಸೇತುವೆ, ಸಾರ್ವಜನಿಕ ಆಸ್ಪತ್ರೆ, ಮಹದೇಶ್ವರ ಬಡಾವಣೆ ಬಳಿ ತಲಾ 5 ಲಕ್ಷ ವೆಚ್ಚದಲ್ಲಿ ಆಟೋ ಶೆಲ್ಟರ್ ನಿರ್ಮಾಣ ಸೇರಿದಂತೆ 80 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.


ಬಸ್ ನಿಲ್ದಾಣ, ಆಟೋ ಶೆಲ್ಟರ್ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ನಮ್ಮ ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಅನುದಾನದ ಕೊರತೆ ಇಲ್ಲ. ಈ ಬಾರಿ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ತಮ್ಮ ವಿಶೇಷ ಅನುದಾನದಡಿಯಲ್ಲಿ ಅನುದಾನ ಮೀಸಲಿಟ್ಟಿದ್ದು, ನಂಜನಗೂಡು ಕ್ಷೇತ್ರಕ್ಕೆ 50 ಕೋಟಿ ವಿಶೇಷ ಅನುದಾನ ನೀಡಲಿದ್ದಾರೆ. ಅದರಲ್ಲಿ ಹೆಚ್ಚಿನ ಅನುದಾನವನ್ನು ನಗರದ ಬಡಾವಣೆಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು ಮೀಸಲಿಡುವ ಜೊತೆಗೆ ಮುಂದಿನ ತಿಂಗಳು ತಾಲೂಕಿನ ವಿವಿಧ ಗ್ರಾಮಗಳಲ್ಲಿ ತೀವ್ರ ಅವಶ್ಯವಿರುವ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಸದಸ್ಯರಾದ ಪ್ರದೀಪ್, ಎಸ್.ಪಿ.ಮಹೇಶ್, ಗಂಗಾಧರ್, ಗಾಯತ್ರಿ, ಯೋಗೀಶ್, ರವಿ, ಬಸವರಾಜು, ಮಹದೇವು, ಶಿವಶಂಕರ್, ಕುಮಾರ್, ನಾಗರಾಜಯ್ಯ, ಸತೀಶ್, ಗಣೇಶ್, ಪ್ರಕಾಶ್, ನಾಗರಾಜು, ಪುಟ್ಟಸ್ವಾಮಿ, ನಗರಸಭಾ ಆಯುಕ್ತ ವಿಜಯ್, ನಿರ್ಮಿತಿ ಕೇಂದ್ರದ ಎಇ ಯಶವಂತ್ ಸೇರಿದಂತೆ ಹಲವರಿದ್ದರು.

ಬಸವ ಜಯಂತಿಗೆ ಸಮಾಜದಿಂದ ಉತ್ತಮ ಬೆಂಬಲ

ನಂಜನಗೂಡು, ಸೆ16– ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಕಳೆದ ತಿಂಗಳು ನಗರದಲ್ಲಿ ಆಯೋಜಿಸಿದ್ದ ಅದ್ದೂರಿ ಬಸವ ಜಯಂತಿ ಕಾರ್ಯಕ್ರಮಕ್ಕೆ ತಾಲೂಕಿನ ಸಮಾಜದ ಬಾಂಧವರು ಉತ್ತಮ ಸಹಕಾರ, ಬೆಂಬಲ ನೀಡಿ ಯಶಸ್ವಿಗೊಳಿಸಿದರು ಎಂದು ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕೆಂಪಣ್ಣ ತಿಳಿಸಿದರು.

ನಗರದ ಮಲ್ಲನಮೂಲೆ ಮಠದ ಸಭಾಂಗಣದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕಾಗಿ ಸಮಾಜದ ಬಂಧುಗಳು 20.10 ಲಕ್ಷ ರೂ. ಹಣ ನೀಡಿದ್ದರು. ಕಾರ್ಯಕ್ರಮಕ್ಕೆ 17.73 ಲಕ್ಷ ವೆಚ್ಚವಾಗಿದ್ದು, 2.36 ಲಕ್ಷ ರೂ. ಉಳಿಕೆಯಾಗಿದೆ. ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದೇವನೂರು ಮಹಾಂತ ಸ್ವಾಮೀಜಿ ಹಾಗೂ ಕಂಬಳೀಶ್ವರ ಮಠದ ಚೆನ್ನಬಸವ ಸ್ವಾಮೀಜಿಗಳ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶಾಸಕರಾದ ದರ್ಶನ್ ಹಾಗೂ ಹೆಚ್.ಎಂ.ಗಣೇಶ್ ಪ್ರಸಾದ್ ವೇದಿಕೆ ನಿರ್ವಹಣೆಯ ಖರ್ಚನ್ನು ಭರಿಸಿದ್ದಾರೆ. ಸಚಿವ ಈಶ್ವರ ಖಂಡ್ರೆ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು ಎಂದರು.



ಸಭೆಯಲ್ಲಿ ಮಹಾಸಭಾದ ಅಧ್ಯಕ್ಷ ಸಿಂಧುವಳ್ಳಿ ಕೆಂಪಣ್ಣ ಮಾತನಾಡಿದರು.

ಸಮಾಜದ ಬಹುದಿನದ ಬೇಡಿಕೆಯಾದ ಬಸವ ಭವನ ಕಾಮಗಾರಿ 2018ರಲ್ಲಿ ಆರಂಭವಾಗಿದ್ದು, ಕಳೆದ 7 ವರ್ಷಗಳಿಂದ ಕುಂಟುತ್ತಾ ಸಾಗಿದೆ. ವೀರಶೈವ ಮಹಾಸಭಾ ತಾಲೂಕು ಘಟಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಹೆಚ್ಚಿನ ಅನುದಾನ ನೀಡಿ ಬಸವ ಭವನ ಕಾಮಗಾರಿ ಪೂರ್ಣಗೊಳಿಸುವಂತೆ ಮನವಿ ಸಲ್ಲಿಸಿದ್ದು, ಉತ್ತಮ ಸ್ಪಂದನೆ ದೊರೆತಿದೆ ಎಂದರು.

ಕಾರ್ಯಕ್ರಮದಲ್ಲಿ ಮಲ್ಲನಮುಲೆ ಮಠದ ಚೆನ್ನಬಸವ ಸ್ವಾಮೀಜಿ, ಪ್ರಧಾನ ಕಾರ್ಯದರ್ಶಿ ಶಿವಪ್ಪದೇವರು, ಎಂ.ಪಿ.ನಟರಾಜು, ಎನ್. ಮಹೇಶ್, ಎಂ.ಜಿ.ಮಹದೇವಸ್ವಾಮಿ, ಶಶಿಕಲಾ ಗಿರೀಶ್, ರಾಜೇಂದ್ರ ಪ್ರಸಾದ್, ಕುರಹಟ್ಟಿ ಮಹೇಶ್, ಕೋಮಲ ಉಪಸ್ಥಿತರಿದ್ದರು.

ಚಂದ್ರವಾಡಿ ಡೇರಿಗೆ 1.36 ಲಕ್ಷ ರೂ. ನಿವ್ವಳ ಲಾಭ


ಚಂದ್ರವಾಡಿ ಡೇರಿಯಲ್ಲಿ ವಾರ್ಷಿಕ ಮಹಾಸಭೆ ನಡೆಯಿತು.

ಮಲ್ಕುಂಡಿ, ಸೆ.16– ರೈತರು ಹೈನುಗಾರಿಕೆಯಲ್ಲಿ ಆಧುನೀಕತೆ ಅಳವಡಿಸಿಕೊಂಡು ಆರ್ಥಿಕವಾಗಿ ಪ್ರಗತಿಹೊಂದುವ ಜೊತೆಗೆ ಸಂಘದ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಮೈಸೂರು ಜಿಲ್ಲಾ ಹಾಲು ಒಕ್ಕೂಟದ ವಿಸ್ತರಣಾಧಿಕಾರಿ ಶಿವಕುಮಾರ ಬೋವಿ ತಿಳಿಸಿದರು.

ನಂಜನಗೂಡು ತಾಲೂಕಿನ ಚಂದ್ರವಾಡಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹೈನುಗಾರಿಕೆಯಲ್ಲಿ ರೈತರು ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಅಲ್ಲದೇ ಮೈಮುಲ್‌ನಿಂದ ನೀಡುವ ಗುಣಮಟ್ಟದ ಪಶು ಆಹಾರವನ್ನು ರಾಸುಗಳಿಗೆ ನೀಡಿ ಆರೋಗ್ಯ ಕಾಪಾಡಬೇಕು. ಈ ಬಾರಿ ಸಂಘ 1.36 ಲಕ್ಷ ರೂ. ನಿವ್ವಳ ಲಾಭಗಳಿಸಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಲಾಭ ಗಳಿಸಲು ಹಾಲು ಉತ್ಪಾದಕರು ಸಹಕರಿಸಬೇಕು ಎಂದರು.

ಈ ವೇಳೆ ಸಂಘದ ಅಧ್ಯಕ್ಷ ಎಸ್.ರಾಜು, ಉಪಾಧ್ಯಕ್ಷೆ ಸುಂದ್ರಮ್ಮ, ನಿರ್ದೇಶಕರಾದ ಪುಟ್ಟಸ್ವಾಮಪ್ಪ, ಶಿವು, ರಂಗಸ್ವಾಮಿ, ಬಸವರಾಜ್, ಸಿಇಓ ವಿಜೇಂದ್ರಕುಮಾರ್, ಮುಖಂಡರಾದ ಪ್ರಭುಸ್ವಾಮಿ, ಪರಶಿವಮೂರ್ತಿ ಸೇರಿದಂತೆ ಗ್ರಾಮಸ್ಥರು ಇದ್ದರು.

ಕಂಪಲಾಪುರದಲ್ಲಿ ಗಣೇಶ ವಿಸರ್ಜನೆ

ಕಂಪಲಾಪುರ, ಸೆ.16– ಗ್ರಾಮದ ಒಕ್ಕಲಿಗರ ಬೀದಿಯ ವಿನಾಯಕ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಿದ್ದ 22 ಅಡಿ ಎತ್ತರದ ಗಣೇಶನನ್ನು ಗ್ರಾಮದ ಹೆಗ್ಗೆರೆಯಲ್ಲಿ ವಿಸರ್ಜಿಸಲಾಯಿತು.

ಕಳೆದ 18 ದಿನಗಳ ಕಾಲ ಗಣೇಶನಿಗೆ ವಿಶೇಷ ಪೂಜೆ ಸಲ್ಲಿಸಿ ಆಗಮಿಸುತ್ತಿದ್ದ ಭಕ್ತರಿಗೆ ಅನ್ನದಾನ ಏರ್ಪಡಿಸಲಾಗಿತ್ತು. ಭಾನುವಾರ ಬೆಳಗ್ಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಡಿಜೆ ಸದ್ದಿಗೆ ಮಕ್ಕಳು, ಯುವಕರು ಸೇರಿದಂತೆ ಎಲ್ಲರೂ ಹೆಜ್ಜೆ ಹಾಕಿ ಸಂಭ್ರಮಿಸಿದರು. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ಮೆರವಣಿಗೆ ವೇಳೆ ನೂರಾರು ಮುಸ್ಲಿಂ ಯುವಕರು ಸಾವಿರಾರು ಮಂದಿಗೆ ಮಜ್ಜಿಗೆ ವಿತರಿಸಿದರು. ಸಂಜೆ ವೇಳೆಗೆ 3 ಸಾವಿರಕ್ಕೂ ಹೆಚ್ಚು ಭಕ್ತರ ಸಮ್ಮುಖದಲ್ಲಿ ಹೆಗ್ಗೆರೆಯಲ್ಲಿ ಕ್ರೇನ್ ಮೂಲಕ ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡಲಾಯಿತು. ಬಳಿಕ ಎಲ್ಲರಿಗೂ ಪ್ರಸಾದ ವಿತರಣೆ ಮಾಡಲಾಯಿತು.


ಕ್ರೇನ್ ಮೂಲಕ ಗಣೇಶ ವಿಸರ್ಜನೆ ಮಾಡಲಾಯಿತು.

ಪಿಎಚ್.ಡಿ ಪದವಿ



ಮೈಸೂರು, ಸೆ.16– ಡಾ.ಆರ್.ರಂಗರಾಜನ್ ಅವರ ಮಾರ್ಗದರ್ಶನದಲ್ಲಿ ಸಿದ್ದರಾಜು ಅವರು ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸೆ.22ಕ್ಕೆ ಅಹಿಂದಾ ರೈತ ಸಂಘ ಅಸ್ತಿತ್ವಕ್ಕೆ

ಹುಣಸೂರು, ಸೆ.16– ನಮ್ಮನ್ನಾಳುವ ಸರ್ಕಾರಗಳಿಂದ ರೈತರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಅಹಿಂದಾ ರೈತ ಸಂಘ ಅಸ್ತಿತ್ವಕ್ಕೆ ಬರಲಿದೆ ಎಂದು ಅತ್ಯುತ್ತಮ ರೈತ ಪ್ರಶಸ್ತಿ ಪುರಸ್ಕೃತ ಸೋಮನಹಳ್ಳಿ ಶಿವಶೇಖರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.22ರಂದು ನಗರದ ಡಾ. ಅಂಬೇಡ್ಕರ್ ಭವನದಲ್ಲಿ ಅಹಿಂದಾ ರೈತ ಸಂಘದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಶ್ರೀನಟರಾಜ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಎಂಎಲ್‌ಸಿ ಹೆಚ್. ವಿಶ್ವನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ನಾಗವಾಲ ನರೇಂದ್ರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಿವಶೇಖರ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ ಎಂದರು.


ಸುದ್ದಿಗೋಷ್ಠಿಯಲ್ಲಿ ಶಿವಶೇಖರ್ ಮಾತನಾಡಿದರು.

ತಾಲೂಕಿನ ಅಧಿಕಾರಿಗಳು ನಿಜವಾದ ರೈತರಿಗೆ ಸಿಗಬೇಕಾದ ಸಾಗುವಳಿ ನೀಡದೆ ಅನ್ಯಾಯ ಎಸಗುವ ಜೊತೆಗೆ 10 ವರ್ಷಗಳಿಂದ ಒಂದು ಗ್ರಾಮವನ್ನೂ ಪೋಡಿ ಮುಕ್ತ ಮಾಡಿಲ್ಲ ಎಂದು ಆರೋಪಿಸಿದರು.

ನಗರದ 7 ಕಿಮೀ ವ್ಯಾಪ್ತಿಯಲ್ಲಿ ಸಾವಿರಾರು ರೈತರು ಹಿಂದಿನಿಂದಲೂ ಫಾರಂ ನಂ.50, 53, 57 ಸಾಗುವಳಿಗಾಗಿ ಅರ್ಜಿ ಸಲ್ಲಿಸಿದ್ದು, ಅವರಿಗೆ ಇಲ್ಲಿವರೆಗೂ ಸಾಗುವಳಿ ನೀಡಿಲ್ಲ. ಹೀಗಾಗಿ ಇದರ ವಿರುದ್ಧ ಹೋರಾಟ ನಡೆಸಿ ಸರ್ಕಾರದ ಗಮನ ಸೆಳೆದು ರೈತರಿಗೆ ನ್ಯಾಯ ಒದಗಿಸಲು ಕರ್ನಾಟಕ ರಾಜ್ಯ ಅಹಿಂದಾ ರೈತ ಸಂಘವನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಹಿಂದಾ ರೈತ ಸಂಘದ ತಾಲೂಕು ಅಧ್ಯಕ್ಷ ರಮೇಶ್, ತಾಲೂಕು ಕಾರ್ಯಾಧ್ಯಕ್ಷ ಅಶೋಕ್, ಪ್ರಧಾನ ಕಾರ್ಯದರ್ಶಿ ಪರಮೇಶ್, ರಾಮಚಂದ್ರನಾಯ್ಕ, ಚನ್ನಪ್ಪ, ವಾಸದೇವ್ ರೆಡ್ಡಿ ಇದ್ದರು.

ವಿದ್ಯಾರ್ಥಿಗಳಿಗೆ ಅಭಿನಂದನೆ



ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ 4x100 ರಿಲೇ ಹಾಗೂ ಥ್ರೋ ಬಾಲ್‌ನಲ್ಲಿ ಜಯಗಳಿಸಿ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾದ ಹುಣಸೂರಿನ ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳನ್ನು ಶಾಲೆ ಆಡಳಿತ ಮಂಡಳಿಯಿಂದ ಅಭಿನಂದಿಸಲಾಯಿತು.

ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ


ಕೆ.ಆರ್.ನಗರ, ಸಾಲಿಗ್ರಾಮದಲ್ಲಿ ಜೆಡಿಎಸ್‌ಗೆ ಹೆಚ್ಚು ಸ್ಥಾನ

ಮಾಜಿ ಸಚಿವ ಸಾ.ರಾ. ಮಹೇಶ್ ಪುತ್ರ ಡಾ.ಸಾ.ರಾ.ಧನುಷ್ ವಿಶ್ವಾಸ

ಕೆ.ಆರ್.ನಗರ, ಸೆ.16– ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಮುಂಬರುವ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಅತೀ ಹೆಚ್ಚು ಸ್ಥಾನ ಗೆಲ್ಲಲಿದೆ ಎಂದು ರಾಜ್ಯ ಜೆಡಿಎಸ್ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ, ಮೂಳೆ ತಜ್ಞ ಡಾ.ಸಾ.ರಾ.ಧನುಷ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಹೊರವಲಯದ ಕಗ್ಗೆರೆ ಗ್ರಾಮದಲ್ಲಿರುವ ಸಾ.ರಾ.ನಿಧಿ ಗಾರ್ಮೆಂಟ್ಸ್‌ನಲ್ಲಿ ತಾಲೂಕಿನ ತಿಪ್ಪೂರು ಗ್ರಾಪಂ ಅಧ್ಯಕ್ಷೆಯಾಗಿ ಆಯ್ಕೆಯಾದ ರಮ್ಯ ವಿಶ್ವನಾಥ್ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಮುಂಬರುವ ಗ್ರಾಪಂ ಚುನಾವಣೆಯಲ್ಲಿ ಕೆ.ಆರ್.ನಗರ ಕ್ಷೇತ್ರದ 34 ಗ್ರಾಪಂಗಳ ಪೈಕಿ 25ಕ್ಕೂ ಹೆಚ್ಚು ಗ್ರಾಪಂಗಳಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯರು ಆಯ್ಕೆಯಾಗಿ ಅಧಿಕಾರ ಹಿಡಿಯಲಿದ್ದಾರೆ ಎಂದರು.

ಜಿಪಂ, ತಾಪಂ ಚುನಾವಣಾ ಕ್ಷೇತ್ರಗಳು ವಿಂಗಡಣೆಯಾಗಿ ಮೀಸಲಾತಿ ಘೋಷಣೆಯಾದ ನಂತರ ಕ್ಷೇತ್ರದಲ್ಲಿ ಹೆಚ್ಚಾಗಿ ಪಕ್ಷ ಸಂಘಟನೆ ಮಾಡಲಾಗುವುದು ಎಂದರು.


ತಿಪ್ಪೂರು ಗ್ರಾಪಂ ಅಧ್ಯಕ್ಷೆ ರಮ್ಯ ಅವರನ್ನು ಡಾ.ಸಾ.ರಾ.ಧನುಷ್ ಅಭಿನಂದಿಸಿದರು.

ಇಂದು ನಡೆದ ತಿಪ್ಪೂರು ಗ್ರಾಪಂ ಅಧ್ಯಕ್ಷರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರಮ್ಯ ಅವರು ಗೆಲ್ಲಲಿದ್ದಾರೆ ಎಂದು ಜೆಡಿಎಸ್ ಬೆಂಬಲಿತ ಸದಸ್ಯರು ಹೇಳಿದ್ದರು. ಆದರೂ ಲಾಟರಿ ಮೂಲಕವೇ ಆಯ್ಕೆಯಾಗಿರುವುದು ಸಂತಸ ತಂದಿದೆ. ಆದ್ದರಿಂದ ಯಾವುದೇ ನಿರೀಕ್ಷೆ ಮಾಡದೇ ಜನರ ಕೆಲಸ ಮಾಡಿ ಜನಮನ್ನಣೆ ಗಳಿಸಿ ಎಂದು ಶುಭ ಹಾರೈಸಿದರು.

ಈ ವೇಳೆ ಯುವ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕುಚೇಲ, ಕಸಬಾ ಹೋಬಳಿ ಜೆಡಿಎಸ್ ಅಧ್ಯಕ್ಷ ಶಿವಣ್ಣ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ರಮೇಶ ನಾಯಕ್, ಗ್ರಾಪಂ ಉಪಾಧ್ಯಕ್ಷೆ ಅನಿತಾ, ಸದಸ್ಯರಾದ ಭಾರತಿ, ಶೋಭಾ, ರತ್ನಮ್ಮ, ನೀಲಯ್ಯ, ಭಾಸ್ಕರ್, ರಾಮಕೃಷ್ಣೇಗೌಡ, ಸತ್ಯನಾರಾಯಣ, ಜೆಡಿಎಸ್ ಮುಖಂಡ ಸಾಗರ್ ಸೇರಿದಂತೆ ಅನೇಕರಿದ್ದರು.

ವರ್ಷದೊಳಗೆ ಸಂಘದ ನೂತನ ಕಟ್ಟಡ ನಿರ್ಮಾಣ

ಮುಸುವಿನಕೊಪ್ಪಲು ಪಿಎಸಿಎಸ್ ಅಧ್ಯಕ್ಷ ಎಂ.ಶಿವರಾಮು

ತಿ.ನರಸೀಪುರ, ಸೆ.16– ಸಚಿವರು ಹಾಗೂ ಸಂಸದರ ಪ್ರದೇಶಾಭಿವೃದ್ಧಿ ಅನುದಾನದಿಂದ ನೆರವು ಪಡೆದು ಮುಸುವಿನಕೊಪ್ಪಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಮುಂದಿನ ವರ್ಷದೊಳಗೆ ನೂತನ ಕಟ್ಟಡ ನಿರ್ಮಿಸಲಾಗುವುದು ಎಂದು ಅಧ್ಯಕ್ಷ ಎಂ.ಶಿವರಾಮು ಭರವಸೆ ನೀಡಿದರು.

ತಾಲೂಕಿನ ಮುಸುವಿನಕೊಪ್ಪಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಮಂಗಳವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಗ್ರಾಮದಲ್ಲಿ ಸಹಕಾರ ಸಂಘಕ್ಕೆ ಈಗಾಗಲೇ ನಿವೇಶನ ಕಾಯ್ದಿರಿಸಿ, ಮುತ್ತಲವಾಡಿ ಗ್ರಾಪಂನಲ್ಲಿ ಇ–ಸ್ವತ್ತು ಮಾಡಿಸಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಿ, ಅನುದಾನ ನೀಡುವಂತೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರಿಗೆ ಮನವಿ ಸಲ್ಲಿಸಿದ್ದೇವೆ ಎಂದರು.

ಕಳೆದ 7 ವರ್ಷಗಳ ಹಿಂದೆ ಆರಂಭಿಸಿದ ಸಹಕಾರ ಸಂಘ ಹಂತ ಹಂತವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಮತ್ತಷ್ಟು ಆರ್ಥಿಕ ಸಬಲತೆ ಸಾಧಿಸಬೇಕಿದೆ. ಸಂಘದಿಂದ ಇದುವರೆವಿಗೂ ಈ ಭಾಗದ ರೈತರಿಗೆ 3.34 ಕೋಟಿ ಸಾಲ ವಿತರಿಸಿದ್ದೇವೆ. ಸಹಕಾರಿ ಸಂಘದ ನಿರ್ವಹಣೆಗೆ ಈ ಸಾಲದ ಪ್ರಮಾಣ ಸಾಲದು. ಗ್ರಾಪಂ ವ್ಯಾಪ್ತಿಯಲ್ಲಿ ಹೆಚ್ಚಿನ ರೈತರಿಗೆ ಸದಸ್ಯತ್ವ ನೀಡುವ ಮೂಲಕ ನಿರ್ದೇಶಕರೆಲ್ಲರೂ ಸೇರಿ ಸಂಘವನ್ನು ಬಲಿಷ್ಠವಾಗಿ ಕಟ್ಟುತ್ತೇವೆ ಎಂದರು.


ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಎಂ.ಶಿವರಾಮು ಉದ್ಘಾಟಿಸಿದರು.

ಸಂಘದ ಸಿಇಓ ಎನ್.ರಾಜು ಮಾತನಾಡಿ, ಸಹಕಾರ ಸಂಘಕ್ಕೆ 2024–25ನೇ ಸಾಲಿನಲ್ಲಿ 41,800 ರೂ. ನಿವ್ವಳ ಲಾಭ ಬಂದಿದ್ದು, 2025–2026ನೇ ಸಾಲಿಗೆ 10 ಲಕ್ಷ ರೂ.ಗಳ ಅಂದಾಜು ಬಜೆಟ್ ರೂಪಿಸಿದ್ದು, 1.14 ಲಕ್ಷ ಲಾಭ ನಿರೀಕ್ಷಿಸಲಾಗಿದೆ ಎಂದರು.

ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎನ್.ಎಸ್.ಶೇಖರ್ ಮಾತನಾಡಿದರು. ನಿರ್ದೇಶಕರಾದ ಎಂ.ಚಂದ್ರಪ್ಪ, ಪುಟ್ಟಮಾದಯ್ಯ, ಸಿ.ಶಿವಣ್ಣ, ಚಿಕ್ಕಮಾದನಾಯಕ, ಎನ್.ಮಹೇಶ್, ಆರ್.ಶಿವಕುಮಾರಸ್ವಾಮಿ, ನಿಂಗರಾಜು, ಶಾಂತಮ್ಮ, ಕಮಲಮ್ಮ, ಕಚೇರಿ ಸಿಬ್ಬಂದಿ ವಿ.ಬಿ.ನಿರ್ಮಲ, ಮುಖಂಡರಾದ ಸಿ.ನಾಗರಾಜು, ಕಾಳಪ್ಪ, ಸಿ.ರವಿಶಂಕರ್, ಹೊರಳಹಳ್ಳಿ ಮಹದೇವಯ್ಯ ಇತರರಿದ್ದರು.

ಪಂಜಿನ ಕವಾಯತು ಪ್ರದರ್ಶನ

ಈ ಬಾರಿ ರೋಚಕ ಬೈಕ್ ಸ್ಟಂಟ್ ಇಲ್ಲ

● ಪರ್ಯಾಯವಾಗಿ ಹೊಸದರ ಸೇರ್ಪಡೆಗೆ ಚಿಂತನೆ ● ಸಾಹಸಮಯ ಬೈಕ್ ಸವಾರಿ ಕಣ್ತುಂಬಿಕೊಳ್ಳಲು ಕಾತುರ ಹೊಂದಿರುವವರಿಗೆ ನಿರಾಸೆ

ಮೈಸೂರು,ಸೆ.16(ಪಿಎಂ)– ಈ ಬಾರಿಯ ದಸರಾ ಪ್ರಯುಕ್ತದ ಪಂಜಿನ ಕವಾಯತು ಪ್ರದರ್ಶನ ದಲ್ಲಿ ರೋಚಕ–ಚಿತ್ತಾಕರ್ಷಕ ಬೈಕ್ ಸ್ಟಂಟ್ ಕಾಣ ಸಿಗದು. ಇದನ್ನು ಕೈಬಿಡಲು ನಿರ್ಧರಿಸಲಾಗಿದ್ದು, ಪರ್ಯಾಯ ವಾಗಿ ಹೊಸದೊಂದು ಸೇರ್ಪಡೆ ಮಾಡಲು ಚಿಂತನೆ ನಡೆಸಲಾಗುತ್ತಿದೆ.

ಬೈಕ್‌ಗಳಲ್ಲಿ ಸಿಸರ್ ಕ್ರಾಸಿಂಗ್, ಫೈರ್ ಜಂಪ್ ಸೇರಿದಂತೆ ಅನೇಕ ಸಾಹಸಮಯ ಕಸರತ್ತುಗಳ ಆಕರ್ಷಕ ಹಾಗೂ ಮನ ಮೋಹಕ ಪ್ರದರ್ಶನ ಕಂಡು ಬೆರಗಾ ಗುತ್ತಿದ್ದವರಿಗೆ ಇದರಿಂದ ನಿರಾಸೆಯಾಗಲಿದೆ. ವಿಜಯ ದಶಮಿ ಮೆರವಣಿಗೆ ಬಳಿಕ ನಡೆ ಯುವ ಪಂಜಿನ ಕವಾಯತು ಪ್ರದರ್ಶನ ದಲ್ಲಿ ಹತ್ತು ಹಲವು ಆಕರ್ಷಕ ಕಾರ್ಯ ಕ್ರಮಗಳ ಜೊತೆಗೆ ಬೈಕ್ ಸ್ಟಂಟ್ ಉಸಿರು ಬಿಗಿಹಿಡಿದು ನೋಡುವ ಕಸರತ್ತಿನ ಪ್ರದರ್ಶನ.

ದಶಕಗಳಲ್ಲಿ ಇದೇ ಮೊದಲ ಬಾರಿಗೆ ವಿಜಯದಶಮಿ ದಿನದಂದು ಬನ್ನಿಮಂಟಪ ದಲ್ಲಿ ನಡೆಯುವ ಪಂಜಿನ ಕವಾಯತು ಪ್ರದರ್ಶನದಲ್ಲಿ ಮಿಲಿಟರಿ ಪೊಲೀಸ್ ಪಡೆಯ ಮೋಟಾರ್‌ಸೈಕಲ್ ಸ್ಟಂಟ್ ಕೈಬಿಡಲಾಗಿದೆ. ಮಿಲಿಟರಿ ಪೊಲೀಸ್ ಪಡೆಯ 'ಶ್ವೇತ ಅಶ್ವ (ಶ್ವೇತ ವರ್ಣದ ಕುದುರೆ)' ತಂಡವು ಹಲವು ವರ್ಷ ಗಳಿಂದ ದಸರಾ ಪಂಜಿನ ಕವಾಯತು ಪ್ರದರ್ಶನದಲ್ಲಿ ರೋಚಕ ಬೈಕ್ ಸಾಹಸ ಪ್ರದರ್ಶನ ನೀಡುತ್ತಾ ಬಂದಿದ್ದು, ಈ ತಂಡದ ಅತ್ಯಾಕರ್ಷಕ ಪ್ರದರ್ಶನ ಕಣ್ತುಂಬಿಕೊಳ್ಳಲು ಸಾಕಷ್ಟು ಪ್ರೇಕ್ಷಕರು ಪ್ರತಿವರ್ಷ ಎದುರು ನೋಡುವುದೂ ಇದೆ.



ಕಳೆದ ವರ್ಷ ಪಂಜಿನ ಕವಾಯತು ಪ್ರದರ್ಶನದಲ್ಲಿ ಮಿಲಿಟರಿ ಪೊಲೀಸ್ ಪಡೆಯ 'ಶ್ವೇತ ಅಶ್ವ (ಶ್ವೇತ ವರ್ಣದ ಕುದುರೆ)' ತಂಡವು ಪಿರಮಿಡ್ ವಿನ್ಯಾಸದ ಸಾಹಸ ಪ್ರದರ್ಶನ ಮಾಡಿದ್ದ ದೃಶ್ಯ

ಸದರಿ ಬೈಕ್ ಸ್ಟಂಟ್ ಕೈಬಿಟ್ಟಿರುವುದನ್ನು ದಸರಾ ಪಂಜಿನ ಕವಾಯತು ಉಪಸಮಿತಿ ಮೂಲಗಳು ದೃಢಪಡಿ ಸಿವೆ. ಇದಕ್ಕೆ ಪರ್ಯಾಯವಾಗಿ ಹೊಸ ಪ್ರದರ್ಶನ ವೊಂದನ್ನು ಪರಿಚಯಿಸಲು ನಿರ್ಧರಿಸ ಲಾಗಿದೆ ಎಂದು ಹೇಳಲಾಗಿದೆ. ಕಳೆದ ವರ್ಷ ಪಂಜಿನ ಕವಾಯತು ಪ್ರದರ್ಶನದಲ್ಲಿ ಕಾರ್ಯಕ್ರಮಗಳ ವಿಸ್ತಾರವಾದ ವೇಳಾ ಪಟ್ಟಿಯ ಕಾರಣ ಪ್ರದರ್ಶನ ಮುಕ್ತಾಯ ಗೊಳ್ಳಲು ಹೆಚ್ಚಿನ ಸಮಯವಾಯಿತು. ಈ ಕಾರಣದಿಂದ ಸದರಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ. ಪಂಜಿನ ಕವಾಯತು ಪ್ರದರ್ಶನವನ್ನು ಸುಗಮವಾಗಿ ನಡೆಸುವ ಜೊತೆಗೆ ಇದಕ್ಕೆ ಪರ್ಯಾಯ ವಾಗಿ ಹೊಚ್ಚಹೊಸ ಪ್ರದರ್ಶನ ಸೇರ್ಪಡೆ ಮಾಡಲು ಉದ್ದೇಶಿಸಲಾಗಿದೆ ಎನ್ನಲಾಗಿದೆ.

ಬೆಂಗಳೂರಿನಲ್ಲಿ ನೆಲೆಗೊಂಡಿರುವ ಮಿಲಿಟರಿ ಪೊಲೀಸ್ ಪಡೆಯ 'ಶ್ವೇತ ಅಶ್ವ' ತಂಡವು ತನ್ನ ಬೈಕ್ ಸ್ಟಂಟ್ ಮೂಲಕ ಜನಸಮೂಹವನ್ನು ಆಕರ್ಷಿಸುವ ಸಾಹಸವನ್ನು ಕರಗತ ಮಾಡಿಕೊಂಡಿದೆ. 29 ರಾಯಲ್ ಎನ್‌ಫೀಲ್ಡ್ ಹಾಗೂ ನಾಲ್ಕು ಹೀರೋ ಎಕ್ಸ್‌ಪಲ್ಸ್ ಪ್ರೊ ಬೈಕ್‌ಗಳು ಸೇರಿದಂತೆ ಒಟ್ಟು 33 ಮೋಟಾರ್ ಸೈಕಲ್‌ಗಳಲ್ಲಿ ಕುಳಿತು, ಮಲಗಿ ಹೀಗೆ ನಾನಾ ಭಂಗಿಗಳಲ್ಲಿ ಈ ಸಿಬ್ಬಂದಿ ಅತ್ಯಂತ ಶಿಸ್ತು, ಆಕರ್ಷಕ, ಧೈರ್ಯ ಮತ್ತು ಕೌಶಲ್ಯದೊಂದಿಗೆ ಅದ್ಭುತ ಸಾಹಸ ಮೆರೆ ಯುವ ಕಲೆ ಕರಗತ ಮಾಡಿಕೊಂಡಿದೆ.

ಸಿಸರ್ ಕ್ರಾಸಿಂಗ್, ಪ್ಯಾರಲಲ್ ಕ್ರಾಸಿಂಗ್, ಫೋರ್ತ್ (4) ಕ್ರಾಸಿಂಗ್, ಸ್ಪೀಡ್ ಕ್ರಾಸಿಂಗ್, ವಿ (ಇಂಗ್ಲಿಷ್ ವಿ ಅಕ್ಷರ) ಕ್ರಾಸಿಂಗ್, ಚೆಸ್ಟ್ ಜಂಪ್, ಪೆಟ್ರೋಲ್ ಟ್ಯಾಂಕ್ ವಿತ್ ಕ್ಯಾರಿಯರ್ ಬೈಕ್ ರೈಡ್, ಒನ್ ಲೆಗ್ ರೈಡ್, ರೈಡ್ ವಿತ್ ಲ್ಯಾಡರ್, ಫೈರ್ ಜಂಪ್ ಸೇರಿದಂತೆ ಮೊದಲಾದ ಮೈಜುಮ್ ಎನ್ನಿಸುವಂತಹ ಸಾಹಸಮಯ ಕಸರತ್ತು ಪ್ರದರ್ಶನದಲ್ಲಿ ಈ ತಂಡವು ಪರಿಣತಿ ಹೊಂದಿದೆ.

ಚಿನ್ನಯ್ಯನಿಗೆ ಬುರುಡೆ ಪ್ರಕರಣದಲ್ಲಿ ಜೈಲೇ ಗತಿ



ಮಂಗಳೂರು: ಧರ್ಮಸ್ಥಳ ಪ್ರಕರಣದ ತನಿಖೆ ದಿನದಿಂದ ದಿನಕ್ಕೆ ಒಂದೊಂದು ತಿರುವು ಪಡೆದುಕೊಳ್ಳುತ್ತಿದೆ. ಎಸ್‌ಐಟಿ ಅಧಿಕಾರಿಗಳು, ನೇತ್ರಾವತಿ ಸ್ನಾನಘಟ್ಟದ ಬಳಿಯ ಬಂಗ್ಲೆಗುಡ್ಡೆ ಕಾಡಿನಲ್ಲಿ ಶೋಧ ಕಾರ್ಯಾ ಚರಣೆ ನಡೆಸಲು ಮುಂದಾಗಿದೆ ಎನ್ನಲಾಗುತ್ತಿದೆ. ಈ ಮಧ್ಯೆ ಧರ್ಮ ಸ್ಥಳದ ಸುತ್ತಮುತ್ತ ನೂರಾರು ಶವಗಳನ್ನು ಹೂತಿದ್ದೇನೆ ಎಂದು ಹೇಳಿಕೊಂಡು ಬಂದಿದ್ದ ಚಿನ್ನಯ್ಯ ಸದ್ಯ ಜೈಲುವಾಸದಲ್ಲಿದ್ದಾನೆ. ಸಾಕ್ಷಿದಾರ ನಾಗಿ ಬಂದಿದ್ದ ಚಿನ್ನಯ್ಯ ಇದೀಗ ಪೊಲೀಸರ ಅತಿಥಿಯಾಗಿದ್ದಾನೆ. ಇನ್ನು ಬುರುಡೆ ಕೇಸ್‌ನಲ್ಲಿ ಆರೋಪಿಯಾಗಿರುವ ಚಿನ್ನಯ್ಯ ಜಾಮೀನಿಗಾಗಿ ಅರ್ಜಿಯನ್ನೂ ಸಲ್ಲಿಸಿದ್ದು, ವಿಚಾರಣೆ ನಡೆಸಿದ ನ್ಯಾಯಾಲಯ ಜಾಮೀನು ಅರ್ಜಿಯನ್ನು ವಜಾ ಮಾಡಿದೆ.

ಜೈಲುವಾಸವೇ ಗತಿ: ಆರೋಪಿ ಚಿನ್ನಯ್ಯನ ಜಾಮೀನು ಅರ್ಜಿ ತಿರಸ್ಕೃತವಾಗಿದ್ದು, ಈ ಪರಿಣಾಮ ಬುರುಡೆ ಕೇಸ್ ಆರೋಪಿ ಚಿನ್ನಯ್ಯನಿಗೆ ಜೈಲುವಾಸವೇ ಗತಿ. ಜಾಮೀನು ಅರ್ಜಿ ವಜಾ ಮಾಡಿ ಬೆಳ್ತಂಗಡಿ ತಾಲೂಕು ನ್ಯಾಯಾಲಯದ ಹೆಚ್ಚುವರಿ ವ್ಯವಹಾರಿಕ ಮತ್ತು ಪ್ರಥಮ ದರ್ಜೆ ನ್ಯಾಯಾಧೀಶ ವಿಜಯೇಂದ್ರ ಆದೇಶ ಹೊರಡಿಸಿದ್ದಾರೆ.

ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆ

ಮೈಸೂರು, ಸೆ.16– ಮೈಸೂರು ದಸರಾ ಮಹೋತ್ಸವ–2025 ರೈತ ದಸರಾ ಉಪಸಮಿತಿ



ವತಿಯಿಂದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯನ್ನು ಸೆ.26 ಮತ್ತು 27 ರಂದು ಬೆಳಗ್ಗೆ 6.30 ರಿಂದ ಸಂಜೆ 5.30 ರವರೆಗೆ ಜೆ.ಕೆ. ಮೈದಾನ ರೈಲ್ವೆ ಸ್ಟೇಷನ್ ಹತ್ತಿರ ಆಯೋಜಿಸಲಾಗಿದೆ. 1ನೇ ಬಹುಮಾನ 1,00,000, 2ನೇ ಬಹುಮಾನ 80,000, 3ನೇ ಬಹುಮಾನ 60,000, 4ನೇ ಬಹುಮಾನ 40,000 ನೀಡಲಾಗು ವುದು. ನೋಂದಣಿ ಮಾಡಿಕೊಳ್ಳಲು ನಗರ ಪಶು ಆಸ್ಪತ್ರೆ, ಮೈಸೂರು ಇಲ್ಲಿ ಸಂಪರ್ಕಿಸಬಹುದು ಎಂದು ರೈತ ದಸರಾ ಉಪಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಯುಜಿಸಿ–ನಾನ್ ಯುಜಿಸಿ ತಾರತಮ್ಯವಿಲ್ಲದೆ ಅತಿಥಿ ಉಪನ್ಯಾಸಕರ ಬಿಕ್ಕಟ್ಟು ನಿವಾರಣೆಗೆ ಆಗ್ರಹ

ಮೈಸೂರಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭ

ಮೈಸೂರು, ಸೆ.16(ಎಂಕೆ)– ಅತಿಥಿ ಉಪನ್ಯಾಸಕರ ಬಿಕ್ಕಟ್ಟನ್ನು ಸರ್ಕಾರದ ಹಂತದಲ್ಲೇ ಯುಜಿಸಿ ಮತ್ತು ನಾನ್–ಯುಜಿಸಿ ಎಂಬ ತಾರತಮ್ಯ ಮಾಡದೇ ನಿರ್ಣಯ ಕೈಗೊಳ್ಳುವಂತೆ ಆಗ್ರಹಿಸಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸ ಕರ ರಾಜ್ಯ ಸಮನ್ವಯ ಸಮಿತಿ ಮೈಸೂರು ವಿಭಾಗದ ವತಿಯಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು, 'ಅತಿಥಿ ಉಪನ್ಯಾಸಕರ ಸೇವೆ ಸಕ್ರಮಗೊಳಿಸಿ, ನಮ್ಮ ಬದುಕನ್ನು ಹಸನು ಗೊಳಿಸಿ', ಯುಜಿಸಿ, ನಾನ್ ಯುಜಿಸಿ ತಾರತಮ್ಯ ಬೇಡ' ಎಂಬಿತ್ಯಾದಿ ಪೋಸ್ಟರ್ ಗಳನ್ನಿಡಿದು ಜಮಾಯಿಸಿದ ಅತಿಥಿ ಉಪನ್ಯಾಸಕರು, ಸರ್ಕಾರದ ಮಟ್ಟದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿನ ಬಿಕ್ಕಟ್ಟನ್ನು ಪರಿಹರಿಸುವಂತೆ ಆಗ್ರಹಿಸಿದರು.

ರಾಜ್ಯದ 432 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 11 ಸಾವಿರ ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದು, ಇವರಲ್ಲಿ 5,623 ಮಂದಿ ಯುಜಿಸಿ ಅರ್ಹತೆ ಪಡೆದಿದ್ದರೆ, ಉಳಿದ 5,353 ಮಂದಿ ನಾನ್–ಯುಜಿಸಿ ಉಪನ್ಯಾಸಕರಿದ್ದಾರೆ. ಹಲವರು ಎಂಫಿಲ್ ಪದವಿಯನ್ನೂ ಪಡೆದವರಿದ್ದಾರೆ.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ಮೈಸೂರು ವಿಭಾಗದ ವತಿಯಿಂದ ಮಂಗಳವಾರ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಯಿತು.

ಹಾಗಾಗಿ ಹತ್ತಾರು ವರ್ಷಗಳಿಂದ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಸೇವಾ ಹಿರಿತನದ ಆಧಾರದ ಮೇಲೆ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಇದುವರೆಗೂ ಯುಜಿಸಿ ನಿಯಮಾವಳಿ ಗಳಲ್ಲಿ ಸೂಚಿಸಿರುವಂತೆ ಕಾಯಂ ಅಧ್ಯಾ ಪಕರುಗಳಿಗೆ ನೀಡಿರುವ ಯಾವುದೇ ರೀತಿಯ ಸವಲತ್ತುಗಳನ್ನು ಪಡೆಯದೇ ತಾತ್ಕಾಲಿಕ ನೌಕರರಾಗಿಯೇ, ಕನಿಷ್ಠ ಗೌರವಧನ ಪಡೆದು ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದರೂ ಸೂಕ್ತ ಸೌಲಭ್ಯ ನೀಡುತ್ತಿಲ್ಲ. ರಾಜ್ಯದ ಶೇ.70 ರಷ್ಟು ಸರ್ಕಾರಿ ಪದವಿ ಕಾಲೇಜುಗಳು ಅತಿಥಿ ಉಪನ್ಯಾಸಕರ ಸೇವೆ ಅವಲಂಬಿಸಿವೆ. ಕಳೆದ ಒಂದು ತಿಂಗಳಿಂದ ಸರಿಯಾಗಿ ವಿದ್ಯಾರ್ಥಿ ಗಳಿಗೆ ಪಾಠ ಪ್ರವಚನಗಳು ನಡೆಯುತ್ತಿಲ್ಲ. ಹಾಗಾಗಿ ತ್ವರಿತವಾಗಿ ಅತಿಥಿ ಉಪನ್ಯಾಸಕರ ನೇಮಕಾತಿಯ ಬಿಕ್ಕಟ್ಟನ್ನು ಬಗೆಹರಿಸಬೇಕು ಎಂದು ಆಗ್ರಹಿಸಿದರು.

ಸಂಘಟನೆ ರಾಜ್ಯಾಧ್ಯಕ್ಷ ಹೆಚ್. ಸೋಮಶೇಖರ್ ಶಿಮೊಗ್ಗಿ, ರಾಜೇಶ್ ಕುಮಾರ್, ನಾಗರಾಜು, ರವೀಂದ್ರ, ಶಾಮಲಾ, ದೀಪಾ ಮತ್ತಿತರರಿದ್ದರು.

ಆನ್‌ಲೈನ್ ಬೆಟ್ಟಿಂಗ್ ಆ್ಯಪ್ ಪ್ರಕರಣ: ಯುವರಾಜ್ ಸಿಂಗ್, ರಾಬಿನ್ ಉತ್ತಪ್ಪಗೆ ಇಡಿ ಸಮನ್ಸ್



ನವದೆಹಲಿ: ಆನ್‌ಲೈನ್ ಬೆಟ್ಟಿಂಗ್‌ಗೆ ಸಂಬಂ ಧಿಸಿದ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಕ್ರಿಕೆಟಿಗರಾದ ರಾಬಿನ್ ಉತ್ತಪ್ಪ ಯುವರಾಜ್ ಸಿಂಗ್ ಮತ್ತು ನಟ ಸೋನು ಸೂದ್ ಅವರಿಗೆ ಜಾರಿ ನಿರ್ದೇ ಶನಾಲಯ (ಇಡಿ) ಸಮನ್ಸ್ ಜಾರಿ ಮಾಡಿದೆ.

1 ಎಕ್ಸ್ ಬೆಟ್ ಎಂಬ ಪ್ಲಾಟ್‌ಫಾರ್ಮ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ಮುಂದಿನ ವಾರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ತಮ್ಮ ಹೇಳಿಕೆಗಳನ್ನು ದಾಖಲಿಸುವಂತೆ ಉತ್ತಪ್ಪ (39), ಯುವರಾಜ್ ಸಿಂಗ್ (43) ಮತ್ತು ಸೋನು ಸೂದ್ (52) ಅವರಿಗೆ ಸೂಚಿಸ ಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರಲ್ಲಿದ್ದ ಆರು 'ಅಂಬಾರಿ' ಬಸ್‌ಗಳಲ್ಲಿ ಒಂದು ತುಮಕೂರು ನಗರಕ್ಕೆ ಹಸ್ತಾಂತರ

ಮೈಸೂರು,ಸೆ.16(ಆರ್‌ಕೆ)– ಮೈಸೂ ರಿನಲ್ಲಿ ಕಾರ್ಯಾಚರಿಸುತ್ತಿದ್ದ ಕೆಎಸ್‌ಟಿ ಡಿಸಿಯ 6 ಅಂಬಾರಿ ಡಬ್ಬಲ್ ಡೆಕ್ಕರ್ ಬಸ್‌ಗಳ ಪೈಕಿ ಒಂದನ್ನು ತುಮಕೂರು ನಗರದ ವಿದ್ಯುತ್ ದೀಪಾಲಂಕಾರ ವೀಕ್ಷಿಸಲು ಕಳಿಸಲಾಗುತ್ತಿದೆ.

ಗೃಹ ಸಚಿವ ಡಾ. ಜಿ.ಪರಮೇಶ್ವರ್, ಇದೇ ಮೊದಲು ತಮ್ಮ ತವರು ಜಿಲ್ಲಾ ಕೇಂದ್ರ ತುಮಕೂರು ನಗರದಲ್ಲಿ ದಸರಾ ವೇಳೆ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡುತ್ತಿರುವುದರಿಂದ ಸೆಪ್ಟೆಂಬರ್ 21 ರಿಂದ ಅಕ್ಟೋಬರ್ 3 ರವರೆಗೆ ಒಂದು ಅಂಬಾರಿ ಡಬ್ಬಲ್ ಡೆಕ್ಕರ್ ಓಪನ್ ಬಸ್ ಅನ್ನು ಒದಗಿಸುವಂತೆ ತುಮಕೂರು ಜಿಲ್ಲಾ ಧಿಕಾರಿಗಳ ಮೂಲಕ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (KSTDC) ನಿಯಮಿತದ ವ್ಯವಸ್ಥಾಪಕ



ಅಂಬಾರಿ ಬಸ್

ನಿರ್ದೇಶಕರಿಗೆ ಪತ್ರ ಬರೆದು ಕೋರಿದ್ದರು.

ಈ ಹಿಂದೆ ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಡಾ. ಕೆ.ವಿ.ರಾಜೇಂದ್ರ (ಈಗ ಬೆಂಗಳೂರು ಪಶ್ಚಿಮ ಬಿಬಿಎಂಪಿ ಆಯುಕ್ತರು) ಅವರು ಈ ಪತ್ರಕ್ಕೆ ಸ್ಪಂದಿಸಿ ಬಸ್ ಒದಗಿಸುವ ನಿರ್ಧಾರಕ್ಕೆ ಬಂದಿದ್ದು, ಈ ಹಿನ್ನೆಲೆಯಲ್ಲಿ ಹಾಲಿ ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಕುಮಾರ್ ಮಿಶ್ರಾ ಅನುಮೋದನೆ ನೀಡಿದ್ದಾರೆ.

ಮೈಸೂರು ನಗರದಲ್ಲಿ ಒಟ್ಟು 6 ಡಬ್ಬಲ್ ಡೆಕ್ಕರ್ ಬಸ್‌ಗಳಿದ್ದು ದಸರಾ ಸಂದರ್ಭ ದಲ್ಲಿ ಮಾತ್ರ ಎಲ್ಲಾ ಬಸ್‌ಗಳನ್ನು ಬಳಸಿ ಕೊಳ್ಳಲಾಗುತ್ತಿತ್ತು. ಉಳಿದಂತೆ ವರ್ಷ ಪೂರ್ತಿ ಕೇವಲ ಒಂದು ಬಸ್ ಮಾತ್ರ ಅರಮನೆ ದಕ್ಷಿಣ ದ್ವಾರದಿಂದ ನಗರ ಪ್ರದಕ್ಷಿಣೆ ಮಾಡಿಸುತ್ತದೆ. ಹೆಚ್ಚುವರಿ 5 ಬಸ್‌ಗಳನ್ನು ಬನ್ನಿಮಂಟಪದ ಕೆಎಸ್‌ಆರ್ ಟಿಸಿ ಬಸ್ ಡಿಪೋ ಆವರಣದಲ್ಲಿ ನಿಲು ಗಡೆ ಮಾಡಲಾಗುತ್ತದೆ. ಆರು ಬಸ್ ಗಳಿಗೂ ದಸರಾ ಸಂದರ್ಭ ಸಾರ್ವಜನಿ ಕರು ಹಾಗೂ ಪ್ರವಾಸಿಗರಿಂದ ಹೆಚ್ಚಿನ ಬೇಡಿಕೆ ಇರುತ್ತದೆ. ಇದೀಗ ಒಂದು ಬಸ್ ಅನ್ನು ತುಮಕೂರಿಗೆ ಕಳುಹಿಸುತ್ತಿರುವುದ ರಿಂದ ಮೈಸೂರಿನಲ್ಲಿ ಒತ್ತಡ ನಿಭಾಯಿ ಸಲು ಅಧಿಕಾರಿಗಳು ಹೆಣಗಬೇಕಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಿರಾಯ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿರಾಯ್(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾಘಿ–4 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಘಾಟಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಘಾಟಿ (ತೆ)	4 ಪ್ರದರ್ಶನಗಳು
ಸಂಗಂ	
ಮಿರಾಯ್ (ತೆ)	4 ಪ್ರದರ್ಶನಗಳು
ಲಿಡೋ	
ಜಂಬೋ ಸರ್ಕಸ್(ಕ) + ಸನ್ ಆಫ್ ಮುತ್ತಣ್ಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಿದ್ರಾದೇವಿ ನೆಕ್ಸ್ಟ್ ಡೋರ್(ಕ) + ರಾಮನಗರ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

DRC CINEMAS


ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೀಡಾಡಿ ಜಾನುವಾರುಗಳ ಉಪಟಳಕ್ಕೆ ಕಡಿವಾಣ ಹಾಕಲು ದಂಡ ಹೆಚ್ಚಳ

● 123 ಜಾನುವಾರು ವಶಕ್ಕೆ ಪಡೆದು 62,500 ರೂ. ದಂಡ ಸಂಗ್ರಹ ● 4ನೇ ಬಾರಿಯೂ ಎಚ್ಚೆತ್ತುಕೊಳ್ಳದಿದ್ದರೆ ಪಿಂಜರಾಪೋಲ್‌ಗೆ ಹಸ್ತಾಂತರ



ಮೈಸೂರು, ಸೆ.16(ಬಿಎಲ್‌ಯು, ಆರ್‌ಕೆ, ಕೆಎಸ್)– ಹಸು–ಕರು, ಎಮ್ಮೆ, ಕುದುರೆ ಸೇರಿದಂತೆ ಬೀಡಾಡಿ ಜಾನು ವಾರುಗಳ ರಸ್ತೆಗಳಲ್ಲಿ ಬಿಟ್ಟು ಸಾರ್ವಜನಿಕ ರಿಗೆ ತೊಂದರೆ ಉಂಟು ಮಾಡುವು ದನ್ನು ನಿಯಂತ್ರಿಸಲು ಮೈಸೂರು ನಗರ ಪಾಲಿಕೆ ಅವುಗಳ ಮಾಲೀಕರಿಗೆ ವಿಧಿ ಸುತ್ತಿದ್ದ ದಂಡವನ್ನು ಹೆಚ್ಚಳ ಮಾಡಿದೆ.

ರಸ್ತೆಯಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ ಹಸು–ಕರು, ಕುದುರೆ, ಎಮ್ಮೆ ಸೇರಿದಂತೆ ಇತರೆ ಪ್ರಾಣಿಗಳನ್ನು ಪಾಲಿಕೆ ಯಿಂದ ವಶಕ್ಕೆ ಪಡೆದು ನಗರದ ವಿದ್ಯಾರಣ್ಯ ಪುರಂನಲ್ಲಿರುವ ಸಿವೇಜ್ ಫಾರಂ ಆವ ರಣದಲ್ಲಿ ಕೂಡಿ ಹಾಕಲಾಗುತ್ತಿತ್ತು. ಇವುಗಳನ್ನು ಬಿಡಿಸಿಕೊಳ್ಳಲು ಬಂದ ಮಾಲೀಕರಿಗೆ 500 ರೂಪಾಯಿ ದಂಡ ವಿಧಿಸಲಾಗುತ್ತಿತ್ತು.

ದಂಡ ತೆತ್ತು ಬಿಡಿಸಿಕೊಂಡು ಹೋಗು ತ್ತಿದ್ದ ಮಾಲೀಕರು ಮತ್ತೆ ಅವುಗಳ ರಸ್ತೆಗೆ ಬಿಡುತ್ತಿದ್ದರು. ಈ ಹಿನ್ನೆಲೆ ಪುನರಾ ವರ್ತಿತ ಉಲ್ಲಂಘನೆಗಳಿಗೆ ಹೆಚ್ಚಿನ ದಂಡ ವಿಧಿಸಲಾಗುತ್ತಿದೆ. ಈ ಮೂಲಕ ಬೀಡಾಡಿ ಸಾಕುಪ್ರಾಣಿಗಳ ಉಪಟಳಕ್ಕೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ.

ನಗರಪಾಲಿಕೆಯ ಆಡಳಿತಾಧಿ ಕಾರಿಗಳ ಅಧ್ಯಕ್ಷತೆಯಲ್ಲಿ ಜುಲೈ 30ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ದಂಡ ಹೆಚ್ಚಿಸುವ ನಿರ್ಧಾರ ಕೈಗೊಳ್ಳ ಲಾಗಿತ್ತು. ಪರಿಷ್ಕೃತ ದಂಡದಲ್ಲಿ ಮೊದಲ ಬಾರಿ 500 ರೂಪಾಯಿ, ಮೊದಲ ಬಾರಿ ಪುನರಾವರ್ತನೆಯಾದಾಗ 1,000 ರೂಪಾಯಿ ಹಾಗೂ ಮೂರನೆ ಬಾರಿಗೆ 1,500 ರೂಪಾಯಿ ದಂಡ ವಿಧಿಸಲಾಗುತ್ತಿದೆ.

ನಾಲ್ಕನೆ ಬಾರಿ ನಿಯಮ ಉಲ್ಲಂಘನೆ ಮಾಡಿದ ಜಾನುವಾರುಗಳನ್ನು ನೇರವಾಗಿ ಪಿಂಜರಾಪೋಲ್ ಸೊಸೈಟಿಗೆ ಹಸ್ತಾಂತರ ಮಾಡಲು ತೀರ್ಮಾನಿಸಲಾಗಿದೆ.

ಸೆಪ್ಟೆಂಬರ್ 4ರಿಂದ 15ರವರೆಗೆ ಒಟ್ಟು 123 ಜಾನುವಾರುಗಳನ್ನು ಹಿಡಿದು 62,500 ರೂಪಾಯಿ ದಂಡ ಸಂಗ್ರಹ ಮಾಡಲಾಗಿದೆ ಎಂದು ನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರಲ್ಲಿ ಪೌರ ಕಾರ್ಮಿಕರ ದಿನಾಚರಣೆ

ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕಲ್ಪಿಸುವುದ ಮರೆಯಬೇಡಿ

ಪೌರ ಕಾರ್ಮಿಕರಿಗೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಕಿವಿಮಾತು

ಮೈಸೂರು, ಸೆ.16(ಎಂಕೆ)– ಪೌರ ಕಾರ್ಮಿಕರು ನಗರದ ಅಸ್ತಿತ್ವಕ್ಕೆ ಆಧಾರ ಸ್ತಂಭವಾಗಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಹೇಳಿದರು.

ಮೈಸೂರಿನ ಕರ್ನಾಟಕ ಕಲಾಮಂದಿರ ದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಪೌರ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಒಂದು ಪುರ, ನಗರ, ರಾಜ್ಯ ಮತ್ತು ದೇಶ ಸುಂದರ ವಾಗಿ, ಸ್ವಚ್ಛವಾಗಿ ಇರಬೇಕಾದರೆ ಪೌರ ಕಾರ್ಮಿಕರ ಸೇವೆ ಅತ್ಯಗತ್ಯ ಎಂದರು.

ನಗರದ ಸ್ವಚ್ಛತೆಗಾಗಿ ತಮ್ಮನ್ನು ತಾವು ಮುಡಿಪಾಗಿಡುವ ಪೌರಕಾರ್ಮಿಕರು, ತಮ್ಮ ಆರೋಗ್ಯದ ಕಡೆಗೂ ಸ್ವಲ್ಪ ಗಮನ ಹರಿಸಬೇಕು. ಕುಟುಂಬದ ಕಾಳಜಿ ಜೊತೆಗೆ ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾ ಭ್ಯಾಸ ಕೊಡಿಸಬೇಕು. ಪೌರಕಾರ್ಮಿಕರ ಮಕ್ಕಳು ಅದೇ ವೃತ್ತಿಯನ್ನು ಮಾಡಬೇಕು ಎಂಬುದಿಲ್ಲ. ದೊಡ್ಡ ಮಟ್ಟದ ಹುದ್ದೆ ಗಳನ್ನು ಪಡೆದುಕೊಳ್ಳುವಂತಾಗಬೇಕು. ಈ ನಿಟ್ಟಿನಲ್ಲಿ ಪೌರಕಾರ್ಮಿಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನಹರಿಸಿ ಎಂದು ಸಲಹೆ ನೀಡಿದರು.



ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆಗೆ ದೊರೆತ ಸ್ವಚ್ಛ ನಗರಿ ಪ್ರಶಸ್ತಿ ಪದಕವನ್ನು ಕಲಾಮಂದಿರದವರೆಗೆ ಮೆರವಣಿಗೆಯ ಮೂಲಕ ತರಲಾಯಿತು. ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಸೇರಿದಂತೆ, ಪಾಲಿಕೆ ಅಧಿಕಾರಿ, ಸಿಬ್ಬಂದಿ, ನೂರಾರು ಪೌರಕಾರ್ಮಿಕರು ಭಾಗವಹಿಸಿದ್ದರು.

ನಮ್ಮ ಅಭ್ಯಾಸಗಳು ಕೆಟ್ಟದಾಗಿದ್ದು, ನಮ್ಮ ಮಕ್ಕಳು ಮಾತ್ರ ಸರಿಯಾದ ದಾರಿಯಲ್ಲಿ ಹೋಗಬೇಕು ಎನ್ನುವುದು ಮೂರ್ಖತನ. ಹಾಗಾಗಿ ಮೊದಲು ನಮ್ಮ ಅಭ್ಯಾಸಗಳು ಇತರರಿಗೆ ಮಾದರಿಯಾಗುವಂತಿರಬೇಕು. ನಮ್ಮ ಅಭ್ಯಾಸಗಳು ಉತ್ತಮವಾಗಿದ್ದರೆ, ನಮ್ಮ ಮುಂದಿನ ಪೀಳಿಗೆಯೂ ಉತ್ತಮ ದಾರಿಯಲ್ಲಿ ನಡೆಯಲು ಸಾಧ್ಯವಾಗುತ್ತದೆ ಎಂದರು.

ಪರಿಸರ ಕಾಪಾಡಬೇಕು: ಮೊದಲೆಲ್ಲಾ ಪ್ಲಾಸ್ಟಿಕ್ ಪದಾರ್ಥಗಳನ್ನು ಬಳಕೆ ಮಾಡು ತ್ತಿರಲಿಲ್ಲ. ಹಾಲು ತರಲು ಪಾತ್ರೆಗಳನ್ನೇ ಬಳಕೆ ಮಾಡಲಾಗುತ್ತಿತ್ತು. ಆದರೀಗ ಎಲ್ಲದಕ್ಕೂ ಪ್ಲಾಸ್ಟಿಕ್ ಬಳಕೆಯಿಂದಾಗಿ ಪರಿಸರ ಹಾನಿಗೆ ಕಾರಣರಾಗುತ್ತಿದ್ದೇವೆ. ವಿಪರ್ಯಾಸವೆಂದರೆ ನಮ್ಮಿಂದ ಸೃಷ್ಟಿಯಾದ ತ್ಯಾಜ್ಯ ಒಂದಲ್ಲ ಒಂದು ರೂಪದಲ್ಲಿ ತಮ್ಮ ಹೊಟ್ಟೆಯನ್ನೇ ಸೇರುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸನ್ಮಾನ: ಬಳಿಕ 65 ವಾರ್ಡ್‌ಗಳು ಹಾಗೂ ವಿಜಯನಗರ 4ನೇ ಹಂತ ದಿಂದ ಒಬ್ಬರು ಸೇರಿ 66 ಮಂದಿ ಪೌರ ಕಾರ್ಮಿಕರಿಗೆ 'ಬೆಸ್ಟ್ ಪೌರಕಾರ್ಮಿಕ' ಬಿರುದು ನೀಡಿ ಅಭಿನಂದಿಸಲಾಯಿತು. ಅಲ್ಲದೆ ಕಳೆದ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಪೌರಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು.

ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಕುಸುಮ ಕುಮಾರಿ, ಆರೋಗ್ಯಾಧಿಕಾರಿ ಡಾ.ವೆಂಕ ಟೇಶ್, ಉಪ ಆಯುಕ್ತರಾದ ದಾಸೇಗೌಡ, ಸಿ.ಎಸ್.ಮಂಜುನಾಥ್, ವಲಯ ಆಯುಕ್ತ ರಾದ ಮಂಜುನಾಥ್ ರೆಡ್ಡಿ, ಜಿ.ಗಿರೀಶ್, ಮಹೇಶ್ ಜಿಗಣಿ, ವೆಂಕಟರಾಮು, ಶ್ರೀಮತಿ ಪ್ರತಿಭಾ, ಶಿವಕುಮಾರ್, ಸೋಮ ಶೇಖರ್, ಸಂದೀಪ್, ಎಇಇಗಳಾದ ಮೃತ್ಯುಂ ಜಯ, ಮಧುಕರ್, ಧನುಷ್, ಪರಿಸರ ಇಂಜಿನಿ ಯರ್‌ಗಳಾದ ಮೈತ್ರಿ, ಲೋಕೇಶ್ವರಿ, ಚಿನ್ಮಯಿ, ಶ್ರೀದೇವಿ, ಮಹದೇವಮ್ಮ ಜ್ಯೋತಿ, ಕೃಷ್ಣಮೂರ್ತಿ, ನಾಝಿಯಾ, ನವೀನ್ ಮತ್ತಿತರರಿದ್ದರು.

ಪ್ರಶಸ್ತಿ ಪದಕ ಮೆರವಣಿಗೆ...!

ಹಳೆ ಜಿಲ್ಲಾಧಿಕಾರಿ ಕಚೇರಿ ಆವರಣ ದಿಂದ ಕಲಾಮಂದಿರದವರೆಗೆ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ದೇಶದ ಸ್ವಚ್ಛ ನಗರಗಳ ಪಟ್ಟಿಯಲ್ಲಿ 3–10 ಲಕ್ಷ ಜನಸಂಖ್ಯೆಯ ವಿಭಾಗ ದಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ದೊರೆತ 3ನೇ ಸ್ಥಾನದ ಪ್ರಶಸ್ತಿ ಪದಕವನ್ನು ತಲೆ ಮೇಲೆ ಹೊತ್ತು ಮೆರವಣಿಗೆಯ ಮೂಲಕ ತರಲಾ ಯಿತು. ಪಾಲಿಕೆ ಆಯುಕ್ತ ಸೇರಿದಂತೆ ನೂರಾರು ಪೌರಕಾರ್ಮಿಕರು ಮೆರ ವಣಿಗೆಯಲ್ಲಿ ಹೆಜ್ಜೆಹಾಕಿ ಗಮನ ಸೆಳೆದರು.

13 ಲಕ್ಷ ಮೌಲ್ಯದ ಮಾದಕ ವಸ್ತುಗಳ ನಾಶ

ಡ್ರಗ್ಸ್ ಡಿಸ್ಪೋಸಲ್ ಕಮಿಟಿ ಸಮ್ಮುಖದಲ್ಲಿ ಕ್ರಮ

ಮೈಸೂರು, ಸೆ.16(ಬಿಎಲ್‌ಯು)– ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆರೋಪಿಗಳಿಂದ ವಶಪಡಿಸಿ ಕೊಂಡಿದ್ದ 13 ಲಕ್ಷ ಮೌಲ್ಯದ ಗಾಂಜಾ ಸೇರಿದಂತೆ ಇತರೆ ಮಾದಕ ವಸ್ತುಗಳನ್ನು ಪೊಲೀಸರು ಇಂದು ನಾಶಪಡಿಸಿದ್ದಾರೆ.

ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಅಮಾನತು ಗೊಳಿಸಿದ್ದ ಮಾದಕ ವಸ್ತುಗಳನ್ನು ನಾಶ ಮಾಡಲು ನ್ಯಾಯಾಲಯದಿಂದ ಅನುಮತಿ ಪಡೆಯಲಾಗಿತ್ತು.

ಡ್ರಗ್ಸ್ ಡಿಸ್ಪೋಸಲ್ ಕಮಿಟಿ ಸಮ್ಮುಖ ದಲ್ಲಿ ಇಂದು ಮೈಸೂರಿನ ಗುಜ್ಜೆಗೌಡನ ಪುರ ಗ್ರಾಮದ ಇಂಟೀರಿಯರ್ ಪ್ಲಾಂಟ್‌ನಲ್ಲಿ ಪರಿಸರಕ್ಕೆ ಮಾಲಿನ್ಯವಾಗದಂತೆ ನಿಯ ಮಾನುಸಾರ ನಾಶ ಮಾಡಲಾಯಿತು.

23 ಪ್ರಕರಣಗಳಲ್ಲಿ ವಶಪಡಿಸಿ ಕೊಂಡಿದ್ದ 43.308 ಕೆ.ಜಿ. ಗಾಂಜಾ, 1 ಪ್ರಕರಣದಲ್ಲಿ 3.75 ಗ್ರಾಂ ಮೆಥಾಂಫೆಟಮೈನ್ ಮಾದಕ ವಸ್ತು ಗಳನ್ನು ನಾಶ ಮಾಡಲಾಯಿತು. ಇವುಗಳ ಅಂದಾಜು ಮೌಲ್ಯ 13,15,000 ಆಗಿದೆ.

ಮಾದಕ ವಸ್ತುಗಳನ್ನು ನಾಶ ಮಾಡುವ ಸಂದರ್ಭದಲ್ಲಿ ಡ್ರಗ್ಸ್ ಡಿಸ್ಪೋಸಲ್ ಕಮಿಟಿ ಅಧ್ಯಕ್ಷ ಕೆ.ಎಸ್.ಸುಂದರ್‌ರಾಜ್, ಡಿಸಿಪಿ ಮೊಹಮ್ಮದ್ ಶರೀಫ್ ರಾವುತರ್, ಎಸಿಪಿ ಮುಷ್ತಾಕ್ ಪಾಷ ಸೇರಿದಂತೆ ಇತರ ಅಧಿಕಾರಿಗಳು ಹಾಜರಿದ್ದರು.

ಪರಿಸರ ದೀವಿಗೆ ಸಖಿ ಸಸಿ ಕಾರ್ಯಕ್ರಮ



ಸಖಿ ಫೌಂಡೇಶನ್, ಸೂರ್ಯ ಚಾರಿಟೆಬಲ್ ಟ್ರಸ್ಟ್ ಕಚೇರಿಯಲ್ಲಿ ಆಯೋಜಿಸಿದ್ದ ಹತ್ತನೇ ಸಂಚಿಕೆಯ ಪರಿಸರ ದೀವಿಗೆ ಸಖಿ ಸಸಿ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಕಿ ಶ್ರೀಮತಿ ಚಂದ್ರಿಕಾ ಅಶೋಕ್, ಬಿಲ್ವಪತ್ರೆ ಕುರಿತು ಮಾಹಿತಿ ನೀಡಿದರು. ಸಾಹಿತಿ ಕೆ.ಟಿ.ಶ್ರೀಮತಿ, ಲೇಖಕಿ, ಸಂಸ್ಥೆಯ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಹಾಗೂ ಬಾಸುದೇವ ಸೋಮಾನಿ ಕಾಲೇಜಿನ ಪದವಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಗೀತಾ

ಇವರು 07-09-2025, ಭಾನುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 17-09-2025 ಬುಧವಾರ ಬೆಳಿಗ್ಗೆ 11-00 ಗಂಟೆಗೆ, ಮಂಟೇಗೌಡನ ಕೊಪ್ಪಲು ಸಮುದಾಯ ಭವನ, ಮಯೂರ ಸರ್ಕಲ್, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀ ರಾಜೇಶ್, ಶ್ರೀಮತಿ ಆರ್. ಅನುಷ ಮತ್ತು ಶ್ರೀ ಕೆ.ವಿ.ಘರ್ಮ, ಟಿ ಆರ್. ತಿಲಕ್ ರಾಜ್ ಶಿವಮ್ಮ ಮತ್ತು ರಾಜ್ ಗೊಬ್ಬರಗಳ ಬಂಧುಬಳಗದವರು

ಭೋಜನ: ಮಧ್ಯಾಹ್ನ 12.30 ಗಂಟೆಗೆ

8ನೇ ವರ್ಷದ ಸವಿನೆನಪು




ಶ್ರೀಮತಿ ಮಂಗಳ(ಪುಟ್ಟಸಿದ್ದಮ್ಮ)

ಮನೆ ನಂ 179, ರಮಬಾಯಿನಗರ, ಮೈಸೂರು

ಸದಾ ನಿಮ್ಮ ನೆನಪಿನಲ್ಲಿರುವ : ಶೇಷಣ್ಣ, ರಾಜಮ್ಮ, ಪೂರ್ಣಿಮಾ

3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಂ.ಎಸ್.ಪ್ರಕಾಶ್ (ಭೀಮ)

ವಿಕ್ರಾಂತ್ ಟೈರ್ ಕಾರ್ಮಿಕ ಸಂಘದ ಮಾಜಿ ಉಪಾಧ್ಯಕ್ಷರು

ಜನನ: 25.01.1962, ನಿಧನ: 17.09.2022

ಇವರ ಆತ್ಮಕ್ಕೆ ಶಾಂತಿಕೋರುವವರು : ಶ್ರೀಮತಿ ಪುಟ್ಟಮ್ಮ, ಸಂಧ್ಯಾ, ಪ್ರದೀಪ್, ಶಿಲ್ಪ, ರವಿ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.

The Best WATER PROOF Plywood

66/- PER SQ.FT.

15 YEARS CERTIFIED WARRANTY

Neem BOND PLATINUM · Neem

9148991267 | 9901291267

ಶ್ರೀ ಸಂಜೀವಿನಿ ಗೋಲ್ಡ್

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ, ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.

ಒಂದು ಗ್ರಾಂ ಚಿನ್ನಕ್ಕೆ : 10,000(24CT)

9108146123

PROPERTIES FOR SALE

Ready for Registration Prime Locations

30x40 Near Vivekananda Circle

43X93 East Facing Ashokapuram Railway Station 100Mtr Near Bedarakanappa Temple.

(Brokers Excuse)

9008111454

WANTED

Looking for Office Admin with Good Command on English & Kannada Language and Basic Computer Knowledge

Location :Saraswathipuram, Mysore

WHATSAPP YOUR RESUME 97418 35777

WANTED

Civil Engineers for a construction firm with 2-3 years' experience in Industrial / Apartment buildings. Billing/ Estimation engineers with Knowledge of AutoCAD.

Apply through:Email: mk0106780@gmail.com

DESIGNED TO MAKE EVERY SPACE BEAUTIFUL

2 BHK HOME INTERIORS @ ₹2.9 LAKHS

HOME SPACE MART

Kushalnagar • Mysuru • Bengaluru

For Site Visit : @ 91089 23123



JOCKEY FACTORY SECONDS UPTO 50% OFF*

10 am to 8 pm · Open All Days · Master / Visa Card Accepted

ONLY LEISUREWEAR, ACTIVEWEAR, KIDSWEAR, THERMALS & SOCKS

Venue in Mysore: Sri Bandanthamma Kaalamma Samudaya Bhavana, New Kanthraj Urs Road, Near Apollo Hospital, Kuvempu Nagara, Mysore - 570009

IN THE COURT OF THE HON'BLE II ADDL. DISTRICT & SESIONS JUDGE AT MYSURU

Com. O.S. No. 117 of 2022

PLAINTIFF: M/S INDIAN OVERSEAS BANK, Megalapura Branch, Mysuru Taluk and District

Versus

DEFENDANT: M/S MY COMPUTERS, rep. by its Prop. Mr. Subhash S/o Revanna, aged about 26 years, Megalapura Village, Keelanapura Post, Varuna Hobli, Mysuru Taluk-570010 & also residing at M.C. Hundi Village, Keelanapura Post, Varuna Hobli, MYSURU TALUK-570010

SUMMONS TO DEFENDANT THROUGH PAPER PUBLICATION

The Plantiff Bank had filed a Suit against the Defendant for recovery of the amount a sum of Rs. 5,58,847.47 paise together with Court cost, current and future interest at 11.05% per annum compounded with monthly rests from the date of the Suit to till the date of realization. The Defendant M/s My Computers, rep. by its Prop. Mr. Subhash is hereby required to appear before this Hon'ble court on 17.10.2025 at 11 a.m in person or through their advocate to answer the plaint averments, failing which the above case will be decided as ex-parte.

Advocate for Plantiff
Sd/- S UMESH, KAR 203/79
SHESHAIAH K, Advocates
#369, JLB Road, MYSURU-570 005
Phone: (off) 0821-2429670, 94483 42677

By order of the Court
Sd/- Chief Administrative Officer.
Hon'ble Principal District Judge Court, Mysuru.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀಮತಿ ಆರ್.ನಾಗರತ್ನ, ಕೋಂ, ಲೇಟ್.ತಮ್ಮಯ್ಯ, ಬೆಂಗಳೂರು ನಗರ, ಜಯನಗರ ಪೂರ್ವ. ಭೈರಸಂದ್ರ ಮೊದಲನೆಯ ಬ್ಲಾಕ್, ಎರಡನೆಯ ಮೇನ್, 10ನೇ ಕ್ರಾಸ್,ಮನೆ ನಂ.156/1 ನಿವಾಸಿ, ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದು, ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ. ನನ್ನ ಕಕ್ಷಿದಾರರನ್ನು ಹೊರತುಪಡಿಸಿ, ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ತರವಾದ ಮಾಲೀಕತ್ವ, ಹಕ್ಕು, ಹಿತಾಸಕ್ತಿ ಇರುವುದಿಲ್ಲ. ಅಸಲು ದಾವಾ ಸಂಖ್ಯೆ:178/2007 ರ ಮೈಸೂರಿನ 2ನೇ ಹಿಎಲ್ (ಕಿ.ಶ್ರೇ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಿ ದಾವೆಯು ಸರ್ವೆ ನಂ.60/40 ಗೆ ಸಂಬಂಧಿಸಿದಂತೆ ಉಭಯ. ಪಕ್ಷಗಾರರ ನಡುವೆ ಅಂದರೆ ನನ್ನ ಕಕ್ಷಿದಾರರು ಮತ್ತು ಶ್ರೀ ಭರತ್ ಕುಮಾರ್ ಬಿನ್ ಲೇಟ್ ಎಲ್. ವಾಸು (ಪ್ರತಿವಾದಿಗಳು) ಮತ್ತು ಲೇಟ್ ಎಲ್.ವಾಸುರವರ ವಾರಸುದಾರರ ನಡುವೆ ರಾಜಿ ಸಂಧಾನದ ಮೂಲಕ ದಿನಾಂಕ:06/01/2016 ರಂದು ಘನ ನ್ಯಾಯಾಲಯದಿಂದ ಡಿಕ್ರಿ ಮತ್ತು ಆದೇಶವು ನನ್ನ ಕಕ್ಷಿದಾರರ ಪರವಾಗಿ ಆಗಿರುತ್ತದೆ. ಹೀಗಿರುವಾಗ ನನ್ನ ಕಕ್ಷಿದಾರರುಗಳಿಗೆ ಬಲ್ಲ ಮೂಲಗಳಿಂದ ತಿಳಿದು ಬಂದಿರುವುದೇನೆಂದರೆ, ಭರತ್ ಕುಮಾರ್ ಬಿನ್ ಲೇಟ್ ಎಲ್.ವಾಸು ಮತ್ತು ಎಲ್.ವಾಸು ರವರ ವಾರಸುದಾರರು. ಚಿಕ್ಕಣ್ಣ ಮತ್ತು ಪಿ.ಚಿದಂಬರಂ ರವರುಗಳು ಗೋಲ್ಡನ್ ಸಿಟಿ ಗೃಹ ನಿರ್ಮಾಣ ಸಹಕಾರ ಸಂಘಗಳ ನೆಪದಲ್ಲಿ / ಹೆಸರಿನಲ್ಲಿ, ಸಾರ್ವಜನಿಕರಿಗೆ **Mislead** ಮಾಡಿ ಕಾನೂನು ಬಾಹಿರವಾಗಿ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹರಿಸುವಂತೆ ಪ್ರಚುರಪಡಿಸುತ್ತಿದ್ದಾರೆಂದು ತಿಳಿದು ಬಂದಿರುತ್ತದೆ. ಸಾರ್ವಜನಿಕರು ಈ ಮೇಲ್ಕಂಡ ವ್ಯಕ್ತಿ, ಸಂಸ್ಥೆಯೊಂದಿಗೆ ಯಾವುದೇ ರೀತಿಯಲ್ಲೂ ವ್ಯವಹರಿಸಬಾರದೆಂದೂ, ಹಾಗೊಂದು ವೇಳೆ ಸಾರ್ವಜನಿಕರು ವ್ಯವಹರಿಸಿದಲ್ಲಿ, ಅದಕ್ಕೆ ಅವರೇ ಖುದ್ದು ಜವಾಬ್ದಾರರೆಂದು. ನಮ್ಮ ಕಕ್ಷಿದಾರರುಗಳು ಯಾವುದೇ ರೀತಿಯಲ್ಲೂ ಹೊಣೆಗಾರರಲ್ಲವೆಂದು, ಈ ಮೂಲಕ ತಿಳಿಯಪಡಿಸಲಾಗಿದೆ

ಷೆಡ್ಯೂಲ್

ಸರ್ವೆ ನಂ.339, ಹಳೆ ನಂ.60/41, ವಿಸ್ತೀರ್ಣ 3 ಎಕರೆ 33 ಗುಂಟೆ, ಕೇರ್ಗಳ್ಳಿ ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ :ಮುದ್ದಾಮಯ್ಯರವರಿಗೆ ಸೇರಿದ ಸರ್ವೆ ನಂ.60/43 (ಪ್ರಸ್ತುತ ಮುದ್ದಾಮಯ್ಯರವರ ಸೊಸೆಯಾದ ಪಾರ್ವತಿ ನಾರಾಯಣ ರವರ ಹೆಸರಿನಲ್ಲಿ ಆರ್.ಟಿ.ಸಿ. ಇರುತ್ತದೆ) ಪಶ್ಚಿಮಕ್ಕೆ : ನಾರಾಯಣ ರವರ ಸ್ವತ್ತು ಸರ್ವೆ ನಂ.342 ಮತ್ತು ಸರ್ವೆ ನಂ.60ರ ಜಮೀನು; ಉತ್ತರಕ್ಕೆ : ಸರ್ವೆ ನಂ.60ರ ಬಾಕಿ ಜಮೀನು; ದಕ್ಷಿಣಕ್ಕೆ : ರಾಮಭೋವಿ ರವರಿಗೆ ಸೇರಿದ ಜಮೀನಿನ ಸರ್ವೆ ನಂ.340 (ಹಳೆ ನಂ.60/42), ಪ್ರಸ್ತುತ ಮಕ್ಕಳ ಹೆಸರಿನಲ್ಲಿ ಆರ್.ಟಿ.ಸಿ. ಇರುತ್ತದೆ.

ಸಹಿ/–ವರಲಿಕ್ಷ್ಮಿ ಎ.ಎಸ್. BA,LLB, ವಕೀಲರು
No. 270,8th Cross, 'G' Block, Ramakrishnanagar, Mysuru-23. Mob: 9986215922

ಸ್ಥಳ: ಮೈಸೂರು, ದಿನಾಂಕ : 05/09/2025

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು (ಪಶ್ಚಿಮ) ರವರ ಕಚೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು–560024, ಇ–ಮೇಲ್– mcchealthofficer@gmail.com

ಮೈ.ಮ.ಪಾ/ಕಾ.ಇಂ(ಪ)/ಟಿ.ಎನ್–42/2024–25, ಕಾ.ಇಂ.(ಪ) ಮೈ.ಮ.ಪಾ. ಮೈಸೂರು, ದಿನಾಂಕ: 15–09–2025.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ದಸರಾ–2025ರ ಪ್ರಯುಕ್ತ ಮೈಸೂರು ನಗರ ಪಾಲಿಕೆಯ ವ್ಯಾಪ್ತಿಯ ಟೌನ್‌ಹಾಲ್‌ನಲ್ಲಿ 03 ತಿಂಗಳ ಅವಧಿಗೆ ಹಾಗೂ ದಸರಾ ನಂತರ 09 ತಿಂಗಳ ಅವಧಿಗೆ ಮಾತ್ರ ತಾತ್ಕಾಲಿಕವಾಗಿ ಪೇ ಅಂಡ್ ಪಾರ್ಕಿಂಗ್ ಮಾಡುವುದನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡಂತೆ ಆಹ್ವಾನಿಸಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್ (https://kppp.karnataka.gov.in) ಮುಖಾಂತರ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಸಂಖ್ಯೆ: 0821–2418814 ರಿಂದ ಮಾಹಿತಿ ಪಡೆಯಬಹುದು. ಈ ಕೆಳಕಂಡ ನಿಗದಿಪಡಿಸಿದ ಇ.ಎಂ.ಡಿ ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು, ಇ.ಎಂ.ಡಿ.ಯು ಟೆಂಡರ್ ನ್ಯಾಯ ಸಮ್ಮತ ಮಾನ್ಯತ ಅವಧಿಗಿಂತ (Validity Period)90 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು.

1) ಟೆಂಡರ್ ಸಲ್ಲಿಸುವ ಗುತ್ತಿಗೆದಾರರುಗಳು ತಮ್ಮ ಗುತ್ತಿಗೆ ರಹದಾರಿ ಪ್ರತಿಯನ್ನು ಹಾಗು ತಮ್ಮ ಅಂಚೆ ವಿಳಾಸ ಮತ್ತು ಮೊಬೈಲ್ ಸ್ಥಿರ ದೂರವಾಣಿಯನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಸೂಚಿಸಿದೆ.
2) ವಿದ್ಯುತ್ ವ್ಯವಸ್ಥೆ ಹಾಗೂ ಇತರೆ ನಿರ್ವಹಣೆ ಕೆಲಸಗಳನ್ನು ಟೆಂಡರ್ ಪಡೆದವರ ನಿರ್ವಹಿಸತಕ್ಕದ್ದು.

ನಗರ ಪಾಲಿಕೆಯಿಂದ ವಾಹನ ನಿಲುಗಡೆಗೆ ನಿಗಧಿಪಡಿಸಲಾದ ದರ

ಕ್ರಮ ಸಂಖ್ಯೆ	ಅವಧಿ (ಗಂಟೆಗಳಲ್ಲಿ)	ದ್ವಿ–ಚಕ್ರ (ರೂ.ಗಳಲ್ಲಿ)	ನಾಲ್ಕು ಚಕ್ರ (ರೂ.ಗಳಲ್ಲಿ)
1.	0–1	5	15
2.	1–3	10	30
3.	3–5	15	45
4.	5–7	20	60
5.	7–9	30	90
6.	9–12	40	120
7.	12 ಗಂಟೆ ಮೇಲ್ಪಟ್ಟು	60	180

ಕ್ರ ಸಂ	ವಿವರ	ಇ.ಎಂ.ಡಿ ಠೇವಣಿ	ಕಾಲಾವಧಿ
1	ಮೈಸೂರು ನಗರ ಪಾಲಿಕೆಯ ವ್ಯಾಪ್ತಿಯ ಟೌನ್‌ಹಾಲ್‌ನಲ್ಲಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಮಾಡುವ ಬಗ್ಗೆ (ಮಲ್ಟಿ ಲೆವಲ್ ಪಾರ್ಕಿಂಗ್ ಬೇಸ್‌ಮೆಂಟ್ –1) (03 ತಿಂಗಳ ಅವಧಿಗೆ ಹಾಗೂ ದಸರಾ ನಂತರ 09 ತಿಂಗಳ ಅವಧಿಗೆ ಮಾತ್ರ)	1,00,000/–	12 ತಿಂಗಳು

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1	ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತವೆ	ದಿನಾಂಕ: 16.09.2025	ಮಧ್ಯಾಹ್ನ 12.00 ಗಂಟೆ ನಂತರ
2	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	ದಿನಾಂಕ: 23.09.2025	ಸಂಜೆ 5.30 ಗಂಟೆ
3	ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ: 24.09.2025	ಸಂಜೆ 5.30 ಗಂಟೆ ನಂತರ

ಸಹಿ/– ಕಾರ್ಯಪಾಲಕ ಅಭಿಯಂತರರು (ಪ)
ವಾಪಾಸಂಇ/ಮೈಸೂರು/ಜಿಲ್ಲಾ ಸಾಮ/969/2025–26 ಮೈಸೂರು ಮಹಾನಗರ ಪಾಲಿಕೆ, ಮೈಸೂರು

6ನೇ ವರ್ಷದ ಸವಿನೆನಪು



ಶ್ರೀ ಟಿ.ಎನ್.ದಾಸೇಗೌಡರವರು

(ನಿ ಉಪನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

ಮರಣ : 16–09–2019

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು:– ಪತ್ನಿ ಬಿ.ಸಿ.ಸರಸ್ವತಿ, ಮಗಳು ಯಶೋದರ.ಟಿ.ಡಿ, ಅಳಿಯ ನಾರಾಯಣ ಸ್ವಾಮಿ ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು ಮತ್ತು ಸ್ನೇಹಿತರು

30x40 DUPLEX HOUSE FOR SALE

- Ready to Move
- MUDA Approved
- Bank Loan Available
- Modern Design & 100% Vastu
- 7kms From Mysore City
- Just 1 kms From Ring Road (Behind VTU College) Sathagalli
- Price:90 Lakhs Negotiable



8310839079

HP

ಕೇವಲ ₹749/ ಪ್ರತಿ ಚದರ ಅಡಿ

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್

ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ಬುಕಿಂಗ್ ಪ್ರಾರಂಭವಾಗಿದೆ

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ

MUDA LIMITS

ಸುಲಭ 4 ಕಂತುಗಳ ಸೌಲಭ್ಯವಿದೆ

30x40 | 30x50
40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಹೈಲ್ಯಾಂಡ್ ಪ್ರಾಪರ್ಟೀಸ್

84948 00300
78290 45252

ಹಸಿರು ನಮ್ಮ ಉಸಿರು

Aquaguard & Kent Water Purifier Sales & Service

9901200444

#319, Near Mega Medical Store, Kuvempunagar



ಗುಜರಾತ್

ಸ್ಯಾರಿ ಡಿಸ್ಕೌಂಟ್ ಮೇಳ

ಫ್ಯಾಕ್ಟರಿ ಸ್ಟಾಕ್ ಕ್ಲಿಯರೆನ್ಸ್

~~600~~ ~~650~~ ~~700~~ ರೂ.ಗಳ ವಿಶೇಷ ಸೀರೆಗಳು

ರಾಜಸ್ಥಾನ್ ಬಾಂಧನಿ ಸ್ಯಾರಿ, ಫ್ಯಾನ್ಸಿ ಕಾಟನ್ ಸ್ಯಾರಿ, ಕ್ರೇಪ್ ಸಿಲ್ಕ್ ಸ್ಯಾರಿ, ಸಿಂಥೆಟಿಕ್ ಸ್ಯಾರಿ, ಕಲ್ಕತ್ತ ಫ್ಯಾನ್ಸಿ ಕಾಟನ್, ಗದ್ವಾಲ್ ಫ್ಯಾನ್ಸಿ ಕಾಟನ್

1 ಸೀರೆ ಕೇವಲ 150 ಮಾತ್ರ

ಕೇವಲ 4 ದಿನಗಳು ಮಾತ್ರ

ಮಹಿಳೆಗೆ ಸೀರೆಯೇ ಆಭರಣ · ಸಿಂಗಲ್ ಪೀಸ್ ಸ್ಟಾಕ್

ದಿನಾಂಕ : 17-9-2025 ಬುಧವಾರದಿಂದ ಪ್ರಾರಂಭ

ಸ್ಥಳ: ಶ್ರೀ ಶಿವಶಕ್ತಿ ಕಲ್ಯಾಣ ಮಂಟಪ

ನಂ. 8&9, ಸಯ್ಯಾಜಿರಾವ್ ರಸ್ತೆ (ಹೈವೆ ಸರ್ಕಲ್ ಹತ್ತಿರ) ಬಂಟೂಬಜಾರ್, ಮೈಸೂರು

ಮೈಸೂರು ಪ್ರಾಂತ್ಯ ಮಟ್ಟದ ಸರ್ಕಾರಿ ಅಧಿಕಾರಿಗಳ ಹಾಗೂ ಇತರೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.) ಮೈಸೂರು.

ನಂ:66, ಹೆಚ್‌ಐಜಿ, ಗ್ರೂಪ್–4, 2ನೇ ಫೇಸ್, ಡಬ್ಬಲ್ ರೋಡ್ ಕೆ.ಹೆಚ್.ಬಿ.ಕಾಲೋನಿ ಹೂಟಗಳ್ಳಿ ಮೈಸೂರು

ನೋಂದಣಿ ಸಂ: ಜೆಆರ್‌ಎಂ/ಎಸ್–7/ಹೆಚ್‌ಎಸ್‌ಜಿಎನ್/ಸಂಖ್ಯೆ41736/13-14, ದಿನಾಂಕ :03-06-2013

13ನೇ ವಾರ್ಷಿಕ ಸಭೆಯ ಆಹ್ವಾನ ಪತ್ರಿಕೆ

ಸಂಘದ ಸರ್ವಸದಸ್ಯರ 13ನೇ ವಾರ್ಷಿಕ ಮಹಾಸಭೆಯನ್ನು ದಿ:24–09–2025ನೇ ಬುಧವಾರ ಬೆಳಿಗ್ಗೆ 11–00 ಗಂಟೆಗೆ ಮೈಸೂರು ನಗರ, ಹೂಟಗಳ್ಳಿ ಕೆ.ಹೆಚ್.ಬಿ ಕಾಲೋನಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಹತ್ತಿರ, ಹೆಚ್.ಐ.ಜಿ, ಗ್ರೂಪ್–2, ನಂ.40/ಎ, ರ ಶ್ರೀ ದರ್ಶಿನಿ ಫಂಕ್ಷನ್ ಹಾಲ್‌ನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ರವಿ ಎಸ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೂ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿದೆ. ಸದರಿ ಆಹ್ವಾನ ಪತ್ರಿಕೆ ತಲುಪದೆ ಇರುವಂತಹ ಸದಸ್ಯರುಗಳು ಇದನ್ನೆ ಆಹ್ವಾನ ಪತ್ರಿಕೆ ಎಂದು ಭಾವಿಸಿ ಸಂಘದ ವಾರ್ಷಿಕ ಮಹಾ ಸಭೆಗೆ ಭಾಗವಹಿಸಲು ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಮೈಸೂರು ಮಿತ್ರ

46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು



ವಿಶ್ವವನ್ನು ಭಾರತದತ್ತ ತಿರುಗಿ ನೋಡುವಂತೆ ಮಾಡಿರುವ ರಾಜಕೀಯ ಮುತ್ಸದ್ದಿ, ಧೀಮಂತ ನಾಯಕ, ದೇಶದ ಬಹುದೊಡ್ಡ ಶಕ್ತಿಯಾಗಿರುವ ಪ್ರಧಾನಿ ಮಂತ್ರಿ

ಶ್ರೀ ನರೇಂದ್ರ ಮೋದಿ ಜೀ ಅವರಿಗೆ

ಹುಟ್ಟುಹಬ್ಬದ ಶುಭಾಶಯಗಳು.



ಎಲ್. ನಾಗೇಂದ್ರ

ಮಾಜಿ ಶಾಸಕರು, ಚಾಮರಾಜ ಕ್ಷೇತ್ರ

ಮೈಸೂರು ನಗರ ಬಿಜೆಪಿ ಅಧ್ಯಕ್ಷರು